ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೨–೧೩ನೇ ಸಾಲಿನ ಎಂ.ಫಿಲ್. ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ಸಂಪ್ರಬಂಧ

"ಶರಣ ಕ್ರಾಂತಿಯ ಹಿನ್ನೆಲೆಯಲ್ಲಿ ಬಂದ ಆಧುನಿಕ ಪ್ರಾತಿನಿಧಿಕ ನಾಟಕಗಳ ತೌಲನಿಕ ಅಧ್ಯಯನ"

ನಿಬಂಧಕಾರರು

ಹೇಮಚಂದ್ರ ಡಿ.ಎ.

ನೋಂದಣಿ ಸಂಖ್ಯೆ : KVTMKS - 00602

ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎಚ್.ಎನ್.ಮಂಜುರಾಜ್

ಸಹ ಪ್ರಾಧ್ಯಾಪಕರು

ಮಹಿಳಾ ಸರ್ಕಾರಿ ಪದವಿ ಕಾಲೇಜು, ಕೃಷ್ಣರಾಜನಗರ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೧೨–೧೩

1056

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೨–೧೩ನೇ ಸಾಲಿನ ಎಂ.ಫಿಲ್. ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ಸಂಪ್ರಬಂಧ

"ಶರಣ ಕ್ರಾಂತಿಯ ಹಿನ್ನೆಲೆಯಲ್ಲಿ ಬಂದ ಆಧುನಿಕ ಪ್ರಾತಿನಿಧಿಕ ನಾಟಕಗಳ ತೌಲನಿಕ ಅಧ್ಯಯನ"

ನಿಬಂಧಕಾರರು

ಹೇಮಚಂದ್ರ ಡಿ.ಎ.

ನೋಂದಣಿ ಸಂಖ್ಯೆ : KVTMKS - 00602

ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎಚ್.ಎನ್.ಮಂಜುರಾಜ್

ಸಹ ಪ್ರಾಧ್ಯಾಪಕರು

ಮಹಿಳಾ ಸರ್ಕಾರಿ ಪದವಿ ಕಾಲೇಜು, ಕೃಷ್ಣರಾಜನಗರ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೧೨–೧೩

ಅಭ್ಯರ್ಥಿಯ ಘೋಷಣಾ ಪತ್ರ

"ಶರಣ ಕ್ರಾಂತಿಯ ಹಿನ್ನೆಲೆಯಲ್ಲಿ ಬಂದ ಆಧುನಿಕ ಪ್ರಾತಿನಿಧಿಕ ನಾಟಕಗಳ ತೌಲನಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್ ಪದವಿಯ ಕ್ರಮಸಂಖ್ಯೆ KVTMKS-00602 ವಿದ್ಯಾರ್ಥಿ ಆದ ನಾನು ೨೦೧೨-೧೩ನೇ ಸಾಲಿನ ಪರೀಕ್ಷೆಗಾಗಿ **ಡಾ. ಎಚ್.ಎನ್.ಮಂಜುರಾಜ್, ಸಹ ಪ್ರಾಧ್ಯಾಪಕರು, ಮಹಿಳಾ ಸರ್ಕಾರಿ ಪದವಿ ಕಾಲೇಜು, ಕೃಷ್ಣರಾಜನಗರ** ಇವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಹೇಮಚಂದ್ರ ಡಿ.ಎ.)

ಸ್ಥಳ: ಮೈಸೂರು

ದಿನಾಂಕ: ೨೨-೦೭-೨೦೧೩

೨೦೧೨-೧೩ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು.

ದೃಢೀಕರಣ ಪ್ರಮಾಣಪತ್ರ

೨೦೧೨–೧೩ನೇ ಸಾಲಿನಲ್ಲಿ ಕ್ರಮಸಂಖ್ಯೆ KVTMKS-00602ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ **ಹೇಮಚಂದ್ರ ಡಿ.ಎ.** ಅವರು ನನ್ನ ಮಾರ್ಗದರ್ಶನದಲ್ಲಿ **"ಶರಣ ಕ್ರಾಂತಿಯ ಹಿನ್ನೆಲೆಯಲ್ಲಿ ಬಂದ ಆಧುನಿಕ ಪ್ರಾತಿನಿಧಿಕ ನಾಟಕಗಳ ತೌಲನಿಕ ಅಧ್ಯಯನ"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ನಿಬಂಧವನ್ನು ಈ ಮೊದಲು ಯಾವುದೇ ಬಗೆಯ ಡಿಪ್ಲೊಮಾ ಅಥವಾ ತತ್ಸಮಾನ ಪದವಿಗಳಿಗಾಗಿ ಯಾವ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೨೨–೦೭–೨೦೧೩

(ಡಾ. ಎಚ್.ಎನ್.ಮಂಜುರಾಜ್)
ಮಾರ್ಗದರ್ಶಕರು & ಸಹ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಪದವಿ ಕಾಲೇಜು
ಕೃಷ್ಣರಾಜನಗರ

Dr. H.N. MANJURAJ
M.A., Ph.D., PDF
Associate Professor of Kannada
Govt. First Grade College For Women
K.R.NAGAR, Mysore Dist.

“ಶರಣ ಕ್ರಾಂತಿಯ ಹಿನ್ನೆಲೆಯಲ್ಲಿ ಬಂದ ಆಧುನಿಕ ಪ್ರಾತಿನಿಧಿಕ ನಾಟಕಗಳ ತೌಲನಿಕ ಅಧ್ಯಯನ”

ಪ ರಿ ವಿ ಡಿ

*****

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

ಪ್ರಾಚೀನ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವಾಗ, ಇಡೀ ಆ ಕಾಲದ ಸಾಹಿತ್ಯದಲ್ಲಿ ಧರ್ಮ ಮತ್ತು ಪ್ರಭುತ್ವಗಳು ಕಲೆ–ಕಲಾವಿದರನ್ನು ನಿಯಂತ್ರಿಸುತ್ತಿದ್ದುದು ಕಂಡುಬರುತ್ತದೆ. ಜೈನಧರ್ಮದ ಪ್ರಭಾವದ ಹಿನ್ನೆಲೆಯಿಂದ ಬಂದ ಪಂಪ, ರನ್ನ, ನಾಗಚಂದ್ರ, ಪೊನ್ನ, ಜನ್ನ ಇವರೇ ಮೊದಲಾದವರು ತಮಗೆ ಆಶ್ರಯ ಕೊಟ್ಟ ಪ್ರಭುತ್ವದ ಮಹತ್ವವನ್ನು ಪ್ರಚುರಗೊಳಿಸುವ ಆಶಯದಿಂದ ತಮ್ಮ ಸಾಹಿತ್ಯಕೃತಿಗಳನ್ನು ರಚಿಸುವಾಗ ತಮ್ಮ ಪ್ರತಿಭೆಯನ್ನು ಪ್ರಭುತ್ವ ಧರ್ಮಗಳ ಚೌಕಟ್ಟಿನೊಳಗೆ ಬಂಧಿಸಿಡಬೇಕಾದ ಅನಿವಾರ್ಯತೆಯ ಸ್ಥಿತಿಯಲ್ಲಿ ಕಾವ್ಯ ರಚನೆ ಮಾಡಿ, ಪಂಡಿತಮಂಡಳಿಯ ಮುಂದೆ ಮಂಡಿಸಿ ಸೈ ಎನಿಸಿಕೊಂಡರು. ಅವರ ಕಾವ್ಯವಸ್ತುವಾಗಲೀ, ಭಾಷೆಯಾಗಲಿ ಸಾಮಾನ್ಯಜನರನ್ನು ಒಳಗೊಳ್ಳಲಿಲ್ಲ. ಸಮಾಜದ ಹಿತದ ದೃಷ್ಟಿಯಿಂದ ಯಾವುದೇ ಮಹತ್ತರವಾದ ಬದಲಾವಣೆಗೂ ಎಡೆಗೊಡುವಂತಿರಲಿಲ್ಲ. ಈ ನಿಟ್ಟಿನಲ್ಲಿ ೧೨ನೇ ಶತಮಾನದಲ್ಲಿ ಹೊಸ ಗಾಳಿಬೀಸಿ, ಬಸವಣ್ಣನವರ ನೇತೃತ್ವದಲ್ಲಿ ರೂಪುಗೊಂಡ ಶರಣ ಚಳವಳಿಯು ಮೊದಲ ಬಾರಿಗೆ ಧರ್ಮವನ್ನು ಪ್ರಭುತ್ವವನ್ನೂ ಒಟ್ಟಿಗೇ ಪ್ರಶ್ನಿಸಿತು.

ಮಹತ್ವ: ಕರ್ನಾಟಕದ ಕಲ್ಯಾಣಕೇಂದ್ರದಲ್ಲಿ ಸಂಭವಿಸಿದ ಸಾಮಾಜಿಕ, ಧಾರ್ಮಿಕ ಸ್ವರೂಪದ ಶರಣಧರ್ಮ ಎನ್ನುವುದು ಅಂದಿನ ಸಮಾಜದ ವಿವಿಧ ಸ್ತರಗಳ ಜನಶಕ್ತಿಯನ್ನು ಮೊತ್ತಮೊದಲ ಬಾರಿಗೆ ಸಂಘಟಿಸಿ ಒಂದು ವೈಚಾರಿಕ ಸ್ಫೋಟವನ್ನು ತಂದ ಅಪೂರ್ವವಾದ ಐತಿಹಾಸಿಕ ಘಟನೆಯಾಗಿದೆ.

ಅದುವರೆಗೂ ಇದ್ದ ವೈದಿಕ ಪರಂಪರೆಯ, ಜಡ್ಡುಗಟ್ಟಿಕೊಂಡು ಸ್ಥಗಿತಗೊಂಡಿದ್ದ ವ್ಯವಸ್ಥೆಯನ್ನು ಬದಲಾಯಿಸಿ ಎಲ್ಲರೂ ಸಮಾನವಾಗಿ ವೈಚಾರಿಕವಾಗಿ ಬದುಕುವುದು ಹೇಗೆ, ಮನುಷ್ಯನನ್ನು ಅವನಿರುವ ಅವ್ಯವಸ್ಥೆಯ ಯಥಾಸ್ಥಿತಿಯಿಂದ ಪಾರುಮಾಡಿ ಆತನನ್ನು ನಿಜವಾದ ಸ್ವತಂತ್ರವಾದ ಮನುಷ್ಯನನ್ನಾಗಿ ಮಾಡುವುದು ಹೇಗೆ ಎಂಬ ಸಾಮಾಜಿಕ ಕಾಳಜಿಗಳಿಂದ ರೂಪುಗೊಂಡಿದ್ದೇ ಶರಣಚಳವಳಿ.

ನಾವಿಂದು ವೈಜ್ಞಾನಿಕವಾಗಿ ೧೨ನೇ ಶತಮಾನದ ಆ ಕಾಲದಿಂದ ಮುಂದುವರಿದಿದ್ದೇವೆ. ಚಂದ್ರಲೋಕವನ್ನು ದಾಟಿ ಸೌರಮಂಡಲದ ರಹಸ್ಯ ತಿಳಿಯುವ ಮಹತ್ವ ಶೋಧನೆ ಬಗ್ಗೆ ಜಾಗತಿಕ ಮಟ್ಟದಲ್ಲಿ ಚಿಂತನೆಯಾಗಿ ಆ ದಿಕ್ಕಿನಲ್ಲಿ

ಮುಂದುವರಿಯುತ್ತಿರುವುದು ಅಮೋಘವಾದ ಸಂಗತಿಯಾಗಿದೆ. **ಇಂತಹ 'ವೈಜ್ಞಾನಿಕಕ್ರಾಂತಿ'ಯ ವಿಚಾರದ ಸಂಶೋಧನೆಯ ಪ್ರಸ್ತುತತೆಯ ಬಗ್ಗೆ ಪ್ರಶ್ನೆಗಳೇಳುವುದ ಸಹಜವೇ.** ಆದರೆ ವೈಜ್ಞಾನಿಕವಾಗಿ ನಮ್ಮ ಅಭಿವೃದ್ಧಿಯ ಬಗ್ಗೆ ಬಡಬಡಾಯಿಸುತ್ತಿರುವ ನಾವು ಆ ಕಾಲಕ್ಕಿಂತ ಆಂತರಿಕವಾಗಿ ಎಷ್ಟು ಮುಂದುವರಿದಿದ್ದೇವೆ? ಎಂದು ಪ್ರಶ್ನೆ ಹಾಕಿಕೊಂಡು ಆತ್ಮಾವಲೋಕ ಮಡಿಕೊಂಡರೆ ಉತ್ತರ ಮೌನವೇ ಆಗುವುದು ವಿಪರ್ಯಾಸವೇ. ಇಂದಿನ ವ್ಯಾವಹಾರಿಕ ಮನೋಧರ್ಮದ ಯುಗದಲ್ಲಿ 'ಅಂತರಂಗಶುದ್ಧಿ'ಯ ಬಗ್ಗೆ ಹೇಳಿದ ಸಮಸಮಾಜದ ದೃಷ್ಟಿಕೋನದಿಂದ ಜಗತ್ತನ್ನೇ ನಿಬ್ಬೆರಗುಗೊಳಿಸುವಂಥ ಆಂದೋಲನಕ್ಕೆ ನಾಂದಿ ಹಾಡಿದಂಥ ೧೨ನೇ ಶತಮಾನದ 'ಶರಣಧರ್ಮ'ದ ಚಳುವಳಿಯ ವಿಷಯವನ್ನು ವಸ್ತುವಾಗಿಸಿಕೊಂಡು ಹಲವು ರೀತಿಯ ಸಾಹಿತ್ಯ ಕಾರ್ಯ ನಡೆಯುತ್ತಲೇ ಇದೆ. ಕಾದಂಬರಿ, ನಾಟಕ, ಕಾವ್ಯ, ಸಂಶೋಧನೆಗಳು ರೂಪುಗೊಂಡಿವೆ; ರೂಪುಗೊಳ್ಳುತ್ತಿವೆ. ಇದೇ ಶರಣಕ್ರಾಂತಿಯ ಅಧ್ಯಯನದ ಅವಶ್ಯಕತೆಯನ್ನು ತಿಳಿಸುತ್ತದೆ.

ವಿಜ್ಞಾನದ ಸವಲತ್ತುಗಳನ್ನು ನಮ್ಮ ಸುಖ, ಸೌಕರ್ಯಗಳಿಗಾಗಿ ಬಳಸಿಕೊಳ್ಳುವುದರಲ್ಲಿ ಆಸಕ್ತಿ ತೋರಿದ ನಾವು ವೈಜ್ಞಾನಿಕ ಮನೋಧರ್ಮವನ್ನು ಬೆಳೆಸಿಕೊಳ್ಳುವ ವಿಚಾರದಲ್ಲಿ ತೋರದೆ ಸಾಂಪ್ರದಾಯಿಕವಾದ ಅನೇಕ ಅವೈಚಾರಿಕ ನಂಬುಗೆಗಳು ನಮ್ಮ ಬದುಕನ್ನು ಆವರಿಸಿಕೊಂಡಿರುವುದನ್ನು ಕಾಣುತ್ತಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡು ಅಳವಡಿಸಿಕೊಂಡಿರುವ ಜಗತ್ತಿನ ದೊಡ್ಡ ದೇಶಗಳಲ್ಲಿ ಭಾರತವೂ ಒಂದಾಗಿದ್ದು ಪ್ರಮುಖವಾದುದಾಗಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಜಾತ್ಯತೀತತೆ, ಸಾಮಾಜಿಕನ್ಯಾಯ ಇತ್ಯಾದಿಗಳನ್ನು ಬದುಕಿನ ಮೂಲಮೌಲ್ಯಗಳೆಂದು ಸಂವಿಧಾನದಲ್ಲಿ ಘೋಷಿಸಿಕೊಂಡರೂ ಆಚರಣೆಗೆ ತರುವಲ್ಲಿ, ನಮ್ಮ ರಾಜಕಾರಣ ವಿಫಲತೆಯನ್ನು ಹೊಂದಿದರೂ, ಸಾಧನೆಯ ಮುಖವಾಡ ಪ್ರದರ್ಶಿಸಿ ಸಾಮಾನ್ಯರನ್ನು ವಂಚಿಸುತ್ತಿರುವ ಪ್ರಕರಣಗಳು ಇಂದು ಜಗಜ್ಜಾಹಿರಾಗಿವೆ.

ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಪರಿಸರ ನಾಶದ ತಲ್ಲಣಗಳು, ರಿಯಲ್‌ಎಸ್ಟೇಟ್ ದಂಧೆಯಿಂದಾಗಿ ಉಂಟಾಗುತ್ತಿರುವ ಕೃಷಿಭೂಮಿಯ ಕ್ಷೀಣತೆ ವೃತ್ತಿಯ ಶ್ರೇಣೀಕರಣ ವ್ಯವಸ್ಥೆಯಲ್ಲಿ ಮೇಲ್ದರ್ಜೆಯವರಿಂದ ಕೆಳದರ್ಜೆಯವರ ಮೇಲೆ ನಡೆಯುತ್ತಿರುವ ಶೋಷಣೆ, ಪ್ರತಿಯಾಗಿ ಕೆಳದರ್ಜೆಯವರ ಕೆಲವು ಪ್ರತೀಕಾರ ಪ್ರಕರಣಗಳು, ಪ್ರತಿಯೊಂದು ಕೆಲಸಕ್ಕೂ ಜಾತಕದ ಮೌಢ್ಯದ ಬೆಂಬತ್ತಿಯೇ ಮುಂದುವರಿಯುವ ಜಾಡ್ಯತೆ, ಮೇಲ್ವರ್ಗದವರಿಂದ ಕೆಳವರ್ಗದವ ಮೇಲಾಗುತ್ತಿರುವ

ಹಲ್ಲೆ, ಶೋಷಣೆಗಳು; ಅಧಿಕಾರಿಗಳ, ರಾಜಕಾರಣಿಗಳ ಭ್ರಷ್ಟಾಚಾರ, ವಿಪರೀತ ಹಣಗಳಿಕೆ, ಅವಶ್ಯಕತೆಗಿಂತ ಅತಿ ಹೆಚ್ಚು ಸಂಪಾದನೆ, ಸಂಗ್ರಹ, ಮಡೆಸ್ನಾನದಂಥ ಅತಿಮೌಢ್ಯಾಚರಣೆ ಇತ್ಯಾದಿಗಳನ್ನು ನೋಡಿದರೆ– ಕಾಯಕತತ್ತ್ವ, ಅಸಂಗ್ರಹತತ್ತ್ವ, ಸಮಸಮಾಜ ತತ್ತ್ವವನ್ನು ಪ್ರತಿಪಾದಿಸಿ ಆಚರಣೆಗೂ ತಂದಿದ್ದ ೧೨ನೇ ಶತಮಾನದ ಶರಣಕ್ರಾಂತಿಯ ತತ್ತ್ವಗಳ ಪ್ರಸ್ತುತದಲ್ಲಿನ ಅನಿವಾರ್ಯತೆಯನ್ನು ಅಲ್ಲಗಳೆಯುವುದು ಮೂರ್ಖತೆಯಾಗದಿರದು. ಹಾಗಾಗಿಯೇ ಶರಣಕ್ರಾಂತಿಯ ಅಧ್ಯಯನದ ಮಹತ್ವವನ್ನು ಅರಿತು ಸಂಪೂರ್ಣ ಶರಣಕ್ರಾಂತಿಯನ್ನೇ ಆಮೂಲಾಗ್ರವಾಗಿ ಅಧ್ಯಯನಕ್ಕಳವಡಿಸುವ ಮಹತ್ಸಾಧನೆಗೆ ಹೋಗದೆ, ಈ ಶರಣಕ್ರಾಂತಿಯ ಹಿನ್ನಲೆಯಿಂದ ಬಂದ ಆಧುನಿಕ ಪ್ರಾತಿನಿಧಿಕ, ನಾಟಕಗಳಾದ ಜಡಭರತರ – ನಾನೇಬಿಜ್ಜಳ, ಪಿ.ಲಂಕೇಶರ – 'ಸಂಕ್ರಾಂತಿ', ಎಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ', ಗಿರೀಶ್‌ಕಾರ್ನಾಡರ 'ತಲೆದಂಡ', ಹಾಗೂ ಚಂದ್ರಶೇಖರ ಕಂಬಾರರ 'ಶಿವರಾತ್ರಿ'– ನಾಟಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ, ಶರಣಕ್ರಾಂತಿಯ ಈ ಕಾಯಕನಿಷ್ಠೆ, ಅಸಂಗ್ರಹತತ್ತ್ವ, ಸಮಸಮಾಜ ತತ್ತ್ವಗಳು ನಿರೂಪಿತಗೊಂಡಿರುವುದನ್ನು ನನ್ನ ಅಧ್ಯಯನಕ್ಕಳವಡಿಸಿಕೊಂಡು ತೊಡಗಿಸಿಕೊಂಡಿದ್ದೇನೆ.

ಈ ದಿನವೂ ನಡೆಯುತ್ತಿರುವ ಅನೇಕ ಮಹತ್ವದ ಚಳವಳಿಗಳಲ್ಲಿ 'ಜಾತಿವಿನಾಶ ಚಳವಳಿಯೂ ಒಂದು. ಇತ್ತೀಚಿನ ಮಹಾನ್‌ವ್ಯಕ್ತಿಗಳು ಎಂದು ನಾವು ಗುರುತಿಸುತ್ತಿರುವ ಗಾಂಧಿ, ಅಂಬೇಡ್ಕರ್, ಲೋಹಿಯಾ ಇತ್ಯಾದಿ ಮಹಾನ್ ವ್ಯಕ್ತಿಗಳ ವಿಚಾರಧಾರೆಯಿಂದ ಸ್ಫೂರ್ತಿಗೊಂಡ ಅನೇಕ ಸಂಘಟನೆಗಳೂ ಹಾಗೂ ಬುದ್ಧಿಜೀವಿ ತಂಡಗಳೂ ಜಾತಿವಿನಾಶ ಆಂದೋಲನಗಳನ್ನು ಹಮ್ಮಿಕೊಂಡಿದ್ದು ಈ ಜಾತಿವಿನಾಶಕ್ಕೆ ಅಂತರ್ಜಾತಿಯ ವಿವಾಹವನ್ನು ಬಹುಮುಖ್ಯಸಾಧನವೆಂದು ಪ್ರೋತ್ಸಾಹಿಸುತ್ತಿವೆ. ಈ ನಿಟ್ಟಿನಲ್ಲಿ ೧೨ನೇ ಶತಮಾನದಷ್ಟು ಹಿಂದೆಯೇ ಬಸವಾದಿಶರಣರು ಈ ದಿಕ್ಕಿನಲ್ಲಿ ನಡೆಯಿಸಿದ ಪ್ರಯತ್ನಗಳೂ ಅವರ ವಿಚಾರಗಳೂ ಹಾಗೂ ಪ್ರಯೋಗಗಳೂ ಎಷ್ಟು ಮಹತ್ವದವುಗಳೆಂದು ಇಂದಿನ ಸುಧಾರಕರೂ, ಚಳುವಳಿಗಾರರು ಗಮನಿಸುವುದು ಅಗತ್ಯವಾಗಿದೆ.

ಉದ್ದೇಶ: ಜಗತ್ತಿನಲ್ಲಿ ನಡೆದ ಫ್ರಾನ್ಸ್‌ಕ್ರಾಂತಿ, ರಷ್ಯನ್‌ಕ್ರಾಂತಿಗಳಿಗಿಂತಲೂ ಮಹತ್ವವಾದ ಸಮಗ್ರಕ್ರಾಂತಿ (Total revolution) ಎಂದು ಗುರುತಿಸಿಕೊಂಡು ಜಾಗತಿಕ ಇತಿಹಾಸದಲ್ಲೇ ಒಂದು ಛಾಪು ಮೂಡಿಸಿರುವ 'ಶರಣಕ್ರಾಂತಿ'ಯ ತತ್ತ್ವಗಳು ವೈಚಾರಿಕ ನಿಲುವುಗಳು, ಆದರ್ಶಸಿದ್ಧಾಂತಗಳು ಇವತ್ತಿಗೂ, ಯಾವತ್ತಿಗೂ ಪ್ರಸ್ತುತವಾಗಬಹುದಾದ

ಮಹತ್ತ್ವವನ್ನು ಪಡೆದುಕೊಂಡಿವೆ. ಇಂತಹ ಮಹತ್ವಪೂರ್ಣವಾದ ಶರಣಚಳವಳಿಯ ಹಿನ್ನೆಲೆಯಲ್ಲಿ ಹರಿಹರನಿಂದ ಇತ್ತೀಚಿನ ಎಚ್.ಎಸ್.ಶಿವಪ್ರಕಾಶ್, ಚಂದ್ರಶೇಖರ ಕಂಬಾರರವರೆಗೆ ಕಾವ್ಯ, ನಾಟಕ ಸಂಶೋಧನೆ, ಕಾದಂಬರಿಗಳು ಕನ್ನಡಸಾಹಿತ್ಯದಲ್ಲಿ ನಮ್ಮ ಸಾಹಿತಿಗಳ ಪ್ರತಿಭಾಮೂಸೆಯಿಂದ ಹೊರಬಂದಿದ್ದು, 'ಶರಣಕ್ರಾಂತಿ'ಯ ಹಿನ್ನೆಲೆಯಲ್ಲಿ ಬಂದ ಸಾಹಿತ್ಯರಾಶಿ ಅಗಾಧವಾಗಿಯೇ ಇದೆ. ಇದರಲ್ಲಿ ನಾನು ಹೊಸಗನ್ನಡದ ಪ್ರಾತಿನಿಧಿಕ ಐದು ನಾಟಕಗಳಲ್ಲಿ – ನಾನೇ ಬಿಜ್ಜಳ, ಸಂಕ್ರಾಂತಿ, ಮಹಾಚೈತ್ರ, ತಲೆದಂಡ ಶಿವರಾತ್ರಿ – ಶರಣಕ್ರಾಂತಿಯ ತತ್ತ್ವಾದರ್ಶಗಳು ಎಷ್ಟರಮಟ್ಟಿಗೆ ನಿರೂಪಿತಗೊಂಡಿವೆ. ಐತಿಹಾಸಿಕ ಸಂಗತಿಗಳನ್ನು ಅಳವಡಿಸಿಕೊಂಡು ಯಾವರೀತಿ ಪ್ರಸ್ತುತತೆಗೆ ಅನ್ವಯಿಸಿಕೊಂಡಿದ್ದಾರೆ, ಬಸವಣ್ಣನ ಪಾತ್ರ ಈ ನಾಟಕಗಳಲ್ಲಿ ನಿರೂಪಿತಗೊಂಡಿರುವ ಪರಿ ಈ ಹಿನ್ನೆಲೆಯಲ್ಲಿ ಪ್ರಸ್ತುತತೆಯ ಭ್ರಷ್ಟಾಚಾರ ಮೌಢ್ಯಾಚರಣೆ, ಲೈಂಗಿಕ ದೌರ್ಜನ್ಯ, ದುರ್ಬಲರ ಶೋಷಣೆ, ಅತಿಸಂಗ್ರಹ, ಇದಕ್ಕೆ ಪ್ರತಿಯಾಗಿ ಹೆಚ್ಚುತ್ತಿರುವ ಬಡತನ, ಆಹಾರದ ಸಮಸ್ಯೆ, ನಿರುದ್ಯೋಗದಂಥ ಕಿತ್ತುತಿನ್ನುತ್ತಿರುವ ಸಮಸ್ಯೆಗಳ ಕಾಲದಲ್ಲಿ ೧೨ನೇ ಶತಮಾನದ ಬಸವಾದಿಗಳ ಸಿದ್ಧಾಂತಗಳು ಪ್ರಸ್ತುತವಾಗಬಹುದಾದ್ದನ್ನು ಈ ನಾಟಕಗಳ ಅಧ್ಯಯನದ ಮೂಲಕ ತೋರಿಸಿಕೊಡುವ ಉದ್ದೇಶದಿಂದ ನನ್ನ ಅಧ್ಯಯನಕ್ಕೆ ತೊಡಗಿಸಿಕೊಂಡಿದ್ದೇನೆ. ಜೊತೆಗೆ ಪ್ರಭುತ್ವದ ಪ್ರತಿನಿಧಿಯಾಗಿ ಬಿಜ್ಜಳನ ಪಾತ್ರ. ಜನಸಾಮಾನ್ಯರ ಅಂದಿನ ಬದುಕಿನ ಆದರ್ಶಗಳು ಇಂದಿನ ಬದುಕಿಗೆ ಅನಿವಾರ್ಯವಾಗುವಂತಹ ಬಗೆಯನ್ನು ಅರ್ಥೈಸಿಕೊಡುವ ಉದ್ದೇಶದಿಂದ ಈ ವಿಷಯದ ಅಧ್ಯಯನ ಮಹತ್ವದ್ದೆಂದು ಭಾವಿಸಿಕೊಂಡಿದ್ದೇನೆ.

೧೨ನೇ ಶತಮಾನದಲ್ಲಿ ಬಸವಣ್ಣನ ಆಶಯಗಳು ಕ್ರಾಂತಿಕಾರಿಯಾಗಿ ಬದಲಾಗಿ ಉಂಟಾದ ಪರಿಣಾಮ, ತನ್ನ ಹತ್ತಿರದ ಸಮಕಾಲೀನ ಅವಧಿಯಲ್ಲಿ ರಚಿತವಾದ ಸಾಹಿತ್ಯದಲ್ಲೇ ಪವಾಡಪುರುಷನಾಗಿ ಚಿತ್ರಿತನಾದ ಬಸವಣ್ಣ ಈ ಐದು ಲೇಖಕರಲ್ಲಿ ಚಿತ್ರಿತಗೊಂಡಿರುವ ಬಗೆಯನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಿದ್ದು ಆ ನಿಟ್ಟಿನಲ್ಲಿ ಪ್ರಯತ್ನಿಸಲಾಗಿದೆ.

ವ್ಯಾಪ್ತಿ: ಶರಣಚಳವಳಿಯ ಹಿನ್ನೆಲೆಯಲ್ಲಿ ಬಂದ ಆಧುನಿಕ ಕನ್ನಡ ನಾಟಕಗಳಲ್ಲಿ ಮಹತ್ವದವುಗಳೆಂದು ಗುರುತಿಸಲ್ಪಡುತ್ತಿರುವ ಈ ಐದು ಪ್ರಾತಿನಿಧಿಕ ನಾಟಕಗಳು ಉದ್ದೇಶಿತ ಅಧ್ಯಯನಕ್ಕೆ ಆರಿಸಿಕೊಂಡಿರುವ ಕೃತಿಗಳು. ಹೆಚ್ಚುಕಡಿಮೆ ಒಂದೇ ಕಾಲಘಟ್ಟದಲ್ಲಿ ಸೃಜಿಸಿದಂಥ ಈ ನಾಟಕಗಳ ಲೇಖಕರು ಒಂದೇ ವಸ್ತುವನ್ನು

ಇಟ್ಟುಕೊಂಡು ಹೇಗೆ ವಿಭಿನ್ನ ನೆಲೆಯಲ್ಲಿ ನೋಡಿದ್ದಾರೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗುವುದು ಉದಾಹರಣೆಗೆ 'ನಾನೇ ಬಿಜ್ಜಳ' ನಾಟಕದಲ್ಲಿ ಶಾಲಾವೇಳೆಯಲ್ಲಿ ಬಿಜ್ಜಳನ ಪಾತ್ರಧರಿಸಿದ್ದವನೇ 'ನಾನೇ ಬಿಜ್ಜಳ' ಎಂದು ಮನೋರೋಗಿಯಂತಿದ್ದರೂ ಅಂದಿನ ಬಿಜ್ಜಳನ ವ್ಯಕ್ತಿತ್ವವನ್ನು ಪ್ರದರ್ಶಿಸುವುದು, 'ಮಹಾಚೈತ್ರ' ನಾಟಕದಲ್ಲಿ ಬಸವಣ್ಣನ ಪಾತ್ರ ತೆರೆಯ ಮೇಲೆ ಬರದೆ ಬೇರೆ ಪಾತ್ರಗಳ ಮೂಲಕ ಅನಾವರಣಗೊಳ್ಳುವುದು, ಇನ್ನು 'ಸಂಕ್ರಾಂತಿ' ನಾಟಕಕ್ಕೆ ೧೨ನೇ ಶತಮಾನದ ಚರಿತ್ರೆ ಕೇವಲ ನೆಪಮಾತ್ರವಾಗಿದ್ದು ಬಸವಣ್ಣನ ಕತೆ ಒಂದು ಸ್ಥೂಲ ಹಿನ್ನೆಲೆ ಮಾತ್ರವಾಗಿರುವುದು, 'ಶಿವರಾತ್ರಿ' ನಾಟಕದಲ್ಲಿ ಕೊಲೆ ಮಾಡಲು ಬಂದ ಕಳ್ಳ ಚಿಕ್ಕಯ್ಯ ಬಸವಣ್ಣನ ವ್ಯಕ್ತಿತ್ವದ ಪ್ರಭಾವದಿಂದ ಶರಣನಾಗಿ ಬದಲಾಗುವುದು. 'ಅರಮನೆ–ಮಹಾಮನೆಗಳ' ಐತಿಹಾಸಿಕ ಪ್ರಸ್ತುತತೆ, ತಲೆದಂಡದಲ್ಲಿ– ಬಸವಣ್ಣನ ಅಹಿಂಸೆ ಸರ್ವಧರ್ಮ ಸಮಾನ ಮನೋಭಾವ ಪ್ರಜಾಪ್ರಭುತ್ವ– ಇವೆಲ್ಲ ಗಾಂಧೀಜಿ ತತ್ತ್ವಗಳೂ ಆಗಿದ್ದು, ಬಸವಾದಿ ಶರಣರ ಪ್ರೇರಣೆ ಇವತ್ತಿನ ಸುಧಾರಕರ ಮೇಲೂ ಆಗುತ್ತಿರುವುದನ್ನು ಬಿಂಬಿಸಿರುವುದನ್ನು ನೋಡಬಹುದು. –ಹೀಗೆ ಈ ಐದೂ ನಾಟಕಗಳಲ್ಲಿ ಒಂದು ಐತಿಹಾಸಿಕ ಘಟನಾವಳಿ ವಿವಿಧ ಆಯಾಮಗಳಲ್ಲಿ ರೂಪುತಾಳಿದೆ. ಇವುಗಳ ಅಧ್ಯಯನದಿಂದ ಶರಣ ಕ್ರಾಂತಿಯ ಆಶಯಗಳನ್ನು ಪ್ರಸ್ತುತಕ್ಕೆ ಅನ್ವಯಗೊಳಿಸಿರುವ ಕಲಾಭಿವ್ಯಕ್ತಿಯನ್ನು ಕುರಿತು ಮತ್ತು ಪ್ರಸ್ತುತತೆಗೆ ಅದರ ಅಗತ್ಯತೆಯನ್ನು ಕುರಿತು ಚರ್ಚಿಸಲು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಪ್ರಯತ್ನಿಸಿದ್ದೇನೆ. ರಂಗಭೂಮಿಯಲ್ಲಿ ಈ ಐದೂ ನಾಟಕಗಳು ಯಶಸ್ವಿಯಾಗಿರುವ ಬಗ್ಗೆ, ಯಶಸ್ವಿಯಾಗಬೇಕಾದ ಬಗ್ಗೆ ವಿಚಾರಿಸಲಾಗಿದೆ. ಈ ಸಂಪ್ರಬಂದದ ಪ್ರತೀ ಅಧ್ಯಾಯದ ಕೊನೆಯಲ್ಲಿ ಪರಾಮರ್ಶನಕ್ಕೆ ಸಂಬಂಧಪಟ್ಟ ಟಿಪ್ಪಣಿಗಳನ್ನು ನೀಡಲಾಗಿದೆ.

****

ಅಧ್ಯಾಯ – ೨

ಶರಣ ಚಳವಳಿ : ಒಂದು ಸಮೀಕ್ಷೆ

ವೈದಿಕಧರ್ಮದ ಚಾತುರ್ವರ್ಣಗಳ ಚಕ್ರವ್ಯೂಹದ ಬಂಧನದಲ್ಲಿ ಸಿಕ್ಕಿಕೊಂಡು ನಲುಗುತ್ತಿದ್ದ ಸಾಮಾನ್ಯಜನರಿಗೆ ಬೌದ್ಧ, ಜೈನಧರ್ಮಗಳು ನೆಮ್ಮದಿಯ ಬದುಕನ್ನು ಸಾರ್ಥಕವಾಗಿ ರೂಪಿಸಿಕೊಡುವಲ್ಲಿ ಪ್ರಾಯೋಗಿಕವಾಗಿ ವಿಫಲವಾಗಿದ್ದ ಸಂಧರ್ಭದಲ್ಲಿ ದಕ್ಷಿಣಭಾರತದ ತಮಿಳುನಾಡಿನಲ್ಲಿ ಅರವತ್ತೂರು ಜನ ಶಿವಭಕ್ತರು ಮೇಲು–ಕೀಳು ಎಂಬ ಪಕ್ಷಪಾತ, ಹೆಣ್ಣು–ಗಂಡೆಂಬ ಲಿಂಗತಾರತಮ್ಯ, ಬಡವ–ಬಲ್ಲಿದನೆಂಬ ವರ್ಗವೈಷಮ್ಯ, ಕರಿಯ, ಬಿಳಿಯರೆಂಬ ವರ್ಣ ವೈರುಧ್ಯ, ವೃತ್ತಿ ತಾರತಮ್ಯ, ಜಾತಿ=ಮತಗಳೆಂಬ ಜೀವವಿರೋಧಿ ಧೋರಣೆಗಳಿಲ್ಲದೆ ಯಾರು ಬೇಕಾದರೂ ತಮ್ಮ ಅಚಲವಾದ ನಿಷ್ಠೆಯುಳ್ಳ ಭಕ್ತಿಯಿಂದ ಪರಮಾತ್ಮನ ಸಾಕ್ಷಾತ್ಕಾರ ಪಡೆಯಬಹುದೆಂದು ಪ್ರತಿಪಾದಿಸಿದ ಹೆಗ್ಗಳಿಕೆಗೆ ಸಾಕ್ಷಿಯಾಗಿದ್ದರು. ಈ ಸತ್ತ್ವಶಾಲಿ ತತ್ತ್ವ ಇಡೀ ದಕ್ಷಿಣಭಾರತದಲ್ಲಿ ಆವರಿಸುತ್ತಿರುವ ಹೊತ್ತಿನಲ್ಲಿ – "ಕರ್ನಾಟಕದಲ್ಲಿ ಸಮಾಜಕ್ಕೆ ಬಂದಳಿಕೆಯಂತೆ ಅಂಟಿಕೊಂಡು ಬಂದಿದ್ದ ಅಂಧಶ್ರದ್ಧೆಯ ಕೊಳೆಯು ಹಬ್ಬಿತ್ತು. ಧರ್ಮವೆಂಬುದು ಉಕ್ಕಿನ ಕೋಟೆಯಂತಾಗಿ ಸಮಾಜ ಹೋಳುಹೋಳಾಗಿತ್ತು. ಇಂಥ ಬಂಧನಗಳನ್ನೊಡೆದು ಪರಿಶುದ್ಧವಾದ ಧರ್ಮ ಫಲಗಳನ್ನು ಉಣಬಡಿಸಬಲ್ಲ ಮಹಾತ್ಮರ ಬರವನ್ನು ಸಾಮಾನ್ಯ ಜನತೆ ಕಾದುಕುಳಿತ್ತಿತ್ತು. ಆಗ ಕನ್ನಡನಾಡಿನ ಜನಜೀವನದ ಕತ್ತಲೆಯಲ್ಲಿ ಬೆಳಕುಮೂಡಿದಂತೆ ಬಸವೇಶ್ವರರ ಉದಯವಾಯಿತು."[೧]

ಬಸವಣ್ಣನ ಮುಂದಾಳತ್ವದಲ್ಲಿ ನಡೆದ ಶರಣಚಳವಳಿಯು ಭಾರತದ ಹಿಂದೆಂದೂ ಕಾಣದಿದ್ದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಪರಿವರ್ತನೆಗೆ ಹೊಸದೊಂದು ಹೆದ್ದಾರಿಯನ್ನು ನಿರ್ಮಿಸಿತು. ನಮ್ಮ ಈ ಶರಣಚಳವಳಿಯು ತಮಿಳುನಾಡಿನ ಶಿವಭಕ್ತರಿಂದ ಪ್ರೇರಿತವಾದರೂ ಅದನ್ನೂ ಮೀರಿದ ದಿಟ್ಟಹೆಜ್ಜೆಗಳನ್ನಿಟ್ಟು ಅದಕಿಂತಲೂ ಅತಿಶಯವಾದ ಸಾಧನೆಗೆ ಕಾರಣವಾಯಿತು. ಮಹೋನ್ನತ ಶಕ್ತಿಯಾಗಿ ಆವಿರ್ಭವಿಸಿತು.

ಶರಣರು ಯಾ ವಚನಕಾರರು ಬಸವಣ್ಣನ ವ್ಯಕ್ತಿ ಕೇಂದ್ರದಲ್ಲಿ ಸಂಘಟಿತರಾಗಿ 'ತಮಂಧಘನ'ವಾದ ಅಂದಿನ ಆವರಣದಲ್ಲಿ ಒಂದು ವಿಚಾರದ ದೀಪಾವಳಿಯನ್ನೇ ತೆರೆದರು. ಇವರ ವಿಚಾರದೀಪಿಕೆ ಪರಂಪರೆ, ಧರ್ಮ, ದೇವರು, ಲಿಂಗಭೇದ, ವೃತ್ತಿ

ತಾರತಮ್ಯ, ಹಾಗೂ ಸುತ್ತಣ ಸಾಮಾಜಿಕ ಪರಿಸರದ ಮೇಲೆಲ್ಲಾ ಬೆಳಕು ಬೀರಿದ್ದು ಇಂದಿಗೂ ಪ್ರಸ್ತುತ.

೨.೧. ಪರಂಪರೆ ಮತ್ತು ಶರಣಚಳವಳಿ: ಸ್ವತಂತ್ರವಾದ ವಿಚಾರಶಕ್ತಿಯನ್ನು ಬೆಳೆಸಿಕೊಳ್ಳುವವರು ಮಾಡುವ, ಮಾಡಬೇಕಾದ ಮೊದಲ ಕೆಲಸವೆಂದರೆ ಯಾವ ವೈಚಾರಿಕ ಸಿದ್ಧಸಂಪ್ರದಾಯದಲ್ಲಿ ನಿಂತು ಅದುವರೆಗೂ ಎಲ್ಲರೂ ಯೋಚನೆ ಮಾಡುತ್ತಾ ಬಂದಿದ್ದಾರೋ ಅದನ್ನು ಅದರ ಪ್ರಭಾವವನ್ನು ನಿರಾಕರಿಸಿ ತಮ್ಮದೇ ಆದ ನೆಲೆಯಲ್ಲಿ ನಿಲ್ಲುವುದು. "ವಚಕಾರರ ವೈಚಾರಿಕತೆಯಲ್ಲಿ ಬಹುಮುಖ್ಯವಾದ ಸಂಗತಿಯೆಂದರೆ ಪರಂಪರಾಗತವಾದ ವೈಚಾರಿಕತೆಗೆ ಹಿನ್ನೆಲೆಯಾಗಿದ್ದ ವೇದಶಾಸ್ತ್ರ ಆಗಮಗಳನ್ನು ನಿರಾಕರಿಸಿದ್ದು."[೨] ಕೇವಲ ವಿಚಾರಪರಂಪರೆಯ ತಿರಸ್ಕಾರ ಮನೋಧರ್ಮದಿಂದ ಯಾರೂ ವಿಚಾರವಾದಿಗಳೆನ್ನಿಸಿಕೊಳ್ಳುವುದಿಲ್ಲ. ಅದರಂತೆ ಶರಣರಿಗೆ ತಮ್ಮ ಹಿಂದಿನ ವೇದಶಾಸ್ತ್ರ ಪುರಾಣಗಳ ಪರಿಚಯವಿತ್ತು. ಅದು ಈ ದೇಶದ ಸಾಮಾಜಿಕ ಜೀವನದಲ್ಲಿ ತಂದ ಏರುಪೇರುಗಳು, ಅದರ ದೋಷಗಳು, ಇತಿಮಿತಿಗಳನ್ನು ಬಲ್ಲವರಾಗಿದ್ದರು. ಹಾಗಾಗಿಯೇ ವಿಚಾರಪೂರ್ವಕವಾಗಿಯೇ ನಿರಾಕರಿಸಿದರು.

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನ್ನಿಕ್ಕುವೆ,
ತರ್ಕದ ಬೆನ್ನಬಾರನೆತ್ತುವೆ, ಆಗಮದ ಮೂಗಕೊಯ್ಯುವೆ ನೋಡಯ್ಯ

ಎಂದು ಬಸವಣ್ಣನವರು ಪರಂಪರೆಗೆ ಹಾಕಿದ ಸವಾಲಿನಲ್ಲಿ ವಿಚಾರಪೂರ್ವಕ ಒರೆಗೆ ಹಚ್ಚಿಯೇ ನಿರಾಕರಿಸಿರುವುದು ಕಂಡುಬರುತ್ತದೆ.

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ
ಪೂಜೆಯೆಂಬುದು ತೋರುಂಬ ಲಾಭ

ಎಂದು ಇಡೀ ವೇದ, ಪುರಾಣ, ಶಾಸ್ತ್ರಗಳೆಲ್ಲವೂ ಹೇಗೆ ವ್ಯರ್ಥವೆಂದು ಸಿದ್ಧಾಂತ-ಗೊಳಿಸಿದರು, ಅಲ್ಲಮಪ್ರಭುಗಳು. ಅಕ್ಕಮಹಾದೇವಿಯು ಇದಕ್ಕೆ ಸಮರ್ಥನೆಯೆಂಬಂತೆ "ವೇದಶಾಸ್ತ್ರ ಪುರಾಣಾಗಮಗಳೆಂಬ ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿರೋ" ಎಂದು ಹೇಳಿ ವೇದ ಶಾಸ್ತ್ರ ಪುರಾಣ ಆಗಮಗಳ ನಿರರ್ಥಕತೆಯನ್ನು ಘೋಷಿಸಿದಳು.

ವೇದೋಕ್ತವಾದ ಹಿಂದೂ ಧರ್ಮ, ತನ್ನ ವರ್ಣವ್ಯವಸ್ಥೆಯಿಂದ ಮಾನವರಲ್ಲಿ ಶ್ರೇಷ್ಠ-ಕನಿಷ್ಠರೆಂಬ ತಾರತಮ್ಯವನ್ನು ಕಲ್ಪಿಸುತ್ತಾ ಯಜ್ಞ-ಯಾಗಗಳಿಂದ ಪ್ರಾಣಿ-

ವಧೆಯಂಥ ಮೌಢ್ಯತೆಯನ್ನು ಸಮರ್ಥಿಸುತ್ತಾ ಸಾಮಾನ್ಯರನ್ನು ವಂಚಿಸುತ್ತಿದ್ದುದನ್ನು ವಚನಕಾರರು ತಿರಸ್ಕರಿಸಿ, ವ್ಯಕ್ತಿಯ ಆಧ್ಯಾತ್ಮಿಕಾನುಭವ ಎನ್ನುವುದು, ವೇದಶಾಸ್ತ್ರಗಳ ಪಠನದಿಂದ ಪರಂಪರಾಗತವಾದ ವಿಚಾರ ಮತ್ತು ನಂಬಿಕೆಗಳನ್ನು ಒಪ್ಪಿಕೊಳ್ಳುವುದರಿಂದ ಲಭಿಸುವಂಥದಲ್ಲ ಎಂಬುದನ್ನು ಕಂಡುಕೊಂಡು ಅನುಭಾವ ಎನ್ನುವುದು ಅಂತರಂಗದ ರತ್ನ ಕಾಣಿರೋ' ಎಂದು ಪ್ರತಿಪಾದಿಸಿದರು.

ಸನ್ಯಾಸ, ತಪಸ್ಸು– ಇವುಗಳೇ ಆಧ್ಯಾತ್ಮಿಕ ಸಾಧನೆಗೆ ಇರುವ ದಾರಿ ಎಂಬ ಪರಂಪರಾಗತ ಭಾವನೆಯನ್ನು ಶರಣರು ವಿಮರ್ಶೆಯ ಒರೆಗೆ ಹಚ್ಚಿ, ಸನ್ಯಾಸ ಎನ್ನುವುದು ಸಂಸಾರವನ್ನು ತೊರೆದು, ಸರ್ವಸಂಗಪರಿತ್ಯಾಗಿಯಾಗಿ ಕಾಡಿಗೆ ಹೋಗಿ ದೇಹದಂಡನೆ ಮಾಡುವುದಲ್ಲ. ಅದೊಂದು 'ಚಿತ್ತಸಮಾಧಾನಸ್ಥಿತಿ' ಎಂಬುದನ್ನು ಕಂಡುಕೊಂಡರು.

ಮರವೇಕೋ ಪರ್ವತವೇಕೋ
ಜನವೇಕೋ ನಿರ್ಜನವೇಕೋ
ಚಿತ್ತಸಮಾಧಾನ ಉಳ್ಳ ಶರಣಂಗೆ?

ಎಂಬುದು ಪರಂಪರಾಗತವಾದ ಸನ್ಯಾಸ ತಪಸ್ಸಿಗೆ ಸಂಬಂಧಿಸಿದಂತೆ ಶರಣರ ಪ್ರಶ್ನೆಯಾಗಿದೆ. ತಪಸ್ಸಿನ ಹೆಸರಿನಲ್ಲಿ ದೇಹದಂಡನೆ ಮಾಡುವುವವರನ್ನು ಕುರಿತು 'ಹುತ್ತವಬಡಿದಂಡೆ ಹಾವು ಸಾಯಬಲ್ಲುದೆ ಅಯ್ಯ'? ಎಂದು ಒಳಗಿದ್ದ ವಿಷತುಂಬಿಕೊಂಡ ಹಾವು– ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರ– ಹಾಗೇ ಇದ್ದರೂ ಕೇವಲ ಹುತ್ತವನ್ನು ಬಡಿಯುವಂತೆ ದೇಹದಂಡನೆ ಮಾಡುವ ವ್ಯರ್ಥ ಪ್ರಯತ್ನವನ್ನು ನಿರಾಕರಿಸುವ ಮೂಲಕ ಪರಂಪರಾಗತವಾದ ಮೌಢ್ಯನಂಬಿಕೆಗಳಿಗೆ ವೈಚಾರಿಕತೆಯ ವೈದ್ಯ ಮಾಡಹೊರಟರು.

"ಬಸವಣ್ಣ ಇಂದಿನ ಯುಗದ ಫ್ರಾಯಿಡ್ ಮತ್ತು ಯೂಂಗ್‌ರನ್ನು ಮೀರಿದ ಮಹಾನ್ ಮನಃಶಾಸ್ತ್ರಜ್ಞ, ಮನೋವಿಜ್ಞಾನಿ, 'ಇಂದ್ರಿಯನಿಗ್ರಹವ ಮಾಡಿದಡೆ ಹೊಂದುವವವು ದೋಷಂಗಳು ಎಂದು ಹೇಳಿದರೆ"[3] ಪರಂಪರಾಗತವಾಗಿ ಬಂದ ಪುರೋಹಿತಶಾಹಿಯನ್ನೂ ಶರಣ ಚಳುವಳಿ ವಿರೋಧಿಸಿತು.

"ತಾನುಂಬ ಊಟವನು, ತನ್ನಾಶ್ರಯದ ರತಿಸುಖವನು'
ತಾ ಮಾಡಬೇಕಲ್ಲದೇ ಬೇರೆ ಮತ್ತೊಬ್ಬರ ಕೈಯಲ್ಲಿ
ಮಾಡಿಸಲುಂಟೆ"? ಎಂದು ಛೇಡಿಸುತ್ತಾರೆ.

“ಬಸವಣ್ಣ ಪುರೋಹಿತಶಾಹಿ ಹೋಗಬೇಕೆಂದರು, ಕುವೆಂಪೂ ಸಹ ಇದನ್ನೇ ಹೇಳಿದರು. ವಿವೇಕನಂದರೂ ಹೇಳಿದರು”[೪]

ಇನ್ನು ಇಹ-ಪರಗಳ ಕುರಿತ ಪರಂಪರಾಗತವಾದ ಭಾವನೆಯನ್ನೂ ಚಿಕಿತ್ಸೆಗೆ ಗುರಿಪಡಿಸಿದರು. “ಇಹಲೋಕದ ಕರ್ಮಗಳನ್ನು ಮಾಡುತ್ತಲೇ ನೂರುವರ್ಷಗಳ ಕಾಲ ಬದುಕೋಣ ‘ನೂರು ಶರದ್ ಋತುಗಳನ್ನು ನೋಡೋಣ’ ಎಂಬ ಉಪನಿಷತ್ ಕಾಲದ ಜೀವನ ಪ್ರೀತಿ ಬರಬರುತ್ತಾ ಈ ಲೋಕವನ್ನು ತಿರಸ್ಕರಿಸುವ, ಸ್ವರ್ಗವನ್ನು ಬಯಸುವ ಒಂದು ಪ್ರವೃತ್ತಿಯಾಗಿ, ಇಹದ ಬದುಕನ್ನು ದ್ವಂದ್ವದ ಗೊಂದಲಕ್ಕೆ ಸಿಕ್ಕಿಸಿತು. ಇದು ಎಷ್ಟು ದೂರ ಬಂತೆಂದರೆ ‘ಇಹ’ದ ಬದುಕೇನಿದ್ದರೂ ಅನಿಷ್ಟ, ಅಶಾಶ್ವತ, ಪರವೆಂಬುದೇ ಮನುಷ್ಯನ ಬದುಕಿನ ಗುರಿ; ಇಹದ ಸಮಸ್ತವೂ ಆ ‘ಪರ’ಕ್ಕಾಗಿ ಮಾಡಿಕೊಳ್ಳುವ ಪೂರ್ವಸಿದ್ಧತೆ ಎಂಬ ಜೀವನ ವಿಮುಖ ಧೋರಣೆಯಾಯಿತು. ಈ ಭಾವನೆಯನ್ನು ಬೌದ್ಧ, ಜೈನ, ದರ್ಮಗಳೂ ತಕ್ಕಷ್ಟು ಪುಷ್ಟಿಗೊಳಿಸಿವೆ ಎಂಬುದರಲ್ಲಿ ಸಂಶಯವಿಲ್ಲ”[೫] ‘ಅಲ್ಲಿದೆ ನಮ್ಮ ಮನೆ ಇಲ್ಲಿ ಬಂದೆ ಸುಮ್ಮನೆ’ ‘ಮನುಜಶರೀರವಿದೇನು ಸುಖ’ – ಇಂಥ ವೈಷ್ಣವ ಕೀರ್ತನೆಗಳಲ್ಲೂ ಮುಂದುವರಿದಿದ್ದು, ‘ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಿಕೊಳ್ಳದಿರಿ ಹುಚ್ಚಪ್ಪಗಳಿರಾ’, ‘ಈಸಬೇಕು ಇದ್ದು ಜೈಸಬೇಕು’ ಎಂಬ ಕೆಲವು ಕಡೆ ಬದುಕಿನ ಪ್ರೀತಿಯೂ ಇರುವುದು ಅಲ್ಲಲ್ಲಿ ಕಂಡುಬರುತ್ತದೆ. ಆದರೆ ಶರಣಕ್ರಾಂತಿ ಸಂಪೂರ್ಣವಾಗಿ ಇಹದ ತಿರಸ್ಕಾರ ಭಾವನೆಯನ್ನು ನಿರಾಕರಿಸಿ ‘ಇಹ-ಪರ’ಗಳ ಸಮನ್ವಯವನ್ನು ಸಾಧಿಸಿದರು.

‘ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದ ಬಯಸುವವರು
ವೀರರೂ ಅಲ್ಲ ಧೀರರೂ ಅಲ್ಲ’ ವಚನದಲ್ಲಿ

ಕೊಟ್ಟ ಕುದುರೆಯೆಂಬುದು ಇಹದ ಜೀವನ. ಇದನ್ನು ಏರಿ ಸವಾರಿ ಮಾಡುವುದೆಂದರೆ ಇಹದ ಬದುಕನ್ನು ಸವಾಲಿನಂತೆ ಒಪ್ಪಿಕೊಳ್ಳಬೇಕಾದ, ಆ ಸವಾಲನ್ನು ಎದುರಿಸಿ ಬದುಕಬೇಕಾದ ರೀತಿ, ಅದರ ಹೊರತು ಬರುವ ಸುಖ-ದುಃಖಗಳನ್ನು ಪುನರ್ಜನ್ಮದ ಪುಣ್ಯ-ಪಾಪಗಳ ಫಲವೆಂದು ಒಪ್ಪಿಕೊಳ್ಳುವುದು ದುರ್ಬಲ ಮನೋಧರ್ಮ.

“ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ” ‘ಇಹ’ (ಮರ್ತ್ಯ)

ಎನ್ನುವುದು ಸೃಷ್ಟಿಕರ್ತನ ಟಂಕಸಾಲೆ. ಇಲ್ಲಿ ತಯಾರಾಗುವ ಜೀವನನಾಣ್ಯ ಮೊದಲು ಇಲ್ಲಿ ಸಲ್ಲುವಂತಿರಬೇಕು. ಹಾಗಿದ್ದರೆ ಮಾತ್ರ ಅಲ್ಲೂ (ಪರದಲ್ಲೂ) ಸಲ್ಲುತ್ತದೆಂದು ಹೇಳುತ್ತಾ ಬದುಕಿನ ಕಷ್ಟಗಳಿಗೆ ವಿಮುಖರಾಗುವವರನ್ನು ಪರದತ್ತ ಮುಖಮಾಡು-ವವರನ್ನು ಎಚ್ಚರಿಸುತ್ತಾರೆ.

ನಮ್ಮ ನಡವಳಿಕೆಯ ಮೂಲಕ ಸ್ವರ್ಗ-ನರಕವನ್ನು ನಾವೇ ರೂಪಿಸಿ-ಕೊಳ್ಳಬಹುದು ಎಂದು ಹೇಳುತ್ತಾ

'ಸ್ವರ್ಗ ನರಕ ಬೇರಿಲ್ಲ ಕಾಣಿರೋ
ಸತ್ಯವ ನುಡಿವುದೇ ಸ್ವರ್ಗಲೋಕ
ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೇ ಸ್ವರ್ಗ ಅನಾಚಾರವೇ ನರಕ'

ಸತ್ಯವಂತರಾಗಿದ್ದು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಉತ್ತಮ ಗೆಳೆತನ ಹೊಂದಿದವನಿಗೆ ವಿಶ್ವಾಸ, ಗೌರವ, ಆತ್ಮೀಯತೆ ದೊರೆತು, ಸಂತೋಷ ವರ್ಧಿಸುತ್ತದೆ. ಪರಸ್ಪರ ವ್ಯವಹಾರ ಸುಖದಿಂದ ಕೂಡಿರುತ್ತದೆ. ಈ ರೀತಿ ಸುತ್ತಣ ಜನರೊಂದಿಗೆ ಸಂತೋಷದಿಂದ ಇರುವುದಾದರೆ ಅದಕ್ಕಿಂತ ಬೇರೆಯ 'ಸ್ವರ್ಗ' ಉಂಟೆ? ಎಂಬ ವೈಚಾರಿಕ ಪ್ರಶ್ನೆಯೊಳಗೆ ಪ್ರಾಯೋಗಿಕ ಉತ್ತರವನ್ನು ಹೊರಳಿಸಿ ಸ್ವರ್ಗ, ನರಕ ಪರಿಕಲ್ಪನೆಯ ಪರಂಪರೆಗೆ ಒರೆಯ ಬರೆ ಹಾಕುತ್ತಾರೆ ಶರಣರು.

ಅಯ್ಯಾ ಎಂದರೆ ಸ್ವರ್ಗ
ಎಲವೋ ಎಂದರೆ ನರಕ

ಎಂಬ ಮಾತಿನಲ್ಲಿ ನಮ್ಮ ನಡವಳಿಕೆಯಿಂದ ದೊರೆಯುವ ಪ್ರಾಯೋಗಿಕ ಸೌಖ್ಯವನ್ನು ನಿರೂಪಿಸುತ್ತಾರೆ. ಸಮಾಜದ ವ್ಯವಹಾರದಲ್ಲಿ ಮೇಲಿನ ಮಾತುಗಳ ಪರಿಣಾಮವನ್ನು ಕಲ್ಪಿಸಿಕೊಂಡರೆ ಬಹುಶಃ ಶರಣರ ಸ್ವರ್ಗ-ನರಕ ಪರಿಕಲ್ಪನೆಯ ಅರಿವಾಗುತ್ತದೆ.

ಧರ್ಮ, ದೇವರು-ದೇವಸ್ಥಾನ ಮತ್ತು ಶರಣ ಚಳವಳಿ:

ಶರಣರು ಯಾವ ಧರ್ಮವನ್ನೂ ನಿರಾಕರಿಸಲಿಲ್ಲ. ಯಾವ ಧರ್ಮದ ಅನುಯಾಯಿಯೂ ಅಲ್ಲ, ಎಲ್ಲಾ ಧರ್ಮಗಳಲ್ಲಿರುವ ಒಳ್ಳೆಯ ಗುಣಗಳನ್ನು ಮೈಗೂಡಿಸಿಕೊಂಡು ಮಾನವಧರ್ಮವನ್ನು ಗಳಿಸಿ ಬೆಳೆಸಬೇಕೆಂಬುದೇ ಇಡೀ ಶರಣಕ್ರಾಂತಿಯ ನಿಲುವು. "ಬಸವಧರ್ಮದಲ್ಲಿ ಪ್ರಪಂಚದ ಎಲ್ಲ ಪ್ರಗತಿಪರ ಧರ್ಮಗಳ ಸಂಗಮವಿದೆ. ಇದು ನಿಜವಾದ ಅರ್ಥದಲ್ಲಿ ಕೂಡಲಸಂಗಮವಾಗಿದೆ.

ಯೇಸುಕ್ರಿಸ್ತನ ಪ್ರೇಮ, ಪೈಗಂಬರನ ಕ್ರಾಂತಿ, ಬುದ್ಧನ ಶಾಂತಿ, ಮಹಾವೀರನ ಅಹಿಂಸೆ, ಗುರುನಾನಕರ ನಿಷ್ಠೆ, ಮಾರ್ಕ್ಸ್‌ನ ಸಮತೆ, ಗಾಂಧೀಜಿಯ ಸರ್ವೋದಯ ಮುಂತಾದುವೆಲ್ಲ ಇಲ್ಲಿ ಸಂಗಮಿಸಿವೆ"[೬]

ಶರಣರು ಧರ್ಮದ ಹೆಸರಿನಲ್ಲಿ ಜಾತಿಭೇದ ಮಾಡುವುದನ್ನು ಪ್ರಾಣಿಬಲಿಯಂಥ ಮೌಢ್ಯತೆಯನ್ನು ನಿರಾಕರಿಸಿದರು. "ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ ದಯವೇ ಧರ್ಮದ ಮೂಲವಯ್ಯಾ" ದಯವಿಲ್ಲದ, ಹಿಂಸೆಯುಕ್ತವಾದ ಯಾವುದೇ ಧರ್ಮವನ್ನು ಶರಣರು ವೈಚಾರಿಕತೆಯ ಮೂಲಕ ತಿರಸ್ಕರಿಸುತ್ತಾರೆ.

"ಶರಣಧರ್ಮವನ್ನು ಜಗತ್ತಿನ ಅತ್ಯಂತ ಶ್ರೇಷ್ಠಧರ್ಮವೆಂದು ನಾವಿಂದು ಒಪ್ಪಿಕೊಳ್ಳಬೇಕಾಗಿದೆ. ಶ್ರೀ ಕುವೆಂಪು ಅವರು ಹೇಳುತ್ತಿದ್ದರು – 'ಬಸವಧರ್ಮ ಆಚರಣೆಗೆ ಬಂದಿದ್ದರೆ ಭಾರತದಲ್ಲಿ ಇಂದಿನ ಅನಿಷ್ಟಗಳು ಇರುತ್ತಿರಲಿಲ್ಲ"[೭] ಎಂದು ೧) ಯಾವುದೇ ಧರ್ಮ ಒಳ್ಳೆಯ ಸಾಮಾಜಿಕ ಮನುಷ್ಯನನ್ನು ನಿರ್ಮಾಣ ಮಾಡಬೇಕು, ಹಾಗಾದಾಗ ಅದು ಎಲ್ಲ ವರ್ಗಗಳ ಶ್ರೇಯಸ್ಸನ್ನು ಸಾಧಿಸುವಂತಾಗುತ್ತದೆ. ಇದು ಒಂದು ಧರ್ಮದ ಸಾಮಾಜಿಕ ಜವಾಬ್ದಾರಿ ೨) ಎಲ್ಲರ ಶ್ರೇಯಸ್ಸನ್ನು ಸಾಧಿಸಬೇಕಾದರೆ ಒಂದು ಸಮಾಜದ ಎಲ್ಲರನ್ನೂ ತನ್ನವರೆಂದೂ ಸಮಾನರೆಂದೂ ಪರಿಗಣಿಸುವ ಉದಾರತೆ ಬೇಕು. ಮತ್ತು ೩) ಸಾಮಾಜಿಕ ತಾರತಮ್ಯಗಳ ಹಿಂದಿರುವ ಕಾರಣಗಳನ್ನು ಪ್ರಶ್ನಿಸುವ ಪ್ರತಿಭಟಿಸುವ ವೈಚಾರಿಕತೆ ಬೇಕು. ಈ ಮೂರನ್ನೂ ಏಕಕಾಲಕ್ಕೆ ಸಾಧಿಸಿದ ಕೀರ್ತಿ ಶರಣಧರ್ಮದ್ದು ಎಂಬುದೇ ಶರಣ ಚಳವಳಿಯ ಮಹತ್ವ.

ಶರಣಚಳವಳಿಯು ಮುಖ್ಯವಾಗಿ ಮೇಲಿನ ಮೂರು ಅಂಶಗಳ ಹಿನ್ನೆಲೆಯಿಂದ ಯಾವುದೇ ಧರ್ಮವನ್ನು ನೋಡುತ್ತಿದ್ದು, ಹಿಂದೂಧರ್ಮದ ಶ್ರೇಣೀಕರಣ ಸಾಮಾಜಿಕ ವ್ಯವಸ್ಥೆಯನ್ನು ವಿರೋಧಿಸಿತು. ಮೇಲೆ ಮಾತ್ರ 'ಸರ್ವೇ ಜನಾಃ ಸುಖಿನೋ ಭವಂತು', ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಹುಸಿ ಘೋಷಣೆಗಳಿಂದ ಜಗತ್ತನ್ನು ಮೋಸಗೊಳಿಸುತ್ತಾ ಒಳಗೆ ಮಾತ್ರ ಚಾತುರ್ವರ್ಣ ಪದ್ಧತಿಯನ್ನು ಬಲವಾಗಿ ಸಮರ್ಥಿಸುತ್ತಾ ಬಂದ ತಂತ್ರವನ್ನು ತೀವ್ರವಾಗಿ ವಿರೋಧಿಸಿತು.

ಸಂಸಾರವಿದೂರನಾಗಿ ಮುಕ್ತಿ ಸಾಧಿಸಬೇಕೆಂಬ ಧರ್ಮಗಳನ್ನು ವಿರೋಧಿಸಿ "ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬ ತಮ್ಮ ನಿಲುವನ್ನು ಸಾರಿದರು. ಶರಣಚಳವಳಿ ಎಂದೂ ಸನ್ಯಾಸವನ್ನು ಸಂಸಾರಕ್ಕೆ ವಿರೋಧಿ–

ಯಾದುದೆಂದಾಗಲೀ, ದೊಡ್ಡದೆಂದಾಗಲೀ ಪರಿಗಣಿಸಲಿಲ್ಲ, ಬದಲಾಗಿ ಸಂಸಾರವನ್ನು ತನ್ನ ಅಸ್ತಿತ್ವದ ಮೊದಲ ನೆಲೆಯನ್ನಾಗಿ ಒಪ್ಪಿಕೊಳ್ಳುತ್ತದೆ. "ಕುಟುಂಬ ಕೇಂದ್ರಿತ ನಿಲುವಿನ ಶರಣರಧರ್ಮದ ಮೂಲಕ ಬಸವಾದಿಗಳು ಕಟ್ಟಲು ಆಶಿಸಿದ್ದು 'ಮಹಾಮನೆ'ಯನ್ನು. ಮಹಾಮಠವನ್ನಲ್ಲ.... ಕಲ್ಯಾಣ ಕ್ರಾಂತಿಯ ಕೇಂದ್ರವಾದದ್ದು ಈ ಮಹಾಮನೆಯೇ. ಇದು ಸಂಸಾರಿಗಳ ಮನೆಯನ್ನು ಶಿವಯೋಗದ ಮಹಾಮನೆಯನ್ನಾಗಿ ಪರಿವರ್ತಿಸುವ ಪವಾಡ. ಹೀಗೆ ಮನೆಗಳನ್ನು ಮಹಾಮನೆಗಳನ್ನಾಗಿ ಮಾಡಬೇಕೆನ್ನುವುದೇ ಶರಣರ ಹಾಗೂ ಶರಣ ಧರ್ಮದ ಉದ್ದೇಶ"[೮] ಹೀಗೆ ಧರ್ಮಗಳ ಕೆಲವು ಅವೈಚಾರಿಕ ಕಟ್ಟಳೆಗಳನ್ನು ಮುರಿದು ಎಲ್ಲರಿಗೂ ಎಟಕುವ ತತ್ತ್ವಗಳ ಆಧಾರದ ಮೇಲಿನ ಧರ್ಮವನ್ನು ಪ್ರತಿಪಾದಿಸಿದ್ದು; ಪ್ರತಿನಿರ್ಮಿಸಿದ್ದು ಶರಣ ಚಳವಳಿಯ ಮಹತ್ವದ ಕೊಡುಗೆಯಾಗಿದೆ.

ಶರಣರು ಯಾವುದೇ ವ್ಯಕ್ತಿಗೆ ಹುಟ್ಟಿನಿಂದ ಮಾನ್ಯತೆ ಇಲ್ಲ, ವ್ಯಕ್ತಿತ್ವದಿಂದ ಮಾತ್ರ ಎಂದು ಸಾರಿದರು. "ವ್ಯಕ್ತಿಯ ಯೋಗ್ಯತೆಯನ್ನು ಹುಟ್ಟಿನಿಂದಲೇ ಅಳೆಯುವುದನ್ನು ತೊಡೆದುಹಾಕಿ ಗುಣದಿಂದಲೇ ಯೋಗ್ಯತೆಯನ್ನು ನಿರ್ಧರಿಸಬೇಕೆಂದು ಸಾರಿದನು. ಬ್ರಾಹ್ಮಣರಿಂದ ಅಸ್ಪೃಶ್ಯರವರೆಗೆ ಗುಣಶಾಲಿಗಳೆಲ್ಲರೂ ಒಂದು ಕುಲ – ಅವರು ಭಕ್ತರು, ಗುಣಹೀನರು ಇನ್ನೊಂದು ಕುಲ – ಅವರು ಭವಿಗಳು : ಈ ಎರಡು ಜಾತಿಗಳು ಹುಟ್ಟಿನಿಂದ ಬರುವುದಿಲ್ಲ; ಗುಣದಿಂದ ಎಂದು ಹೇಳಿದುದು ಮಾತ್ರವಲ್ಲದೆ ಅದನ್ನು ಆಚರಣೆಗೆ ತರಲು ಹವಣಿಸಿದನು."[೯] – ಬಸವಣ್ಣನ ಈ ಆದರ್ಶ ಇಡೀ ಶರಣಮಾರ್ಗವಾಗಿತ್ತು.

ಧರ್ಮದ ಹೆಸರಿನಲ್ಲಿ ಮೌಢ್ಯತೆಯನ್ನು ಬಿತ್ತಿ ಸಾಮಾನ್ಯ ಜನರನ್ನು ಮೋಸಗೊಳಿಸುವವರ ವಿರುದ್ಧ ಶರಣಧರ್ಮ ವೈಚಾರಿಕ ಸಮರ ಸಾರಿದ್ದನ್ನು ನೋಡಬಹುದು. 'ಎಮ್ಮವರೊಲಿದುದೇ ಶುಭಲಗ್ನವೆನ್ನಿರಯ್ಯಾ' ಎಂದು ಶುಭ, ಅಶುಭ ಎಂದು ನೋಡುವವರಿಗೆ ತಿಳಿವಳಿಕೆ ನೀಡಿದರು. 'ತಿಥಿ ವಾರವೆಂದರಿಯೆ, ಲಗ್ನ, ವಿಲಗ್ನವೆಂದರಿಯೆ, ಇರುಳೊಂದು ವಾರ, ಹಗಲೊಂದು ವಾರ; ಭಕ್ತಿಯೊಂದು ಕುಲ, ಭಕ್ತನೊಂದು ಕುಲ' ಎಂಬ ಬಸವಣ್ಣನ ವಚನದಲ್ಲಿ ಇಡೀ ಶರಣ ಚಳವಳಿಯ ಧಾಮಿಕ ಮನೋಧರ್ಮವು ಧ್ವನಿತವಾಗುತ್ತದೆ.. "ಧರ್ಮದ ಹೆಸರಿನಲ್ಲಿ ಅಂಧಶ್ರದ್ಧೆಗಳೂ, ಮೂಢನಂಬಿಕೆಗಳೂ ಶೋಷಣೆಯ ಮಾರ್ಗಗಳನ್ನು ಸಮೃದ್ಧಗೊಳಿಸಿದ್ದವು. ಇದನ್ನು ಕಂಡು ಕೆರಳಿದ ಬಸವಣ್ಣ ಇದನ್ನು ಆಮೂಲಾಗ್ರವಾಗಿ ಕಿತ್ತುಹಾಕುವ

[illegible]

[illegible]

[illegible]

ಅಪಾಯಕಾರಿಯಾದ ಕ್ರಾಂತಿಕಾರ್ಯಕ್ಕೆ ಕೈಹಾಕಿದ."[೧೦] ವರ್ಣಸಂಕರ ವಿವಾಹದ ಮೂಲಕ ದೊಡ್ಡದೊಂದು ವೈಚಾರಿಕ ಕ್ರಾಂತಿ ಮಾಡಿದ್ದು ಇತಿಹಾಸ.

ಹೀಗೆ ಶರಣಧರ್ಮ, ವಿಶ್ವಧರ್ಮ, ಅದು ಮಾನವಧರ್ಮದ ಪ್ರತಿಪಾದನೆ-ಯಾಗಿದೆ.

ಇನ್ನು ಸಮಾಜದಲ್ಲಿ ಅಸಮಾನತೆಯ ನೆಲೆಮನೆಗಳಾಗಿದ್ದ ದೇವಾಲಯಗಳನ್ನೂ ಶರಣಧರ್ಮ ನಿರಾಕರಿಸಿದ್ದನ್ನು ನೋಡಬಹುದು. "ಕಲ್ಲಮನೆಯ ಮಾಡಿ, ಕಲ್ಲ ದೇವರ ಮಾಡಿ, ಅ ಕಲ್ಲು ಈ ಕಲ್ಲ ಮೇಲೆ ಕೆಡೆದಡೆ ದೇವರೆತ್ತ ಹೋದರೋ?" ಎಂಬ ಅಲ್ಲಮಪ್ರಭುಗಳ ವಚನದಲ್ಲಿ ಏಕಕಾಲಕ್ಕೆ ದೇವರನ್ನು ಕಲ್ಲಿನ ಮೂರ್ತಿ ಮಾಡಿ ಮೂರ್ತಿ ಪೂಜೆ ಮಾಡುವುದನ್ನು ಹಾಗೂ ದೇವಾಲಯವನ್ನೂ ವಿರೋಧಿಸುವುದನ್ನು ಕಾಣಬಹುದು. ದೇವರು ಗುಡಿಯಲಿಲ್ಲ, ಆದರೆ 'ಕಾಯಕವೇ ಕೈಲಾಸ' ಎಂದು ನಾವು ಮಾಡುವ ಕಾಯಕವನ್ನು ನಿಷ್ಠೆಯಿಂದ ಮಾಡುವ ಮೂಲಕ ದೇವರನ್ನು ಕಾಣಬೇಕು ಎಂದು ಸಾರಿದರು.

'ತನುವಿನಲ್ಲಿ ನಿರ್ಮೋಹ ಮನದಲ್ಲಿ ನಿರಹಂಕಾರ
ಪ್ರಾಣದಲ್ಲಿ ನಿರ್ಭಯ ಚಿತ್ತದಲ್ಲಿ ನಿರಾಪೇಕ್ಷೆ
ವಿಷಯದಲ್ಲಿ ಉದಾಸೀನ ಭಾವದಲ್ಲಿ ದಿಗಂಬರ
ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ
ಸೌರಾಷ್ಟ್ರ ಸೋಮೇಶ್ವರಲಿಂಗವು ಬೇರಿಲ್ಲ ಕಾಣಿರೋ

ಎಂಬ ವಚನದಲ್ಲಿ ದೇವರ ಅಸ್ತಿತ್ವವಿರುವುದು ಎಲ್ಲಿ ಎಂದು ಅರ್ಥಮಾಡಿಸಹೊರಟಿದ್ದು, ಇವತ್ತಿಗೂ ಆ ನೆಲೆಯಲ್ಲಿ ದೇವರನ್ನು ಕಾಣದೆ, ಗುಡಿ-ಗೋಪುರಗಳ ವೈಭವದ ನಿರ್ಮಾಣ ಮಾಡಿ, ಗಂಟೆಯ-ಶಬ್ದನಾದದ ಹೆಸರಲ್ಲಿ ಶಬ್ದಮಾಲಿನ್ಯವುಂಟುಮಾಡುವ ಹೋಮದ ಹೆಸರಲ್ಲಿ ಹಾಲನ್ನು ಕೊಳಚೆ ಮಾಡುವುದು ಶರಣ ಸಾಹಿತ್ಯದ ಪ್ರಸ್ತುತತೆಯ ಮಹತ್ವದ ಜೊತೆಗೆ ಜನರ ವಿಪರ್ಯಾಸದ ಮನೋಧರ್ಮವನ್ನೂ ಸೂಚಿಸುತ್ತದೆ.

ಸರ್ವಾಂತರ್ಯಾಮಿಯಾದ ದೇವರನ್ನು ಗುಡಿಯಲ್ಲಿರಿಸುವುದು ವಿರೋಧಾಭಾಸ-ವೆಂದು ಚಿಂತಿಸಿದ ಶರಣರು ದೇವಾಲಯವನ್ನು ನಿರಾಕರಿಸಿದರು. 'ಎನ್ನ ಕಾಲೇ ಕಂಬ, ದೇಹವೇ ದೇಗುಲ. ಶಿರ ಹೊನ್ನ ಕಳಸ' ಎಂಬಲ್ಲಿ ಸ್ಥಾವರ ದೇವಾಲಯವನ್ನು ನಿರಾಕರಿಸಿ ಜಂಗಮ ಗೊಳಿಸಿದರು. ಅಂಗದಲ್ಲಿ ಲಿಂಗಪ್ರತಿಷ್ಠಾಪನೆ ಮಾಡಿ ದೇಹವನ್ನೇ ದೇವಾಲಯ ಮಾಡಿ ಮಾನವ ಕುಲವನ್ನು ಸಮಾನಗೊಳಿಸಲು ಮುಂದಾದರು.

೨.೩ ಸಮಾಜವಾದ–ಶರಣ ಚಳವಳಿ: ಅಂದಿನ ಸಮಾಜವು ಜಾತಿಭೇದ, ವರ್ಗಭೇದ, ವೃತ್ತಿಭೇದ, ಲಿಂಗಭೇದಗಳಿಂದ ಕೂಡಿತ್ತು. ಇವತ್ತಿನ ಸಮಾಜವು ಇದರಿಂದ ಹೊರತಾಗಿಲ್ಲವೆಂಬುದನ್ನು ಮನಗಾಣಬೇಕು. ಇಂತಹ ಎಲ್ಲ ಭೇದಗಳಿಗೆ ಎದುರಾಗಿ ಶರಣರು ರೂಪಿಸಿದ ನಿಯಮಗಳೇ ಸಮಾಜವಾದದ ಹಿನ್ನೆಲೆಯುಳ್ಳವು; ಸಮಾಜ–ವಾದವನ್ನು ಗಟ್ಟಿಗೊಳಿಸುವಂಥವು.

"ಶರಣರ ಸಮಾಜವಾದದಲ್ಲಿ ಮಾದಾರಚನ್ನಯ್ಯ ಅಂಬಲಿಯ ನೇಮದ ಆಗ್ರೇಸರನಾಗಿದ್ದ. ಆತನಿಗೆ ಮೃಷ್ಠಾನ್ನ ಬೇಕಿರಲಿಲ್ಲ. ಭವ್ಯದ ವನದ ಅವಶ್ಯಕತೆ ಇರಲಿಲ್ಲ. ವಾಸಿಸಲು ಒಂದು ಗುಡಿಸಲೇ ಸಾಕಿತ್ತು. ಉಡುತೊಡಲು ಅವರಿಗೆ ಕೇವಲ ಒಂದು ಜೊತೆ ಪಂಚೆ ಬೇಕಿತ್ತು. ಅವಶ್ಯಕತೆ ಗಿಂತ ಮಿಕ್ಕದ್ದನ್ನು ಬಯಸುವುದು ಹಾಗೂ ಅದಕ್ಕಾಗಿ ವಿನಾಕಸರತ್ತು ಮಾಡುವುದು ಇತ್ಯಾದಿಗಳೆಲ್ಲ ಮಹಾಪಾಪಗಳೆನಿಸುತ್ತವೆ. ಶರಣರ ಸಮಾಜವಾದ ಅಂದರೆ ಅಂಬಲಿಯ ನೇಮ. ಈ ಅಂಬಲಿಯ ನೇಮ ಅಂದರೆ ಸಾಧ್ಯವಾದಷ್ಟು ಕಡಿಮೆ ಅವಶ್ಯಕತೆಗಳಲ್ಲಿ ಜೀವನ ಮಾಡುವುದು"[೧೧] ಚಂದ್ರಶೇಖರ ಕಂಬಾರರ 'ಶಿವರಾತ್ರಿ' ನಾಟಕದಲ್ಲಿ ಈ ತತ್ತ್ವ ಅಂದಿನ ಸಾಮಾನ್ಯ ಜನ ಹಾಗೂ ವೇಶ್ಯೆಯರಲ್ಲಿಯೂ ಪಾಲನೆಯಾಗಿದ್ದನ್ನು ಅರಮನೆಯ ರತ್ನದಸರದ ಕಳುವಿನ ಪ್ರಸಂಗದಲ್ಲಿ ನೋಡಬಹುದಾಗಿದೆ.

> "ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ
> ಅನ್ನದೊಳಗೊಂದಗುಳ
> ಇಂದಿಗೆ ನಾಳಿಂಗೆ ಬೇಕೆಂದೆನಾದಡೆ
> ನಿಮ್ಮಾಣೆ ನಿಮ್ಮ ಪುರಾತನರಾಣೆ!"

ವಚನ ನೋಡಿದರೆ– ಸಂಗ್ರಹೋನ್ಮಾದವೇ ಈ ಯುಗದ ಅಭಿಪ್ರಾಯವೆಂದು 'ವಾಲ್ಟ್‌ವಿಟ್‌ಮನ್' ಈಗ ಹೇಳಿದರೆ ಶರಣರು ೧೨ನೇ ಶತಮಾನದಲ್ಲೇ ಹೇಳಿದ್ದಾರೆ. ಸಮಾಜವಾದದ ಮೂಲಮಂತ್ರಳಿಂದ ಸ್ವಾತಂತ್ರ್ಯ, ಸಮಾನತೆ, ಬ್ರಾತೃತ್ವಗಳ ಹಿನ್ನೆಲೆಯಲ್ಲಿ ನಡೆದಂಥ ಜಗತ್ತಿನ ಫ್ರೆಂಚ್‌ಕ್ರಾಂತಿ ಹಾಗೂ ರಶಿಯನ್‌ಕ್ರಾಂತಿಗಳಿಗೆ ಹೋಲಿಸಿದರೆ ಶರಣಕ್ರಾಂತಿ ಅತ್ಯದ್ಭುತ ಕ್ರಾಂತಿಯಾಗಿದೆ. "ಇದು ಸಮಗ್ರಕ್ರಾಂತಿ ಅಂದರೆ Total Revolution ಆಗಿದೆ. ಅರಬ್ ರಾಷ್ಟ್ರಗಳಲ್ಲಿ ಪೈಗಂಬರರು ಕ್ರಾಂತಿ ಮಾಡಿದಂತೆ ಭಾರತದಲ್ಲಿ ಬಸವಣ್ಣನವರು ಕ್ರಾಂತಿ ಮಾಡಿದ್ದಾರೆ"[೧೨]

'ಕಾಯಕವೇ ಕೈಲಾಸ' ಪರಿಕಲ್ಪನೆ ನೀಡಿದ ಶರಣರು ತಾವು ದುಡಿದಿದ್ದಷ್ಟರಿಂದಲೇ ಬದುಕುವ ಹಾಗೂ ತಾವು ದುಡಿದದ್ದರಲ್ಲಿ ಸ್ವಲ್ಪಭಾವವನ್ನು

ವಿನಿಯೋಗಿಸುವ ಮೂಲಕ ವರ್ಗ ಅಸಮಾನತೆಯನ್ನು ತೊಡೆಯಲು ಪ್ರಯತ್ನಿಸಿದರು. "ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಮಾತ್ರ ಪಡೆಯುವುದು ಶರಣರ ಒಂದು ವ್ರತವಾಗಿತ್ತು."[೧೩] ಪ್ರತಿಯೊಬ್ಬರೂ ದುಡಿದೇ ತಿನ್ನಬೇಕು ಎಂಬ ತತ್ತ್ವ ಪ್ರತಿಪಾದಿಸಿದರು. ಈ ವೃತ್ತಿಗಳಲ್ಲಿಯೂ ಮೇಲುಕೀಳೆಂಬ ಭಾವನೆಯಿದ್ದುದರಿಂದ ಇದನ್ನು ಮಾರ್ಪಡಿಸದ ಹೊರತು ಸಮಾನತೆ ಸಾಧಿಸಿದಂತಾಗುವುದಿಲ್ಲವೆಂದರಿತ ಶರಣರು 'ಕಾಯಕ' ಪರಿಕಲ್ಪನೆ ರೂಪಿಸಿ ಕೇವಲ ದೈಹಿಕ ದುಡಿಮೆಯೆಂಬ ವ್ಯಾಖ್ಯಾನದಿಂದ ವೃತ್ತಿಯನ್ನು ಬೇರ್ಪಡಿಸಿ 'ದೇವರಸೇವೆ' ಎಂದು ಅರ್ಥೈಸಿದರು. ಪೂಜ್ಯಭಾವನೆಯಿಂದ ಮಾಡುವುದರಿಂದ ಯಾರು ಯಾವ ಕೆಲಸವನ್ನು ಮಾಡಿದರೂ ಅದು ಒಂದೇ ಉದ್ದೇಶದಿಂದ ಮಾಡುವುದರಿಂದ ವೃತ್ತಿ ತಾರತಮ್ಯಗಳು ತಾನಾಗೇ ಹೋಗುತ್ತವೆಂಬುದು ಶರಣರ ಮನೀಷೆ. ಇವತ್ತಿನ ಸಮಾಜವಾದದ ಜಪದ ಮಧ್ಯೆಯೇ ಎಲ್ಲಾ ವೃತ್ತಿಗಳಲ್ಲಿನ ಶ್ರೇಣೀ ವ್ಯವಸ್ಥೆಯ ಪ್ರತೀಕವಾಗಿ ನಡೆಯುತ್ತಿರುವ ಶೋಷಣೆಗಳು ಅದಕ್ಕೆ ಪ್ರತಿಯಾಗಿ ಶೋಷಿತರ ಆಕ್ರಮಣಗಳು ನಡೆಯುತ್ತಿರುವುದನ್ನು ನೋಡಿದರೆ ಶರಣಚಳವಳಿಯ ತತ್ತ್ವದ ಪ್ರಸ್ತುತತೆಯ ಪ್ರಧಾನತೆ ತಿಳಿಯುತ್ತದೆ.

ಶರಣರು ಸಮಾಜದ ಲಿಂಗಅಸಮಾನತೆಯನ್ನು ವಿರೋಧಿಸಿದರು. ಇವತ್ತಿಗೂ ಸ್ತ್ರೀಶೋಷಣೆ ಕೊನೆಗೊಳ್ಳದಿರುವ ವಿಪರ್ಯಾಸದ ಸಂಗತಿಯನ್ನು ನೋಡಬಹುದು. ಆದರೆ ಸ್ತ್ರೀಯರನ್ನು ಧರ್ಮದಿಂದಲೇ ದೂರವಿಟ್ಟಿದ್ದ ವೈದಿಕದ ಪ್ರಭಾವವಿದ್ದ ಆ ಕಾಲದಲ್ಲಿ ಸ್ತ್ರೀಯರಿಗೂ ಪ್ರಾಧಾನ್ಯ ನೀಡಿದ್ದು ಶರಣಧರ್ಮದ ವಿಶೇಷ. "ವೈದಿಕ, ಜೈನ, ಬೌದ್ಧಮತಗಳು ಸ್ತ್ರೀಯರು ಪುರುಷರಷ್ಟೇ ಸಮಾನ ಎಂದು ಒಪ್ಪುವುದಿಲ್ಲ. ವೈದಿಕ ಧರ್ಮದ ಪ್ರಕಾರ ಸ್ತ್ರೀಯರಿಗೆ ವೇದಾಧಿಕಾರವಿಲ್ಲ. ಪುರುಷರಂತೆ ಜನಿವಾರವನ್ನು ಧರಿಸುವ ಹಕ್ಕಿಲ್ಲ. ಬೌದ್ಧಧರ್ಮವಂತೂ ಮೊದಮೊದಲು ಸ್ತ್ರೀಯರಿಗೆ ಪ್ರವೇಶವನ್ನೇ ನಿರಾಕರಿಸಿತು, ಜೈನಧರ್ಮ ಸ್ತ್ರೀಮೋಕ್ಷಕ್ಕೆ ಅರ್ಹಳಲ್ಲ, ಒಂದು ವೇಳೆ ಮೋಕ್ಷವನ್ನು ಪಡೆಯಬೇಕಾದರೆ ಆಕೆ ಮುಂದಿನ ಭವಗಳಲ್ಲಿ ಗಂಡಾಗಿ ಹುಟ್ಟಬೇಕು"[೧೪] ಎಂಬ ಮೌಢ್ಯತೆಯ ಜಾಡ್ಯದಲ್ಲಿ ಸಮಾಜ ಮುಳುಗಿರುವಾಗ 'ಸತಿಪತಿಗಳೊಂದಾದ ಭಕ್ತಿ ಹಿತವಾಗಿದು ಶಿವಂಗೆ' ಎಂದು ಹೊಸ ಬದಲಾವಣೆಯ ತತ್ತ್ವ ಸಾರುವ ಮೂಲಕ ಧರ್ಮಕ್ಕೆ, ಮೋಕ್ಷಕ್ಕೆ ಸ್ತ್ರೀಯರ ಅರ್ಹತೆಯನ್ನು ಸ್ಥಾಪಿಸಲು ಪ್ರಯತ್ನಿಸಿತು. ಹೆಣ್ಣು ಮಾಯೆ, ತಪಸ್ಸಿಗೆ ವಿರೋಧಿ, ಮೋಹ ಇತ್ಯಾದಿ ಪಾರಂಪರಿಕವಾಗಿ ಬಂದ ಮಹಿಳೆಯರ ಬಗೆಗಿನ ಅಪಸ್ವರಗಳಿಗೆ ಶರಣರ ಉತ್ತರ 'ಮಾಯೆ' ಎಂದವರು ತತ್ತರಿಸುವಂತೆ:

'ಹೆಣ್ಣು ಮಾಯೆಯೆಂಬರು, ಹೊನ್ನು ಮಾಯೆ ಎಂಬರು,
ಮಣ್ಣು ಮಾಯೆಯೆಂಬರು;
ಹೆಣ್ಣು ಮಾಯೆ ಅಲ್ಲ, ಹೊನ್ನು ಮಾಯೆ ಅಲ್ಲ
ಮಣ್ಣು ಮಾಯೆ ಅಲ್ಲ ಮನದ ಮುಂದಣ ಆಸೆಯೆ
ಮಾಯೆ ಕಾಣಾ ಗುಹೇಶ್ವರ"

ಎಂದು ಮನೋ ದೌರ್ಬಲ್ಯವನ್ನು ಎತ್ತಿತೋರಿಸಿದರು. ಗಂಡಿಗೆ ಹೆಣ್ಣು ಮಾಯೆ ಆಗುವುದಾದರೆ ಹೆಣ್ಣಿಗೂ ಗಂಡು ಯಾಕೆ ಮಾಯೆ ಅಲ್ಲ ಈ ಒಂದು ದಿಟ್ಟತನದಿಂದ ಹೇಳುವ ಅಕ್ಕಮಹಾದೇವಿಯ – 'ಗಂಡಿಂಗೆ ಹೆಣ್ಣಾಗಿ ಕಾಡಿತ್ತು ಮಾಯೆ, ಹೆಣ್ಣಿಂಗೆ ಗಂಡಾಗಿ ಕಾಡಿತ್ತು ಮಾಯೆ' ವಚನದಲ್ಲಿ ಪ್ರತಿಭಟನೆಯ ವಿಚಾರ ಸ್ಫುಟವಾಗಿರುವುದನ್ನು ನೋಡಬಹುದು. "ಮಾತೆಯಾಗಿ, ಮಡದಿಯಾಗಿ, ಮಗಳಾಗಿ ತನ್ನ ಸೇವೆಯನ್ನು ಸಲ್ಲಿಸುವ ಸಮಾಜದ ಅಂಗವಾದ ಸ್ತ್ರೀಗೆ ಅಧ್ಯಾತ್ಮ ವಿಚಾರದಲ್ಲಿ ಅರ್ಹತೆಯಿಲ್ಲ–ವೆಂಬುದನ್ನು ನಿರ್ಮೂಲನ ಮಾಡಿ, ಸಾಮಾಜಿಕವಾಗಿ ಅವಳಿಗೆ ಒಂದು ಮೌಲ್ಯವನ್ನು ಒದಗಿಸಿಕೊಟ್ಟುದೇ ಈ ಲಿಂಗಸಂಸ್ಕಾರ"[೧೫] ಇಡೀ ಜಗತ್ತಿನಲ್ಲಿ ಮಹಿಳೆಗೂ ದೀಕ್ಷೆ ನೀಡಿದ ಏಕೈಕ ಧರ್ಮ, ಮೊತ್ತಮೊದಲ ಧರ್ಮ–ಶರಣ ಧರ್ಮ. "ಈ ಜಗತ್ತಿನಲ್ಲಿ ಸತ್ರೀಯರಿಗೆ ಬಸವಾದಿ ಶರಣರು ಕೊಟ್ಟ ಸ್ಥಾನ ಗೌರವ ಯಾರೂ ಕೊಟ್ಟಿಲ್ಲ".[೧೬] ಯಾವುದೇ ಸ್ತ್ರೀಗೆ ಸಂಸ್ಕಾರಕ್ಕೆ ಅಡ್ಡಿಬರುವುದು ಅವರ [ಮಾಸಿಕ] ಸೂತಕ ಎಂದು ವರ್ಣಧರ್ಮ ಪ್ರತಿಪಾದಿಸಿದರೆ ಶರಣರು ಭೂಮ ನಿಲುವಿನಲ್ಲಿ ನಿಂತವನ ದೃಷ್ಟಿಯಲ್ಲಿ ಧ್ಯಾನಸೂತಕ, ಮೌನಸೂತಕ, ಜಪಸೂತಕ, ಅನುಷ್ಠಾನ ಸೂತಕ – ಹಾಗಾದರೆ ಸೂತಕಕ್ಕೆ ಅಂತ್ಯವೆಲ್ಲಿ? – ಗುಹೇಶ್ವರನೆಂಬ ಲಿಂಗವನರಿದ ಬಳಿಕ ಸೂತಕ ಹಿಂಗಿತ್ತು. ಯಥಾಸ್ವೇಚ್ಛೆ[೧೭] ಎನ್ನುತ್ತಾರೆ.

ಹೀಗೆ ಶರಣರು ಸ್ತ್ರೀಪುರುಷರ ಭೇದವನ್ನು ಕುರಿತು ಪ್ರತಿರೋಧಾತ್ಮಕ ವಿರೋಧವನ್ನು ತೋರಿ, ಸ್ತ್ರೀಯರಿಗೂ ಪುರುಷರೊಂದಿಗೆ ಆಧ್ಯಾತ್ಮಿಕ, ಸಾಮಾಜಿಕ ಸಮಾನತೆಯನ್ನು ತಂದುಕೊಟ್ಟುದಲ್ಲದೆ ಸ್ತ್ರೀಯಿಲ್ಲದ ಕೇವಲ ಪುರುಷನ ಭಾಗವಹಿಸುವಿಕೆ ಅಪೂರ್ಣವೆಂದು ಸಾರಿದರು.

ಕೊನೆಟಿಪ್ಪಣಿಗಳು

೧. ಎಚ್.ತಿಪ್ಪೇರುದ್ರಸ್ವಾಮಿ, ಶರಣರ ಅನುಭಾವ ಸಾಹಿತ್ಯ, ಡಿವಿಕೆ ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೧೯೬೩, ಪು.೫.

೨. ಜಿ.ಎಸ್. ಶಿವರುದ್ರಪ್ಪ, ಸಮಗ್ರ ಗದ್ಯ-೧, ಕನ್ನಡ ಸಂಸ್ಕೃತಿ ಇಲಾಖೆ, ೨೦೦೯, ಪು. ೪೧.

೩. ದೇಜಗೌ : ಬಸವಧರ್ಮ – ವಿಶ್ವಧರ್ಮ, ಕರಾಮುವಿ, ೨೦೧೨, ಪು. ೩.

೪. ಅದೇ.,

೫. ಜಿ.ಎಸ್.ಶಿವರುದ್ರಪ್ಪ, ಸಮಗ್ರ ಗದ್ಯ -೧, ಪ್ರ.ಕ.ಸಂ. ಇಲಾಖೆ, ೨೦೦೯, ಪು. ೪೬.

೬. ದೇಜಗೌ : ಬಸವಧರ್ಮ, ವಿಶ್ವಧರ್ಮ, ಕರಾಮುವಿ, ಪ್ರ.ಕ. & ಸಂ.ವಿ. ೨೦೧೨, ಪು. ೧೦.

೭. ಅದೇ., ಪು.೧೨.

೮. ಜಿ.ಎಸ್.ಶಿವರುದ್ರಪ್ಪ, ಸಮಗ್ರ ಗದ್ಯ-೧, ಪು. ೬೩.

೯. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಶರಣ ಕಥಾಮೃತ: ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೭೬, ಪು. ೧೦೯

೧೦. ಅದೇ, ಪು. ೨೮.

೧೧. ದೇಜಗೌ, ಬಸವಧರ್ಮ-ವಿಶ್ವಧರ್ಮ, ಪು. ೧೩,

೧೨. ಅದೇ, ಪು. ೧೧.

೧೩. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಶರಣ ಕಥಾಮೃತ, ಪು. ೩೬.

೧೪. ಜಿ.ಎಸ್.ಶಿವರುದ್ರಪ್ಪ, ಸಮಗ್ರ ಗದ್ಯ-೧, ಪು. ೪೩.

೧೫. ಎಂ.ಎಂ.ಕಲಬುರ್ಗಿ, ಬಸವಮಾರ್ಗ, ಪು. ಕನ್ನಡ ಅಧ್ಯಯನ ಪೀಠ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೦, ಪು. ೨೨.

೧೬. ದೇಜಗೌ, ಬಸವಧರ್ಮ – ವಿಶ್ವಧರ್ಮ, ಪು. ೩.

೧೭. ಎಂ.ಎಂ.ಕಲಬುರ್ಗಿ, ಬಸವಮಾರ್ಗ, ಪು. ೨೩.

೧೮. ಅದೇ

ಅಧ್ಯಾಯ – ೩

ಐವರು ನಾಟಕಕಾರರ ಪ್ರತಿಭೆ – ಒಂದು ವಿಶ್ಲೇಷಣೆ

ಜಿ.ಬಿ.ಜೋಷಿ – ನಾನೇ ಬಿಜ್ಜಳ: 'ಜಡಭರತ' ಹಾಗೂ 'ಅನಾಮದೇಯ' ಕಾವ್ಯನಾಮಗಳಿಂದ ಕೃತಿರಚನೆ ಮಾಡಿರುವ ಜಿ.ಬಿ.ಜೋಷಿಯವರ ಪೂರ್ಣ ಹೆಸರು ಗೋವಿಂದ ಭೀಮಾಚಾರ್ಯ ಜೋಷಿ. ಧಾರವಾಡ ಜಿಲ್ಲೆಯ ಗದಗ ತಾಲೂಕಿನ ಹೊಂಬಳದಲ್ಲಿ ೨೯-೦೭-೧೯೦೪ರಂದು ಜನಿಸಿದ ಈ ಪ್ರತಿಭಾಚೇತನ ಕನ್ನಡ ಸಾಹಿತ್ಯಕ್ಕೊಂದು ಕಾಣಿಕೆಯಾಯಿತು. ಧಾರವಾಡದಲ್ಲಿ ದ.ರಾ.ಬೇಂದ್ರೆಯವರ ನೇತೃತ್ವದಲ್ಲಿ ಸ್ಥಾಪಿತವಾಗಿದ್ದ 'ಗೆಳೆಯರ ಗುಂಪಿ'ನ ಸದಸ್ಯರಾಗಿದ್ದ ಇವರು ಕವನ, ಕಾದಂಬರಿ, ಸ್ವಪ್ನಕಥನ, ನಾಟಕ ಕೃತಿಗಳನ್ನು ರಚಿಸಿದ್ದಾರೆ. ಆದರೆ ಇವರು ಮುಖ್ಯವಾಗಿ ನಾಟಕದಲ್ಲೇ ಹೆಸರು ಮಾಡಿದ್ದು, ೧೯೮೨ರ ರಾಜ್ಯನಾಟಕ ಅಕಾಡೆಮಿ ಪ್ರಶಸ್ತಿ, ೧೯೮೯ರ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಗಳಿಗೆ ಭಾಜನರಾಗಿದ್ದು, ಇವರ ನಾಟಕ ಪ್ರತಿಭೆಗೆ ಧ್ಯೋತಕವಾಗಿದೆ.

ಜಡಭರತರು ಒಂಬತ್ತು ಕೃತಿಗಳನ್ನು ಹೊರತಂದಿದ್ದಾರೆ. 'ಜಡಭರತರ ಸಮಗ್ರ ಕೃತಿಗಳ ವಿಮರ್ಶೆ ಇದುವರೆಗೆ ನಡೆದಿಲ್ಲ' ಎಂಬುದು ವಿಪರ್ಯಾಸ.

ಮೂಕಬಲಿ, ಕದಡಿದ ನೀರು, ಸತ್ತವರ ನೆರಳು, ನಾನೇ ಬಿಜ್ಜಳ, ಪರಿಮಳದವರು, ಜಡಭರತರ ಪ್ರತಿಭಾ ಮೂಸೆಯಿಂದ ಹೊರಬಂದ ನಾಟಕ ಕೃತಿರತ್ನಗಳು.

ಸ್ವಾತಂತ್ರ್ಯೋತ್ತರ ಭಾರತದ ಬಹುಮುಖ್ಯ ಸಮಸ್ಯೆಗಳಲ್ಲಿ ಒಂದಾದ ನಗರೀಕರಣ ಮತ್ತು ಗ್ರಾಮಜೀವನಗಳ ನಡುವಣ ಸಂಘರ್ಷವನ್ನು ಒಂದು ಮತ್ತೊಂದರ ಮೇಲೆ ಬೀರುವ ದುಷ್ಪರಿಣಾಮಗಳನ್ನು ಅಭಿವ್ಯಕ್ತಿಗೊಳಿಸುವ ಮೂಕಬಲಿ; ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ವಿಷಮತೆಯನ್ನು ಗ್ರಾಮೀಣ ಬದುಕಿನ ಹಿನ್ನೆಲೆಯಲ್ಲಿ ನಿರೂಪಿಸುವ ಕ್ರಿಯಾವಿನ್ಯಾಸವನ್ನು ರೂಪಿಸಿಕೊಂಡಿರುವ 'ಕದಡಿದ ನೀರು'; ಧರ್ಮದ ಸಾಂಸ್ಥಿಕ ನೆಲೆಯ ಅವ್ಯವಹಾರಗಳನ್ನು ಅನಾವರಣಗೊಳಿಸುವ 'ಸತ್ತವರ ನೆರಳು'. ಸಂನ್ಯಾಸದ ವಿಕೃತಗತಿಯನ್ನು ಹೇಳುವ 'ಪರಿಮಳದವರು' ನಾಟಕಗಳ ಜೊತೆಗೆ 'ನಾನೇಬಿಜ್ಜಳ' ಎಂಬುದೊಂದು ವಿಶೇಷ ನಾಟಕವನ್ನು ಹೊರತಂದಿದ್ದು; ತಮ್ಮ ಇತರ ನಾಟಕಗಳಲ್ಲಿ ವ್ಯಕ್ತಿಗಳನ್ನು ರೂಪಿಸುವ ಸಾಮಾಜಿಕ

ಸ್ಥಿತಿಗತಿಗಳಿಗೆ ಹೆಚ್ಚಿನ ಪ್ರಧಾನತೆಯನ್ನು ಕೊಟ್ಟಿರುವ ಜಡಭರತರು "'ನಾನೇ ಬಿಜ್ಜಳ'ದಲ್ಲಿ ಮನುಷ್ಯ ವ್ಯಕ್ತಿತ್ವದ ಸೂಕ್ಷ್ಮವೈರುಧ್ಯಗಳಿಗೆ ಅಂತರಂಗದ ಅನ್ವೇಷಣೆ ಹೆಚ್ಚಿನ ಪ್ರಾಧಾನ್ಯವನ್ನು ನೀಡಿದ್ದಾರೆ."[೨] ಈ ನಿಟ್ಟಿನಲ್ಲಿ ಈ ನಾಟಕ ವಿಶೇಷವಾಗಿರುವುದನ್ನು ಗಮನಿಸಬಹುದು.

ಜಡಭರತರೇ ಹೇಳಿಕೊಂಡಿರುವಂತೆ ಈ ನಾಟಕ ಬರೆಯಲು – ಹುಬ್ಬಳ್ಳಿ ಧಾರವಾಡಗಳ ನಡುವೆ ನಿತ್ಯ ಪ್ರವಾಸಿಯಾಗಿ ಬಸ್ಸಿನಲ್ಲಿ ಓಡಾಡುತ್ತಿದ್ದಾಗ, ಹುಬ್ಬಳಿಯ ರಸ್ತೆಯ ಮೇಲೆ ಒಬ್ಬ ಹುಡುಗ ಬಸವೇಶ್ವರನಂತೆ ವೇಷಹಾಕಿಕೊಂಡು ಓಡಾಡುವುದು, ಅವನ ಜೊತೆಗಿದ್ದ ಹಳ್ಳಿಯ ಮೂರ್‍ನಾಲ್ಕು ಮಂದಿ ಆತನಿಗೆ ನಮಸ್ಕಾರ ಮಾಡಿದವರಿಗೆ ಅವನಿಂದ ಪ್ರಸಾದ ಕೊಡಿಸುತ್ತಿದ್ದುದನ್ನು ಕಂಡಿದ್ದರು.

ಇನ್ನೊಮ್ಮೆ ಬಿಜಾಪುರದಿಂದ ಅಥಣಿಗೆ ಹೋಗುವಾಗ ಒಬ್ಬ ಹೆಣ್ಣು ಮಗಳು ಹುಚ್ಚಿಯಾಗಿದ್ದರೂ ತಾನು ಅಕ್ಕಮಹಾದೇವಿ ಎಂದು ಕೂದಲು ಬಿಟ್ಟುಕೊಂಡು, ಬಿಳಿಸೀರೆ ಉಟ್ಟುಕೊಂಡು, ವಚನ ಹೇಳಿಕೊಂಡು ಓಡಾಡುತ್ತಿದ್ದುದನ್ನು ನೋಡಿದ್ದರು.

ಮೊದಲ ಮೂರು ನಾಟಕ – ಮೂಕಬಲಿ, ಕದಡಿದ ನೀರು, ಸತ್ತವರ ನೆರಳುಗಳಲ್ಲೂ ಹುಚ್ಚರ ಪಾತ್ರ ಹೆಣೆಯಿಕ್ಕಿದುವು. ಇದೆಲ್ಲಾ 'ನಾನೇ ಬಿಜ್ಜಳ'ನ ಪಾತ್ರಚಿತ್ರಣಕ್ಕೆ ಹಿನ್ನೆಲೆಯಾಗಿದ್ದಿತು. 'ಮನಸ್ಸು ಈ ಅವಸ್ಥೆಯಲ್ಲಿದ್ದಾಗ ಒಮ್ಮೆ ಪಿರಾಂಡೆಲೋನ 'ಹೆನ್ರಿ ದಿ ಪಿಫ್ತ್' ನಾಟಕ ಓದಿದ್ದೇ, ಈ ನಾಟಕ ಬರೆಯಲು ತೀವ್ರ ಪ್ರೇರಣೆಕೊಟ್ಟಿತು. ಇದೆಲ್ಲದರ ಫಲ ಎಂದರೆ 'ನಾನೇ ಬಿಜ್ಜಳ' ನಾಟಕ. ಪಿರಾಂಡೆಲೋನ ನಾಟಕ ನನ್ನನ್ನು ಬೆನ್ನುಹತ್ತಿದಂತೆ ಬೆನ್ನುಹತ್ತಿ ಬಂತು. ಹುಟ್ಟಿನ ಪದರು ಪದರು ಬಿಡಿಸಿ ತೋರಿಸುವ ಒಬ್ಬ ಪರಮಾವಧಿ ಹುಚ್ಚನ ಪಾತ್ರ ನಿರ್ಮಿಸಬೇಕೆಂಬ ಒಂದು ಆಕಾಂಕ್ಷೆ ಒಳಗಿತ್ತು. ಆ ನನ್ನ ಆಕಾಂಕ್ಷೆಯನ್ನು ಈ ನಾಟಕ ತೃಪ್ತಿಯಾಗುವಂತೆ ಈಡೇರಿಸಿತು".[೩] ಹೀಗೆ ಅವರೇ ಹೇಳುವಂತೆ 'ನಾನೇ ಬಿಜ್ಜಳ' ಪಿರಾಂಡೆಲ್ಲೋನ 'Henry the fifth' ನಾಟಕದ ಕನ್ನಡ ರೂಪಾಂತರವಾಗಿದೆ. "ಭ್ರಮೆ ಮತ್ತು ವಾಸ್ತವ ಅಸ್ವಸ್ಥತೆ ಮತ್ತು ಚಿತ್ತಸ್ವಾಸ್ಥ್ಯಗಳ ನಡುವೆ ತೊಳಲಾಡುವ ಮನುಷ್ಯನ ಅಸ್ತಿತ್ವವಾದಿ ಬಿಕ್ಕಟ್ಟುಗಳನ್ನು ದೃಶ್ಯೀಕರಿಸುವ ಪ್ರಯತ್ನ 'ನಾಲ್ಕನೇ ಹೆನ್ರಿ' ನಾಟಕದಲ್ಲಿದೆ"[೪] ನಾಲ್ಕನೇ ಹೆನ್ರಿ ಒಮ್ಮೆಗೇ ದುರಂತನಾಯಕ ಮತ್ತು ವಿದೂಷಕ ಎರಡೂ ಆಗಿದ್ದಾನೆಂದು ಆಂಗ್ಲವಿಮರ್ಶಕರು ಗುರುತಿಸಿದ್ದಾರೆ. ಇದೇ ರೀತಿಯಾಗಿ 'ಬಿಜ್ಜಳ'ನನ್ನು ರೂಪಿಸಿದ್ದಾರೆ.

ಕಾಲೇಜು ವಿದ್ಯಾರ್ಥಿಗಳಾಗಿದ್ದಾಗ ನಾಟಕವಾಡಿದ್ದು ಆಗ ಆದ ಗಲಾಟೆಯಲ್ಲಿ ಬಿಜ್ಜಳನ ಪಾತ್ರಧಾರಿಯಾದ ಶ್ರೀಮಂತರ ತಂಗಿಯ ಮಗನಾದ 'ಸುರೇಶದೇಸಾಯಿ'ಗೆ

ತಲೆಯ ಹಿಮ್ಮಗ್ಗಲು ಪೆಟ್ಟಾಗಿದ್ದು, ಅವನ ರಾಣಿಯ ಪಾತ್ರಧಾರಿಯಾಗಿದ್ದ 'ಪದ್ಮಾವತಿ'ಯ ಹೆಗಲಮೇಲೆ ಕೈಹಾಕಿದಾಗ ಬಸವಣ್ಣನ ಪಾತ್ರಧಾರಿಯಾದ ಪಾಟೀಲ ನಾಟಕವೆಂಬುದ ಮರೆತು ದೇಸಾಯಿ ಮೇಲೆ ತನ್ನವರೊಂದಿಗೆ ಆಕ್ರಮಣ ಮಾಡಿದ್ದೇ ಈ ಅವಾಂತರಕ್ಕೆ ಕಾರಣವಾಗಿದ್ದು, ಶ್ರೀಮಂತರ ತಂಗಿಯ ಮಗ 'ಸುರೇಶದೇಸಾಯಿ'ಯ ಹುಚ್ಚನ್ನು ಬಿಡಿಸಲು ಬಂದಿದ್ದ ಮನೋವೈದ್ಯ ಡಾಕ್ಟರ್ ಕುಲಕರ್ಣಿಗೆ ಅಂದು ಪದ್ಮಾವತಿ ಪಾತ್ರ ಮಾಡಿದ್ದ, 'ಪದ್ಮಾವತಿ' ಹೇಳಿದ ಕತೆಯಲ್ಲಿ - ಹರಿಹರನ **'ಬಸವರಾಜದೇವರಗಳೆ'**ಯನ್ನಾಧರಿಸಿದಂತೆಯೇ ಕಥೆ ಮುಂದುವರಿ-ಯುತ್ತಿದ್ದು, ಅವಾಂತರವಾಗಿ ಈ ನಾಟಕ ನಿಂತರೂ, ಸುರೇಶದೇಸಾಯಿಗೆ ಹುಚ್ಚು ಹಿಡಿದು ಬಿಜ್ಜಳನಾಗಿಯೇ ವರ್ತಿಸುತ್ತಾನಾಗಿ ಶರಣ ಚಳವಳಿಯ ಇತಿಹಾಸ ಆಗಾಗ್ಗೆ ಬಿಚ್ಚಿಕೊಳ್ಳುತ್ತದೆ. "ದೇಸಾಯಿ ಬಿಜ್ಜಳ' ಅಸ್ತಿತ್ವವಾದಿ ತತ್ತ್ವಜ್ಞಾನದ ವ್ಯಕ್ತಿತ್ವನಿಷ್ಠ ಅಭಿವ್ಯಕ್ತಿಯಾಗಿದ್ದು, ಮನುಷ್ಯನ ವ್ಯಕ್ತಿತ್ವದ ಸೂಕ್ಷ್ಮ ವೈರುಧ್ಯಗಳ ಶೋಧಕನಾಗಿ ಮೂಡಿಬಂದಿದ್ದಾನೆ"[೫] ಶರಣ ಚಳವಳಿಯ ಇತಿಹಾಸದ ಜೊತೆಗೆ ವರ್ತಮಾನ, ಜೊತೆಜೊತೆಗೆ ಬಿಂಬಿತವಾಗುವುದು ಜಡಭರತರ ಪ್ರತಿಭೆಯ ದ್ಯೋತಕವಾಗಿದೆ. ಇತಿಹಾಸ ಮತ್ತು ವರ್ತಮಾನ, ನಾಟಕ ಜೀವನ, ಭ್ರಮೆ ಮತ್ತು ವಾಸ್ತವ, ಅಸ್ವಸ್ಥತೆ ಮತ್ತು ಚಿತ್ತಸ್ವಾಸ್ಥ್ಯ - ಹೀಗೆ ಹಲವು ದ್ವಂದ್ವಗಳ ನಡುವೆ ತೊಳಲಾಡುವ ಮನುಷ್ಯನ ಅಸ್ತಿತ್ವವಾದಿ ಬಿಕ್ಕಟ್ಟುಗಳ ದೃಶ್ಯೀಕರಣವೇ 'ನಾನೇ ಬಿಜ್ಜಳ' ನಾಟಕದ ಮುಖ್ಯ ಆಶಯವಾಗಿದೆ. ಭ್ರಮೆ ಮತ್ತು ವಾಸ್ತವಗಳ ಸುಳಿಯಲ್ಲಿ ಸಿಲುಕಿ ಎರಡು ಮುಖಗಳಾಗಿ ವ್ಯವಹರಿಸುವ 'ದೇಸಾಯಿ ಬಿಜ್ಜಳ'ನಂತೆಯೇ ಇತರ ಪಾತ್ರಗಳೂ ಮುಡಿಬಂದಿವೆ". ಕಾಲೇಜಿನಲ್ಲಿ ನಡೆಯುವ ನಾಟಕದಲ್ಲಿ ಇತಿಹಾಸದ ದೃಷ್ಟಿಯಿಂದಲೇ ಶರಣ ಚಳವಳಿಯನ್ನು ಪಡಿಮೂಡಿಸಿದ್ದಾರೆ. ಈ ನಾಟಕದ ಕೊನೆಯಲ್ಲಿ ಕೃಷ್ಣಬಸವಣ್ಣ - ಕಾಸಪಯ್ಯನನ್ನು "....ಹೌದು ನಾನೇ ಬಿಜ್ಜಳನು.... ಹುಚ್ಚನಲ್ಲ.... ತೊಗೋ ಇದನ್ನು...." ಎಂದು ಕತ್ತಿಯಿಂದ ಇರಿಯುವುದು, ಕೊನೆಗೆ ತನ್ನನ್ನು ಸಮೀಪಿಸುತ್ತಿರುವ ನಾಲ್ಕು ಗೆಳೆಯರನ್ನು ಕಂಡು ದೇಸಾಯಿ ಬಿಜ್ಜಳ ಹೇಳುವ ಮಾತುಗಳು..... "ಈಗ ಹೌದು ಈಗ.... ನೀವು ನನ್ನ ಹತ್ತಿರ ಬರಬೇಕು.... ಬರ್ರಿ... ಇನ್ನೂ ಹತ್ತಿರ .... ಹತ್ತಿರ..... ಹತ್ತಿರ .... ಇನ್ನೂ".... ಮೃತ್ಯುಸಂಬಂಧವಾದ ಇಲ್ಲಿನ ಅಂತ್ಯವು ಕಾಮೂ ಹೇಳಿದ "ಗಂಭೀರವಾದ ಚಿಂತನೆಗೆ ಒಳಗಾಗಲು ತಾತ್ವಿಕವಾಗಿ ಅರ್ಹವಾದ ಒಂದೇ ಒಂದು ವಿಷಯವೆಂದರೆ ಆತ್ಮಹತ್ಯೆಯೊಂದೇ" ಎಂಬ ಅಭಿಪ್ರಾಯವನ್ನು ಸಮರ್ಥಿಸುತ್ತಿದೆ.

ಶರಣಕ್ರಾಂತಿಯ ಹಿನ್ನೆಲೆಯಿಂದ ನೋಡಿದಾಗ ಕಾಲೇಜಿನಲ್ಲಿ ನಾಟಕ, ನಂತರ ಮುಂದೆ ದೇಸಾಯಿ ಬಿಜ್ಜಳ ಹುಚ್ಚನಾದರೂ ಇತಿಹಾಸದ ಬಿಜ್ಜಳನ ಪ್ರತಿರೂಪವಾಗಿ

ವರ್ತಿಸುವುದರಿಂದ ಆ ಸುಳುಹೂ ಸಿಗುವಂತಾಗಿದೆ. ಮುಂದೆ ಡಾಕ್ಟರ್ ಬಂದು ದೇಸಾಯಿಯನ್ನು ಗುಣಪಡಿಸಲು ಎಲ್ಲರಿಗೂ ೧೨ನೇ ಶತಮಾನದ ವೇಷವನ್ನೇ ತೊಡಿಸಿದಾಗ ಪುನಃ ಇತಿಹಾಸ ತೆರೆಗೆ ಬರುತ್ತದೆ.

ಹೀಗೆ ಜಡಭರತರು 'ನಾನೇ ಬಿಜ್ಜಳ' ನಾಟಕದಲ್ಲಿ ತಮ್ಮ ವಿಶೇಷತೆಯನ್ನು ಮೆರೆದಿದ್ದು ಮೊದಲ ಓದಿಗೆ ಓದುಗ ಗೊಂದಲಕ್ಕೀಡಾಗುವಂತಾಗುತ್ತದೆ. ಕೊನೆಯವರೆಗೂ ಆಸಕ್ತಿ, ಕುತೂಹಲವನ್ನು ಕಾಪಾಡಿಕೊಂಡು ಹೋಗುವಲ್ಲಿ ನಾಟಕ ಯಶಸ್ವಿಯಾಗುತ್ತದೆ. ಈ ನಿಟ್ಟಿನಲ್ಲಿ ಜಡಭರತರ ಕೃತಿ ಅಪೂರ್ವವಾದುದಾಗಿದೆ ಎಂದು ನಿರೂಪಿಸಬಹುದು.

ಪಿ.ಲಂಕೇಶ್: ಇವರು ನವ್ಯಸಾಹಿತ್ಯದ ಕವಿ, ಕತೆಗಾರ, ಕಾದಂರಿಕಾರ ಹಾಗೂ ವಿಮರ್ಶಕರೆಂದು ಹೆಸರಾದವರು. ಆದರೂ ನಾಟಕ ಪ್ರಕಾರದಲ್ಲೂ ತಮ್ಮದೇ ಒಂದು ಛಾಪು ಮೂಡಿಸಿದ್ದಾರೆ. 'ಸಂಕ್ರಾಂತಿ', 'ತೆರೆಗಳು', ನನ್ನ ತಂಗಿಗೊಂದು ಗಂಡು ಕೊಡಿ' 'ಟಿ.ಪ್ರಸನ್ನನ ಗೃಹಸ್ಥಾಶ್ರಮ', 'ಪೊಲೀಸರು ಬರುತ್ತಿದ್ದಾರೆ ಎಚ್ಚರಿಕೆ' – ಎಂಬ ನಾಟಕ ಕೃತಿಗಳು ಇವರ ನಾಟಕ ಪ್ರತಿಭೆಗೆ ಸಾಕ್ಷೀಭೂತವಾಗಿ ನಿಂತಿವೆ. ಇವರ ಪ್ರತಿಭೆ ಚಲನಚಿತ್ರ ನಿರ್ದೇಶನಕ್ಕೂ ಹೊರಳಿ ಅಲ್ಲಿಯೂ ರಾಷ್ಟ್ರಮಟ್ಟದ ಪ್ರಶಸ್ತಿಗಳಿಕೆಯಲ್ಲಿ ಯಶಸ್ಸು ಪಡೆಯಿತು. ತಮ್ಮದೇ ಹೆಸರಿನಿಂದ 'ಲಂಕೇಶ್ ಪತ್ರಿಕೆ' ಆರಂಭಿಸಿ ಜನಪ್ರಿಯತೆ ಪಡೆದಿದ್ದು ವಿಶೇಷ.

೧೯೩೫ರಲ್ಲಿ ಶಿವಮೊಗ್ಗ ಜಿಲ್ಲೆ ಕೊನಗವಳ್ಳಿ 'ಗ್ರಾಮದಲ್ಲಿ ಹುಟ್ಟಿ ಮಲೆನಾಡಿನ ದಟ್ಟ ಪರಿಸರದಿಂದ ಬಂದ ಪ್ರತಿಭಾಚೇತನವಾಗಿದೆ. ಎಂ.ಎ. ವಿದ್ಯಾರ್ಥಿಯಾಗಿದ್ದಾಗಲೇ ೧೯೫೮ರಲ್ಲಿ ಬರೆದ 'ವಾಮನ' ಕತೆಯಿಂದ ಪ್ರಾರಂಭವಾದ ಸಾಹಿತ್ಯಕೃಷಿ ಮುಂದೆ ಬೆಳೆಯುತ್ತಾ ಸಾಹಿತ್ಯವಾಮನನ್ನಾಗಿಸಿತು. 'ಕೆರೆಯ ನೀರನು ಕೆರೆಗೆ ಚೆಲ್ಲಿ' ಇವರ ಮೊದಲ ಕಥಾಸಂಗ್ರಹ. ನಂತರ 'ನಾನಲ್ಲ', 'ಉಮಾಪತಿಯ ಸ್ಕಾಲರ್‌ಷಿಪ್‌ಯಾತ್ರೆ' 'ಕಲ್ಲು ಕರುಗುವ ಸಮಯ', ಉಲ್ಲಂಘನೆ ನಂತರದ ಕಥಾಸಂಕಲನಗಳು 'ಬಿಚ್ಚು', 'ತಲೆಮಾರು' – ಕವನಸಂಕಲನಗಳು; 'ಪ್ರಸ್ತುತ' ವಿಮರ್ಶಾಲೇಖನಗಳ ಸಂಗ್ರಹ, 'ಬಿರುಕು', 'ಮುಸ್ಸಂಜೆಯ ಕಥಾಪ್ರಸಂಗ' ಹಾಗೂ 'ಅಕ್ಕ ಕಾದಂಬರಿಗಳು'. ೧೯೭೭ರಲ್ಲಿ ಪ್ರಕಟವಾದ ಇವರ ಜೀವನದ ಸಾಜಗನ್ನಡಿ 'ಹುಳಿಮಾವಿನಮರ' ಲಂಕೇಶರ ಪ್ರತಿಭೆಯ ಅನಾವರಣಮಾಡುತ್ತದೆ ಎಂದೂ ಪ್ರಶಸ್ತಿ ಪುರಸ್ಕಾರಗಳ ಬಗ್ಗೆ ತಲೆಕೆಡಿಸಿಕೊಳ್ಳದಿದ್ದರೂ ೧೯೮೭ರ ರಾಜ್ಯಸಾಹಿತ್ಯ ಅಕಾಡೆಮಿ ಗೌರವ, ೧೯೩ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರಕಿದ್ದು ಇವರ ಪ್ರತಿಭೆಗೆ ಸಂದ ಪುರಸ್ಕಾರವಾಗಿದೆ.

ನವೋದಯ ಸಾಹಿತ್ಯದ ಆದರ್ಶವಾದ, ಭಾವರಂಜಕತೆಗೆ ವಿರುದ್ಧವಾಗಿ ಹೊಸತಲೆಮಾರಿನ ಅತೃಪ್ತಿ, ಅಸಮಾಧಾನ, ಆಕ್ರೋಶಗಳಿಗೆ ದನಿಕೊಟ್ಟವರಲ್ಲಿ ಲಂಕೇಶ್ ಪ್ರಮುಖರೆನ್ನಬಹುದು. ಮೊದಲ ಆಕ್ರೋಶಕ್ಕೆ ಅಭಿವ್ಯಕ್ತಿಮಾಧ್ಯಮವಾಗಿದ್ದು ಕಾವ್ಯ. "ಲಂಕೇಶರ ಬಂಡಾಯ ಮನೋಧರ್ಮಕ್ಕೆ ತಕ್ಕ ಮಾಧ್ಯಮ ಕಾವ್ಯವಾಗಿದ್ದರೂ ಅವರು 'ತಲೆಮಾರು' ಎಂಬ ಸಂಕಲನ ಪ್ರಕಟಿಸಿದ ನಂತರ ಕಾವ್ಯದಲ್ಲಿ ಹೆಚ್ಚು ಆಸ್ಥೆ ತೋರಿಸಲಿಲ್ಲ"[೭] ಮುಂದೆ ಇವರ ಪ್ರತಿಭೆ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಬೆಳಗಿತು. ಅದರಲ್ಲಿ ನಾಟಕ ಪ್ರಕಾರವೂ ಪ್ರಧಾನವಾದುದು.

ಮೊದಲನಾಟಕ 'ಟಿ.ಪ್ರಸನ್ನನ ಗೃಹಸ್ಥಾಶ್ರಮ' ನಂತರದವು 'ತೆರೆಗಳು', 'ನನ್ನ ತಂಗಿಗೊಂದು ಗಂಡುಕೊಡಿ', 'ಗಿಳಿಯು ಪಂಜರದೊಳಗಿಲ್ಲ'. 'ಸಿದ್ಧತೆ' 'ಪೋಲೀಸರಿದ್ದಾರೆ ಎಚ್ಚರಿಕೆ' ಹಾಗೂ 'ಕ್ರಾಂತಿ ಬಂತು ಕ್ರಾಂತಿ' – ಈ ನಾಟಕಗಳ ಮುಖ್ಯವಸ್ತು ನಮ್ಮ ಸಮಾಜದಲ್ಲಿ ಕಂಡುಬರುವ ಆಷಾಢಭೂತಿತನ, ಜನರ ಸಿನಿಕತೆ, ವ್ಯವಸ್ಥೆಯ ನಿಷ್ಫಲತೆ ಬಗ್ಗೆ ಜನರ ಹತಾಶೆ, ಆಕ್ರೋಶ, ಸಾಮಾಜಿಕ ಅಸಮಾನತೆಯ ವಿರುದ್ಧ ಪ್ರತಿಭಟನೆ ಇತ್ಯಾದಿ ದಟ್ಟಪ್ರಭಾವವಿರುವ ಇವರ ನಾಟಕಗಳು Angry Youngman ಪ್ರತಿರೂಪದಂತಿದ್ದು, ಲಂಕೇಶರನ್ನು ಆಧುನಿಕ ಕನ್ನಡರಂಗಭೂಮಿಯ ಆಸ್‌ಬೋರ್ನ್ ಎಂದು ಕರೆಯುವಂತಾಗಿದೆ. 'ಕ್ರಾಂತಿಬಂತು ಕ್ರಾಂತಿ'ಯಲ್ಲಿ ನಮ್ಮ ದೇಶದ ಸಮಾಜವಾದವನ್ನೂ ಅದರ ಹೆಸರಿನಲ್ಲಿ ನಡೆಯುತ್ತಿರುವ ರಾಜಕೀಯ ಡಾಂಭಿಕತನ ಕುರಿತ ವಿಡಂಬನೆಯಿದೆ.

ಈ ಗುಂಪಿನ ನಾಟಕಗಳ ತರುವಾಯ ಬಂದ 'ಸಂಕ್ರಾಂತಿ' ಮತ್ತು 'ಗುಣಮುಖ' ಮತ್ತೊಂದು ಬಗೆಯವು. 'ಸಂಕ್ರಾಂತಿ' ನೆಹರೂಯುಗದ ಉತ್ತಮ ನಾಟಕ ಕೃತಿ ಎಂದು ಡಾ. ಯು.ಆರ್.ಅನಂತಮೂರ್ತಿಯವರಿಂದ ಪ್ರಶಂಸೆಗೆ ಒಳಗಾದ ನಾಟಕ, ಐದು ದೃಶ್ಯಗಳಲ್ಲಿ ಕೃತಗೊಂಡಿರುವ ಈ ನಾಟಕ ಶ್ರಣಕ್ರಾಂತಿಯ ಕಾಲದಲ್ಲಿ 'ವ್ಯವಸ್ಥೆ' ಹಾಗೂ 'ಕ್ರಾಂತಿ'ಯ ನಡುವೆ ಉಂಟಾಗುವ ಸಂಘರ್ಷದ ಚಿತ್ರಣ. 'ಬಿಜ್ಜಳ' ಹಾಗೂ 'ಬಸವಣ್ಣ' ಈ ಶಕ್ತಿಗಳ ಸಂಕೇತವಾಗುತ್ತಾರೆ. ಇನ್ನೊಂದು ಸವರ್ಣೀಯರ ಹಾಗೂ ದಲಿತರ ನಡುವೆ ಘಟಿಸುವ ಸಂಘರ್ಷ ಈ ಸಂಘರ್ಷದ ಸ್ವರೂಪ ನಾಟಕದಲ್ಲಿ ಅತ್ಯಂತ ಸಂಕೀರ್ಣವಾಗಿ ಮೂಡಿಬಂದಿದೆ.

ಹೊಲೆಯರ ಕೇರಿಯ ಜನರ ಮೇಲೆ ಬಸವಣ್ಣನ ಪ್ರಭಾವದ ಅನಾವರಣದ ಮೂಲಕವೇ ಕತೆ ಮುಂದುವರೆಯುತ್ತದೆ. 'ಉಜ್ಜ'ನ ಮೂಲಕ ಅವನ ಮಗ

ಶರಣರುದ್ರನ ಮತ್ತು ಬ್ರಾಹ್ಮಣಪಂಡಿತರ ಮಗಳ ಪ್ರೇಮದ ವಿಷಯವಾಗಿ ನೆರೆದಿದ್ದ ಜನರಿಗೆ ಕತೆ ಹೇಳಿಸುವಾಗ ರುದ್ರನ ಪ್ರವೇಶದೊಂದಿಗೆ ಬಸವಣ್ಣನ ನಿಬಂಧನೆಗಳ ಬಗ್ಗೆ ವಿಮರ್ಶೆ ನಡೆಯುತ್ತದೆ. ಕೆಂಚ ಹೇಳುವ ..... "ಹಂದಿ ಬಂತು ಗದ್ದೆ ಹೊಗತು ಅಂತ ಇಟ್ಕೊ – ಏನಪ್ಪಾ ಮಾಡ್ತಿ ಆವಾಗ? ಎಲಾ ಹಂದ್ಯಪ್ಪ, ಬಸವಣ್ಣ ಕೊಲಬ್ಯಾಡ ಅಂದಾರ ಅಂತೀಯಾ? 'ನನ್ನ ಬೇಕಾದ್ರೆ ಕೊಲ್ಲು' ಅಂತೀಯ ಹೇಳ್ರಲೇ"[೮] ಎಂಬ ಮಾತಿನಲ್ಲಿ ಸಾಮಾನ್ಯ ಜನರ ದೈನಂದಿನ ಜೀವನ ವ್ಯವಸ್ಥೆ ಬಸವಣ್ಣನವರ 'ವೈಚಾರಿಕ ಚಿಂತನೆ'ಯ ನಡುವಿನ ಸಂಘರ್ಷ ತಲೆದೋರಿದೆ. ಮುಂದೆ ಶೂದ್ರ 'ಶರಣರುದ್ರ' ಮತ್ತು ಬ್ರಾಹ್ಮಣಕನ್ಯೆ ಶರಣಧರ್ಮ ವಿರೋಧಿನೆಲೆಯ ಉಷಾರ ಪ್ರೇಮಪ್ರಕರಣ ಅನಾವರಣಗೊಳ್ಳುತ್ತದೆ. ಉಷಾ ಹೇಳುವ ಮಾತುಗಳಲ್ಲಿ ಬಸವವಿರೋಧಿ ಧೋರಣೆ ವ್ಯಕ್ತವಾಗುತ್ತದೆ. "ಭಂಡಾರದ ಹಣತಗೊಂಡು ಸೋಮಾರಿ ಜಂಗಮ ಜನಕ್ಕೆ ರೊಟ್ಟಿ ಚೂರು ಹಾಕಿದ ಬಸವಣ್ಣ"[೯] ಕಾಯಕ ತತ್ತ್ವಬೋಧಿಸಿ ಪ್ರತಿಯೊಬ್ಬರೂ ದುಡಿದು ತಿನ್ನಬೇಕು, ಮಿಕ್ಕಿದ್ದನ್ನು ಸಂಗ್ರಹಿಸದೇ ದಾಸೋಹಕ್ಕೆ ವಿನಿಯೋಗಿಸಬೇಕು ಎಂಬ ನಿಯಮದಿಂದ ಭಂಡಾರದ ಹಣ ಹೆಚ್ಚುವಂತೆ ಮಾಡಿದ್ದು ಇತಿಹಾಸ. ಆದರೆ ಇಲ್ಲಿ ಉಷಾ ಬ್ರಾಹ್ಮಣ ಪುರೋಹಿತಷಾಹಿ ವಿರುದ್ಧ ನಿಂತ ಶರಣಧರ್ಮದ ವಿರೋಧವಾಗಿ ಮಾತಾಡಿ ಆರೋಪ ಹೊರಿಸಿದ ಕೊಂಡೆಯರ ಪ್ರಭಾವಕ್ಕೊಳಗಾಗಿರುವುದು, ಮುಂದೆ ಬಿಜ್ಜಳ ಸಾಕ್ಷ್ಯ ಕೇಳಿದಾಗ, ನಾನು ಪ್ರೀತಿಸಿದ್ದು ಹೊಲೆಯರುದ್ರನನ್ನು, ತನ್ನ ಮೇಲೆ ಆಕ್ರಮಣ ಮಾಡಿದ ಶರಣರುದ್ರನನ್ನಲ್ಲ ಎಂಬಂತೆ "ನನ್ನ ಬಳಿ ಮಾತಾಡುತ್ತಿದ್ದವ ಬೇರೆ, ಆತ ಬಂದು ಮೈಮೇಲೆ ಬಿದ್ದ. ಆತ ನನಗೆ ಬೇಕಾದವನಾಗಿದ್ದ. ಆದರೆ ನಾನು ಎದ್ದು ನೋಡಿದಾಗ ಆತ ಅಲ್ಲಿರಲಿಲ್ಲ. ಅಲ್ಲಿದ್ದವನು ಶರಣರುದ್ರ, ಇದು ಅತ್ಯಾಚಾರವಲ್ಲದೆ ಮತ್ತೇನು?" ಎಂದು ಕೇಳುವ ಅವಳ ಪ್ರಶ್ನೆರೂಪದ ಉತ್ತರದಲ್ಲಿ. ಹೊರಗಿನ ಆಕೃತಿ ಒಂದೇ ಆದರೂ ಒಳಗಿದ್ದ ಪ್ರಕೃತಿ ಬೇರೆಯಾಗಿದ್ದು, ತನ್ನ ವಿರೋಧಿಯಾಗಿದ್ದುದು, ಪ್ರೇಮಭಾವವನ್ನು ದೂರಮಾಡಿ ನಡೆದದ್ದು ಬಲಾತ್ಕಾರವಾಯಿತು ಎಂದು ನಿರೂಪಿಸಿರುವುದು ನಾಟಕಕಾರರ ಸಾಮಾನ್ಯ ಮನೋವಿಜ್ಞಾನ ಜ್ಞಾನದ ಫಲವಾಗಿದೆ. ಬಿಜ್ಜಳ ಹೇಳುವ ರುದ್ರನ ತಲೆದಂಡ ನಮ್ಮೆಲ್ಲರಿಗೆ ಪಾಠವಾಗಬೇಕು' ಎಂದು ಘೋಷಿಸುವುದು. ಸೈನಿಕರು ಉಜ್ಜ ಮತ್ತು ರುದ್ರನನ್ನು ಕರೆದೊಯ್ಯುವರು.

ಇಡೀ ನಾಟಕದಲ್ಲಿ ಶರಣಕ್ರಾಂತಿಯ ಸೆಲೆಯಾದ ಪ್ರತಿಲೋಮ ವಿವಾಹ ಮರೆಯಾಗಿ ರುದ್ರ-ಉಷರ ಪ್ರೇಮಪ್ರಕರಣ ಬಲಾತ್ಕಾರವಾಗಿ ರುದ್ರನ ಬಲಿಯಲ್ಲಿ ಬೆರೆಸಿ

ಪ್ರತಿಲೋಮ ವಿವಾಹಕ್ಕೆ ತೆರೆ ಎಳೆದಿದ್ದಾರೆ. 'ಸಂಕ್ರಾಂತಿ' ನಾಟಕದಲ್ಲಿ ಬಸವಣ್ಣನ ಕತೆ ಒಂದು ಸ್ಥೂಲ ಹಿನ್ನೆಲೆ ಮಾತ್ರವಾಗಿದೆ. "ಅವರ ನಾಟಕಕ್ಕೆ ೧೨ನೇ ಶತಮಾನದ ಚರಿತ್ರೆ ಕೇವಲ ನೆಪಮಾತ್ರ. ಬಸವ, ಬಿಜ್ಜಳರ ಹೆಸರುಗಳನ್ನು ಸಂಕ್ರಾಂತಿ'ಯಿಂದ ಹೊರತೆಗೆದರೆ ಇತಿಹಾಸಕ್ಕೆ ಸಂಬಂಧಿಸಿದ ಯಾವ ಪುರಾವೆ, ದಾಖಲೆಗಳೂ ಸಿಗುವುದಿಲ್ಲ"[೧೦] ಎಂಬ ಅಂತಿಮ ತೀರ್ಮಾನಕ್ಕೆ ಬರಬಹುದಾದರೂ ಬಸವಣ್ಣ ಬಿಜ್ಜಳನಿಗೆ ಹೇಳುವ "ತಮ್ಮ ಕಿರೀಟದ ಒಂದು ವಜ್ರ ಈ ದೇಶದ ಅರ್ಧಹೊಟ್ಟೆಗಳಿಗೆ ಅನ್ನ ಕೊಡಬಲ್ಲದು. ಚನ್ನಕೇಶವನ ಮುತ್ತಿನಹಾರ ಅನೇಕರ ಕಂಬನಿ ಒರೆಸಬಲ್ಲದು. ಇದನ್ನು ಹಲವೊಮ್ಮೆ ಹೇಳಿದ್ದೇನೆ. ಈ ರಾಜ್ಯದ ಪ್ರತಿಯೊಂದು ವಿಗ್ರಹವೂ ಬಡಜನರ ಮೂಕವೇದನೆಯ ಘನರೂಪವಾಗಿದೆ. ನನಗೆ ಮಾತ್ರ ಈ ಎಲ್ಲದರ ಹಿಂದಣ ಮೌಢ್ಯ ದುರಂತವಾಗಿ ಕಾಣುತ್ತದೆ"[೧೧] ಎಂಬ ಮಾತಲ್ಲಿ ಇತಿಹಾಸದ ಮೂಲಕವೇ ವರ್ತಮಾನದ ರಾಜಕೀಯದ ಆಡಂಬರ ವ್ಯವಸ್ಥೆಗೆ ಪ್ರತಿರೋಧದ ಧ್ವನಿಯಾಗಿ ನಿರೂಪಿಸಿದಂತಿದೆ. ಇಂದಿಗೂ ಇದರ ಪ್ರಸ್ತುತತೆ ಕಣ್ಮುಂದೆ ಬರುತ್ತದೆ. ದೇವಾಲಯ, ಮಠಮಾನ್ಯ, ತಮ್ಮ ಸುಖ, ಐಶಾರಾಮತ್ವಕ್ಕೆ ತಲೆಕೆಡಿಸಿಕೊಳ್ಳುವ ನಮ್ಮ ರಾಜಕೀಯ ನಾಯಕರಿಗೆ ಒಬ್ಬ ವಾಸ್ತವವಾದಿ, ಸಮಸಮಾಜವಾದಿ ಹೇಳುವ ತಿಳುವಳಿಕೆಯಂತಿದ್ದು, ಇತಿಹಾಸಕ್ಕೆ ಸಂಬಂಧಿಸಿದ ಪುರಾವೆಗಳೂ ನಗಣ್ಯವಾದರೂ, ಬಸವಣ್ಣನ ಕತೆಯ ಒಂದು ಸ್ಥೂಲ ಹಿನ್ನೆಲೆಯಲ್ಲೇ "ಇಂದಿಗೂ ಪ್ರಸ್ತುತವಿರುವ ಸಾಮಾಜಿಕ ಸಮಸ್ಯೆಗಳ ಜೊತೆಗೆ ಸಾರ್ವತ್ರಿಕವಾದ ಮಾನವೀಯ ಅವಸ್ಥೆಯ ಮೇಲೂ ಬೆಳಕು ಚೆಲ್ಲುವಂತಾಗುತ್ತದೆ."[೧೨] ಎಂಬುದರಿಂದ ಪಿ.ಲಂಕೇಶರ ಪ್ರತಿಭೆಯನ್ನು ನೋಡಬೇಕು. ತಾವಂದುಕೊಂಡ 'ವ್ಯವಸ್ಥೆ – ಕ್ರಾಂತಿ' ಎರಡನ್ನೂ ಮೀರಿದ್ದು ಇರಬೇಕು. ಪ್ರೇಮ ಇಂಥ ಪರ್ಯಾಯವಾಗಬೇಕು' ಎಂಬ ಶೋಧದಲ್ಲಿ ಕಥೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ರಂಗಭೂಮಿಗೆ ತರುವಲ್ಲಿ ತೊಡರಾಗದಂತೆ ರೂಪಿಸಿ ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ.

ಎಚ್.ಎಸ್.ಶಿವಪ್ರಕಾಶ್: 'ಕನ್ನಡ ಸಾಹಿತ್ಯ ಜಗತ್ತಿಗೆ ಕವಿಯಾಗಿ ಬಂದು ಕವಿಯಾಗಿಯೇ ಹೆಚ್ಚು ಪ್ರಸಿದ್ಧರಾದವರು ಎಚ್.ಎಸ್.ಶಿವಪ್ರಕಾಶ್ ಇವರ ಸಾಹಿತ್ಯ ಮೂಲತಃ ತಾತ್ವಿಕವಾದದ್ದು. ಆ ತಾತ್ವಿಕತೆಗೆ ಬೇಕಾದ ಸರಕನ್ನು ಜನಪದ ಕತೆ, ಕಾವ್ಯ, ಐತಿಹಾಸಿಕ ಘಟನಾವಳಿಗಳು, ಪುರಾಣಮೂಲದ ಕಾವ್ಯ, ಕಥೆ, ಮೊದಲಾದವುಗಳಿಂದ ಹೆಕ್ಕಿ ಆಯ್ದುಕೊಂಡು, ಸುಂದರ ನೇಯ್ಗೆಯಿಂದ ವರ್ತಮಾನಕ್ಕೆ ನೀಡುವ ಪ್ರತಿಭಾವಂತರಾಗಿದ್ದಾರೆ. ನಾಟಕ ಒಂದು ಸ್ವತಂತ್ರ ಸೃಜನಶೀಲ ಪರಂಪರೆಯಾಗಿ

[illegible]

ಬೆಳೆದಿರುವ ಭಾಷೆಗಳಲ್ಲಿ ಬಹುತೇಕ ಶ್ರೇಷ್ಠನಾಟಕಕಾರರು ಕವಿಗಳೂ ಆಗಿರುವುದನ್ನು ನೋಡಬಹುದು. ಇಂತಹ ಸಾಲಿನಲ್ಲಿ ಬಹುಶಃ ಶಿವಪ್ರಕಾಶರು ಬರಬಹುದಾದ ರೀತಿಯ ಪ್ರತಿಭೆಯನ್ನು ಕಾವ್ಯನಾಟಕಗಳಲ್ಲಿ ಮೆರೆದು "ಕವಿತೆ ನಾಟಕಗಳಿಗೆ ಎತ್ತಣಿಂದೆತ್ತ ಸಂಬಂಧ? ಸಾಮಾನ್ಯ ಪ್ರೇಕ್ಷಕರನ್ನು ಮುಟ್ಟಲೆಳಸುವ ನಾಟಕ ಭಾಷೆ ಕಾವ್ಯಮಯವಾದರೆ ಹೇಗೆ?" ಎಂಬ ಅನುಮಾನಿತ ಪ್ರಶ್ನೆಗಳಿಗೆ ಉತ್ತರವಾಗಿ 'ಮಹಾಚೈತ್ರ' ನಾಟಕವನ್ನು ರೂಪಿಸಿಕೊಟ್ಟಿದ್ದಾರೆ.

ಭಕ್ತಿಚಳುವಳಿಗಳು ಚರಿತ್ರೆಯಲ್ಲಿ ಉಂಟುಮಾಡಿದ ಸಂಚಲನಗಳು ಸಾಮಾಜಿಕ ಸಂಕರದಿಂದ ಉಂಟಾದುವು. ಭಕ್ತಿ ಚಳವಳಿ ಸಮಾಜೋ ಧಾರ್ಮಿಕ ಸ್ವರೂಪವನ್ನು ಹೊಂದಿದ್ದು ಅದು ಏಕಕಾಲಕ್ಕೆ ಸಾಮಾಜಿಕ, ಧಾರ್ಮಿಕ ಆಂದೋಲನಗಳು ಆಗಿವೆ. ಭಕ್ತಿ ಎನ್ನುವುದು ಧಾರ್ಮಿಕತೆಯ ಶುದ್ಧ ಶೋಧಿತರೂಪ. ಇದನ್ನು ಪಡೆದುಕೊಳ್ಳುವಲ್ಲಿ ಸಾಮಾಜಿಕ ಕಟ್ಟುಪಾಡುಗಳು ಗಣನೆಗೆ ಬರುವುದಿಲ್ಲ ಎಂಬುದನ್ನು ನಿರೂಪಿಸಿಕೊಟ್ಟವರು ಭಕ್ತರು. ಇನ್ನು ಅನುಭಾವಿಗಳಾದರೋ ಮಠೀಯುತೆ, ಪ್ರಭುತ್ವ, ಜಾತಿಯ ಕಟ್ಟುಪಾಡುಗಳ ವಿರುದ್ಧ ನಿಂತ ಸಹಜ ಬಂಡುಕೋರರು. ಅನುಭಾವ ಎನ್ನುವುದು ಆವರಣಮುಕ್ತ ಸ್ಥಿತಿ. ಸಹಜ ಬದುಕಿಗೆ ಹೊರತಾದವುಗಳ ವಿರುದ್ಧ ನಿಲ್ಲುವುದು ಅವುಗಳ ತಾತ್ವಿಕ ವಿನ್ಯಾಸದಲ್ಲೇ ಅಂತರ್ಗತವಾಗಿದೆ. ಆದ್ದರಿಂದ ಶಿವಪ್ರಕಾಶರಿಗೆ ತತ್ವಪದಕಾರರು, ವಚನಕಾರರು ಕಟ್ಟಿದ ಪರ್ಯಾಯಗಳು ಅಮೂಲ್ಯವಾದ ಸತ್ವವೆನಿಸುತ್ತವೆ. ಪರಂಪರೆ ಶೋಧಿಸಿದ ಸಮಾಜೋ ಧಾರ್ಮಿಕ ಅಂತರ್‌ಸಂಬಂಧವನ್ನು ಅವರು ಸಮಕಾಲೀನ ಸಂದರ್ಭದಲ್ಲಿ ಇನ್ನಷ್ಟು ಶೋಧಿಸಬಯಸುತ್ತಾರೆ. ಈ ಹಿನ್ನೆಲೆಯಿಂದ ಹೊರಬಂದಿರುವುದೇ ಮಹಾಚೈತ್ರ'. " 'ಮಹಾಚೈತ್ರ' ವಿಪುಲವಾದ ಚಾರಿತ್ರಿಕ ಪರಿಕರಗಳನ್ನು ಒಳಗೊಂಡಿದ್ದು, ಪುರಾಣ, ದಂತಕತೆ, ಜಾನಪದೀಯ ಇತ್ಯಾದಿ ವಿವರಗಳನ್ನು, ವಿಧಿವತ್ತಾದ ಆಚರಣೆಯನ್ನು ಕ್ರಿಯಾತ್ಮಕವಾಗಿ ತನ್ನ ರಚನೆಯಲ್ಲಿ ಮೇಳೈಸಿಕೊಂಡಿದೆ.......'ಸಂಕ್ರಾಂತಿ' ಬಿಟ್ಟಲ್ಲಿಂದ 'ಮಹಾಚೈತ್ರ' ಆರಂಭವಾಗುತ್ತದೆ. ಕಲ್ಯಾಣದಿಂದ ಬಸವಣ್ಣ ನಿರ್ಗಮಿಸಿದ ಮೇಲೆ ಕಲ್ಯಾಣದಲ್ಲಿ ಏನೇನಾಗಿ ಹೋಯಿತು ಎಂಬುದನ್ನು ನಾಟಕ ತಂಡದವರು ತಿರುಗಿಕಣ್ಣಮುಂದೆ ತಂದುಕೊಳ್ಳತ್ತ, ನಾಟಕ ಆರಂಭಿಸುತ್ತಾರೆ..... ಕಲ್ಯಾಣಕ್ರಾಂತಿ ಕೊನೆಮುಟ್ಟುತ್ತದೆ. ಆದರೇನಂತೆ ಎದೆಯ ಹೊಲದಲ್ಲಿ ಕನಸಿನ ಬೀಜಗಳನ್ನು ಬಿತ್ತಲು ಶರಣರು ಅಲ್ಲಿಂದ ಚದುರುತ್ತಾರೆ_ ವಿನಾಶದ ನಂತರ ಸೃಷ್ಟಿ ಆರಂಭ."[೧೩]

'ಮಿಲರೇಪ' 'ಮಳೆಬಿದ್ದ ನೆಲದಲ್ಲಿ' ಕವನ ಸಂಕಲನಗಳ ಮೂಲಕ ಸಾಹಿತ್ಯವಲಯದಲ್ಲಿ ತಮ್ಮ ಹೆಸರನ್ನು ಸ್ಥಾಪಿಸಿರುವ ಇವರ 'ಜಂಗಮರು ನಾವು', 'ಮಾಯಾದೇವಿ', 'ಸಿಂಗಿರಾಜಸಂಪಾದನೆ', 'ಮರುಳಶಂಕರದೇವ', 'ಕಲ್ಯಾಣದಲ್ಲಿ' ಈ ಕವಿತೆಗಳಲ್ಲಿ ೧೨ನೇ ಶತಮಾನದ ಶರಣ ಚಳವಳಿಯ ನೆಲೆಗಳು ಕ್ರಿಯಾತ್ಮಕ ಅಭಿವ್ಯಕ್ತಿಯನ್ನು ಪಡೆದುಕೊಂಡಿದೆ. "ಮಹಾಚೈತ್ರ ನಾಟಕದಲ್ಲಿ ಆಶಯಗಳು ಸಮಗ್ರತೆಯನ್ನು ಹೊಸ ವಿನ್ಯಾಸವನ್ನು ಪಡೆದುಕೊಂಡಿವೆ."[೧೪]

'ಮಹಾಚೈತ್ರ' ನಾಟಕ ಮೊದಲೆ ಹೇಳಿದಂತೆ ೧೨ನೇ ಶತಮಾನದ ಶರಣಚಳವಳಿಯ ಹಿನ್ನಲೆಯಲ್ಲಿ ರಚಿತವಾಗಿದ್ದು ಅದರ ಏಳುಬೀಳು, ಸೋಲು-ಗೆಲುವುಗಳನ್ನು ಬಿಂಬಿಸುತ್ತದೆ. ಬಸವಣ್ಣ ಒಂದು ಪಾತ್ರವಾಗಿ ನಾಟಕದಲ್ಲಿ ಕಾಣಿಸಿಕೊಳ್ಳುವುದಿಲ್ಲವಾದರೂ, ನಾಟಕದುದ್ದಕ್ಕೂ ಅವನ ವೃತ್ತಾಂತ ಹರಡಿಕೊಂಡಿದೆ. ಪ್ರಭುತ್ವದ ಕ್ರೌರ್ಯದಿಂದ ಶರಣಚಳವಳಿಯ ಆಶಯಗಳು ನುಚ್ಚುನೂರಾಗುತ್ತವೆ.

೧೫ ದೃಶ್ಯಗಳಲ್ಲಿ ಬಿತ್ತರಗೊಂಡಿರುವ ಈ ನಾಟಕದಲ್ಲಿ ಬಿಜ್ಜಳನ ಯಜ್ಞಶಾಲೆಯಲ್ಲಿ ದಕ್ಷಬ್ರಹ್ಮನ ಯಜ್ಞವನ್ನು ನಾಶಮಾಡಿದ ವೀರಭದ್ರನ ರೌದ್ರಸ್ವರೂಪವನ್ನು ತೋರಿ ಬಿಜ್ಜಳನನ್ನು ಕೊಲ್ಲುತ್ತಾರೆ ಶರಣರು. ಹೀಗೆ ಸಾವಿಗೆ ಗುರಿಯಾಗುವ ಬಿಜ್ಜಳನ ಅಂತ್ಯ ಬರ್ಬರವಾದ ಶಿಶಿರದ ಋತುವಿನ ಕೊನೆಗೊಳ್ಳುವಿಕೆಯನ್ನು ನವಚೈತ್ರಋತುವಿನ ಉದಯವನ್ನು ಅತ್ಯಂತ ಮಾರ್ಮಿಕವಾಗಿ ಪ್ರಕಟಿಸುವ ಮೂಲಕ ಕೊನೆ ತೆರೆ ಬೀಳಿಸುವುದು. ಉತ್ತಮ ಅಂತ್ಯಕಂಡಿದೆ.

ನಾಟಕದ ಮೊದಲ ದೃಶ್ಯ ಸಿಂಹಾವಲೋಕನ ತಂತ್ರದಲ್ಲಿ ಪ್ರಾರಂಭವಾಗುತ್ತದೆ. ಮಾಚಿದೇವ ಮತ್ತು ಅಪ್ಪಣ್ಣನವರು ಬಸವಣ್ಣ ಕಲ್ಯಾಣ ಬಿಟ್ಟುಹೋದ ನಂತರ ಮಹಾಮನೆ ನಾಶವಾದ ನಂತರ ಅದೆಲ್ಲವನ್ನು ವರ್ತಮಾನದಲ್ಲಿ ನಿಂತು ಭೂತದ ಚಿತ್ರಣವನ್ನು ಕಣ್ಮುಂದೆ ತಂದುಕೊಳ್ಳುವ ಮೂಲಕ ನಾಟಕ ಪ್ರಾರಂಭವಾಗುತ್ತದೆ. ಈ 'Flash back' ತಂತ್ರವನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ.

ಪ್ರತಿಲೋಮ ವಿವಾಹದ ಪರಿಣಾಮ "ಇಡೀ ನಗರಾನೇ ರಕ್ತದಲ್ಲಿ ಅದ್ದಿ ಹೋಗೋ ಹಾಗಿತ್ತು. ಸಿಟ್ಟಿಗೆದ್ದ ಮಠ, ಅಗ್ರಹಾರದ ಕಡೆಯೋರು ಕೆಳಜಾತಿ ಕೇರಿಯವರ ಮೇಲೆ ಹಲ್ಲೆ ಮಾಡಿದರು. ಆಯಗಾರರೂ ತಿರುಗಿಬಿದ್ದರು. ತ್ರಿಪುರಾಂತಕ ದೇವಾಲಯದ ತಾಳೆಯೋಲೆಗಳಿಗೆ ಬೆಂಕಿಬಿತ್ತು."[೧೫] ಎಂಬ ಚಂದ್ರಶೆಟ್ಟಿಯ ಮಾತುಗಳಲ್ಲಿ ಶರಣಚಳುವಳಿಯ ಪ್ರತಿಲೋಮ ವಿವಾಹದ ಪರಿಣಾಮ

ತೀವ್ರತೆಯ ಸ್ವರೂಪ ಮನಮುಟ್ಟುತ್ತದೆ. ಈ ಮೊದಲೇ ಶಿವರಾಮಯ್ಯನವರು ಹೇಳುವಂತೆ 'ಎದೆಯ ಹೊಲದಲ್ಲಿ ಕನಸಿನ ಬೀಜಗಳನ್ನು ಬಿತ್ತಲು ಶರಣರು ಅಲ್ಲಿಂದ ಚದುರುತ್ತಾರೆ' ತಮ್ಮ ಸಿದ್ಧಾಂತಗಳಲ್ಲಿ ಶರಣರಿಗೂ ಅಷ್ಟು ಬದ್ಧತೆಯಿರುವುದನ್ನು ಕಾಣಬಹುದು.

ಈ ನಾಟಕದಲ್ಲಿ ಶಿವಪ್ರಕಾಶರು ಅಂದಿನ ಇತಿಹಾಸದ ಯಾವ ಅಂಶವನ್ನು ಕಡೆಗಣಿಸಿಲ್ಲ. ಪ್ರತಿಲೋಮ ವಿವಾಹ ನಡೆದು ಬ್ರಾಹ್ಮಣ ಕ್ರಮಿತರ ಕಿವಿಮಾತಿನಿಂದ ಬಸವಣ್ಣನನ್ನು ಮಂತ್ರಿಸ್ಥಾನದಿಂದ ಕೆಳಗಿಳಿಸುವ ಹುನ್ನಾರದಲ್ಲಿ ತೊಡಗಿದ್ದು, ಹೊರಗೆ ಕ್ರಾಂತಿ ನಡೆಯುವ ಭೀತಿಯಲ್ಲಿ ಬಿಜ್ಜಳ ಮಗ್ನನಾಗಿರುವ ಸಂದರ್ಭದಲ್ಲೆ ಬಿಜ್ಜಳನ ಸೋದರ ಕರ್ಣದೇವ ಮತ್ತು ಮಗ 'ಸೋವಿದೇವ'ರ ನಡುವೆ ಉತ್ತರಾಧಿಕಾರತ್ವಕ್ಕಾಗಿ ಬಿಜ್ಜಳನೆದುರಲ್ಲೇ ಸೆಣಸಾಡುವುದು. ಆಗ ಬಿಜ್ಜಳ ತಕ್ಷಣದ ಶಮನತಂತ್ರ ಬಳಸಿ ಉತ್ತರದಾಯತ್ವದ ಸಮಸ್ಯೆಯನ್ನು ಮುಂದೂಡುವುದು, ಇತಿಹಾಸದ ಜೊತೆಗೆ ಪ್ರಸ್ತುತ ರಾಜಕೀಯಕ್ಕೂ ದರ್ಪಣವಾಗಿ ದರ್ಶನಕೊಡುತ್ತದೆ. ಈ ಪ್ರತಿಲೋಮ ವಿವಾಹದ ಪ್ರಬಾವ ಚಿಕ್ಕಮಕ್ಕಳ ಮೇಲೂ ಆಗಿದ್ದು ಆ ಮಕ್ಕಳೂ ಅದೇ ರೀತಿಯ ವಿವಾಹದಾಟವನ್ನು ಆಡುವುದರ ಮೂಲಕ ಬಿಂಬಿಸಿರುವುದು ನಾಟಕಕಾರರ ಸೂಕ್ಷ್ಮ ಮನಸ್ಸಿನ ಚಿಂತನಾವ್ಯಾಪ್ತಿಯನ್ನು ಸೂಚಿಸುತ್ತದೆ.

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಲಕ್ಕಣದಂಡೇಶನ ಶಿವತತ್ತ್ವಚಿಂತಾಮಣಿಯಲ್ಲಿ ಬಿಜ್ಜಳನ ತಂಗಿ ನೀಲಾಂಬಿಕೆಯನ್ನು ಬಸವಣ್ಣ ವಿವಾಹವಾಗಿದ್ದಾನೆಂದು ಹೇಳಿದೆ. ಅದನ್ನೆ ಶಿವಪ್ರಕಾಶರು ಇಲ್ಲಿಯೂ ಬಳಸಿಕೊಂಡಿದ್ದು, ತನ್ನ ತಂಗಿ ನೀಲಾಂಬಿಕೆಯನ್ನು ಬಿಜ್ಜಳ ಕರೆಸಿಕೊಂಡು ಸಮಾಧಾನಪಡಿಸುವುದು, ಅರಮನೆಯಲ್ಲೇ ಸುರಕ್ಷಿತವಾಗಿರುವಂತೆ ಬೇಡುವುದು, ಕೊನೆಯಲ್ಲಿ ಬಹುರೂಪಿ ಚೌಡಯ್ಯ ವೀರಭದ್ರನಾಗಿ ಬಂದು ಬಿಜ್ಜಳನ ಯಜ್ಞಶಾಲೆಯಲ್ಲಿ ಇರಿದಾಗ "ನೀಲಾ.... ನಿನ್ನ ಗಂಡ ಕೊಲೆಗಾರ.... ನನ್ನನ್ನು ಕೊಲ್ಲಿಸಿದ," ಎಂದು ತನ್ನ ತಂಗಿಗೆ ನಿವೇದಿಸಿ-ಕೊಳ್ಳುವಂತೆ ಚಿತ್ರಿಸುವಲ್ಲಿ ನಾಟಕಕಾರರು ಹೇಗೆ ಎಲ್ಲ ಅಂಶಗಳನ್ನು ಬಿಂಬಿಸಿದ್ದಾರೆ ಎಂಬುದು ತಿಳಿಯುತ್ತದೆ. ತನ್ಮೂಲಕ ಕವಿ ಪ್ರತಿಭೆ ನಾಟಕದಲ್ಲೂ ಯಶಸ್ವಿಯ ನಗೆ ಬೀರುವಂತಿದೆ.

ಗಿರೀಶ್‌ಕಾರ್ನಾಡ್–ತಲೆದಂಡ: ನಾಟಕ ಸಾಹಿತ್ಯ ಪ್ರಕಾರದಲ್ಲಿನ ಸಾಧನೆಗಾಗಿಯೇ 'ಜ್ಞಾನಪೀಠಪ್ರಶಸ್ತಿ'ಯನ್ನು ತನ್ನ ಮುಡಿಗೇರಿಸಿಕೊಂಡಿರುವ ಈ ಪ್ರತಿಭೆ ಸರ್ವಜನ

[illegible]

ಸ್ವೀಕಾರಾರ್ಹವಾಗಿದೆ. ಕನ್ನಡ ನಾಟಕ ಸಾಹಿತ್ಯದ ಇತಿಹಾಸದಲ್ಲಿ ವಿಲಾಸಿರಂಗಭೂಮಿ ಆಧಾರಿತ ನಾಟಕ ಪರಂಪರೆ', 'ವೃತ್ತಿರಂಗಭೂಮಿಯ ನಾಟಕ ಪರಂಪರೆ', ಸಾಹಿತ್ಯ ಕೃಷಿಯ 'ಕಾವ್ಯ ನಾಟಕ ಪರಂಪರೆ' ಎಂಬ ಮೂರು ಪರಂಪರೆಗಳಿದ್ದು ೬೦ರ ದಶಕದ ವೇಳೆಗೆ ವೃತ್ತಿರಂಗಭೂಮಿ ಕಣ್ಮರೆಯಾಯಿತು. ವಿಲಾಸಿರಂಗಭೂಮಿ ತನ್ನ ತೀವ್ರತೆಯನ್ನು ಕಳೆದುಕೊಂಡು ಹಾಸ್ಯ ನಾಟಕಗಳಿಗೇ ಸೀಮಿತಗೊಂಡಿತ್ತು. ಅಂತಹ ಸಂದರ್ಭದಲ್ಲಿ ಸಹಿತ್ಯ ಮತ್ತು ರಂಗಭೂಮಿಗಳ ಸಾಧ್ಯತೆಗಳನ್ನು ಅರಸುವ ಗಂಭೀರ ಯಶಸ್ವಿ ಕಾರ್ಯವನ್ನು ಮಾಡಿದವರು ಗಿರೀಶ್‌ಕಾರ್ನಾಡರು. ವಸ್ತು, ರೂಪ, ಪ್ರಯೋಗಗಳಿಂದ ನಾಟಕ ಪ್ರಕಾರದ ಹಲವು ಆಯಾಮಗಳ ಮಹತ್ವವನ್ನು ತೋರಿ ಅದಕ್ಕೆ ಶ್ರೇಷ್ಠ ಸ್ಥಾನವನ್ನು ಕಲ್ಪಿಸಿದರು. ಸಮಕಾಲೀನ ಬದುಕಿನ ಸಂಕೀರ್ಣತೆಯನ್ನು ಪರಂಪರೆಯ ಮೌಲ್ಯಗಳೊಂದಿಗೆ ಇಟ್ಟು ಅನುಭವ ಮತ್ತು ಅರ್ಥಸ್ತರಗಳನ್ನು ನಾಟಕಗಳ ಮೂಲಕವೇ ವಿಸ್ತರಿಸಿದ ಕೀರ್ತಿಗೆ ಪಾತ್ರರಾದವರು ಇವರು. "ಆರಂಭದಲ್ಲಿ ಕಾರ್ನಾಡರು ಕವಿಯಾಗಲು ಹೊರಟಿದ್ದರಂತೆ, ಕೆಲವು ಕವನಗಳನ್ನು ಬರೆದಿದ್ದರು- ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ. ಆದರೆ ಅವರು ತಮ್ಮ ಮೊತ್ತಮೊದಲ ಕೃತಿ 'ಯಯಾತಿ' ಬರೆದ ಮೇಲೆ ತಮ್ಮ ಅಭಿವ್ಯಕ್ತಿ ಮಾಧ್ಯಮ ನಾಟಕವೆಂದು ಕಂಡುಕೊಂಡರು."[೬] ಅಂದಿನಿಂದ ಮೊದಲಾದ ಅವರ ನಾಟಕಸಾಹಿತ್ಯ ಕೃಷಿ ತುಘಲಕ್, ಹಯವದನ, ಅಂಜುಮಲ್ಲಿಗೆ, ಹಿಟ್ಟಿನಹುಂಜ, ನಾಗಮಂಡಲ, ತಲೆದಂಡ, ಅಗ್ನಿ ಮತ್ತು ಮಳೆ ಮತ್ತು ಟಿಪ್ಪುವಿನ ಕನಸುಗಳು ಎಂಬ ಒಟ್ಟು ೯ ನಾಟಕರತ್ನಗಳು ಇವರ ಪ್ರತಿಭಾಮೂಸೆಯಿಂದ ಹೊರಬಂದು ಅವುಗಳ ಫಲವಾಗೇ 'ಜ್ಞಾನಪೀಠ' ಪ್ರಶಸ್ತಿಯ ಗರಿಯೂ ಇವರ ಮುಡಿಗೇರಿ ತನ್ಮೂಲಕ ಇವರ ನಾಟಕ ಪ್ರತಿಭೆ ಜಗಜ್ಜಾಹಿರಾಯಿತು. ಜ್ಞಾನಪೀಠ ಪ್ರಶಸ್ತಿಗೆ ಅರ್ಹವಾದ ಕೃತಿಗಳು ಪ್ರಶಸ್ತಿ ಬಂದ ಮೇಲೆ ಇತರೆ ಭಾಷೆಗಳಿಗೆ ಭಾಷಾಂತರವಾಗುವುದು ಸರ್ವೇಸಾಮಾನ್ಯ. ಆದರೆ ಕಾರ್ನಾಡರ, ವಿಶೇಷವೆಂದರೆ ಪ್ರಶಸ್ತಿ ಬರುವ ಮೊದಲೇ ಹಲವು ಭಾಷೆಗಳಿಗೆ ಇವರ ನಾಟಕ ಕೃತಿಗಳು ಭಾಷಾಂತರವಾಗಿದ್ದು ಮಾತ್ರವಲ್ಲದೆ ಆ ಭಾಷೆಗಳಲ್ಲಿ ಪ್ರಯೋಗವೂ ಆಗಿ ಯಶಸ್ವಿಯಾಗಿದ್ದುದು.

ಇನ್ನು ಶರಣಕ್ರಾಂತಿಯ ಹಿನ್ನಲೆಯಲ್ಲಿ ಬಂದ ಇವರ 'ತಲೆದಂಡ' ನಾಟಕವನ್ನು ಅಧ್ಯಯನ ಮಾಡಿದಾಗ ಬಸವಣ್ಣನ ಪವಾಡವನ್ನು ವಾಸ್ತವ ದೃಷ್ಟಿಕೋನದಲ್ಲಿ ನೋಡಿರುವುದು ವಿಶೇಷವಾಗಿದೆ. ಪ್ರತಿಲೋಮ ವಿವಾಹಕ್ಕೆ ಬಸವಣ್ಣನ ಆಶೀರ್ವಾದ ಪಡೆಯಲು 'ಹರಳಯ್ಯ-ಕಲ್ಯಾಣಿ', ಮಧವರಸ-ಲಲಿತಾಂಬಾ ಬಂದಾಗ ಬಸವಣ್ಣ

[illegible]

ಆಶ್ಚರ್ಯಚಕಿತರಾಗುವುದು, "ಒಂದು ದಿವಸ ಈ ವರ್ಣಾಶ್ರಮಧರ್ಮ, ಈ ಜಾತಿ ವ್ಯವಸ್ಥೆ ಇವೆಲ್ಲ ಅಳಿದು ಹೋಗತಾವ, ಪ್ರತಿಯೊಬ್ಬ ಮನುಷ್ಯ ಆಗತಾನ, ಭಕ್ತ ಆಗತಾನ, ಅದು ತಪ್ಪಿದ್ದಲ್ಲ. ಆದರೆ ಆ ಯುಗ ಮೂಡಲಿಕ್ಕೆ ನಾವಿನ್ನೂ ಬಾಳ ದುಡಿಯಬೇಕು"[೧೭] ಎಂದು ವಾಸ್ತವವಾದಿ ನೆಲೆಗಟ್ಟಿನಲ್ಲಿ ನಿಂತು ಬಸವಣ್ಣ ಮಾತನಾಡುವುದು ಸಾಧಕನಾದವನಿಗೆ ಕಾಯುವ ತಾಳ್ಮೆಯ ಅವಶ್ಯಕತೆಯನ್ನು, ಅಂದು ಕಾಲಪಕ್ವವಾಗಿಲ್ಲದ ವಾಸ್ತವಸಂಗತಿ ಬಸವಣ್ಣನ ಗಮನದಲ್ಲಿದ್ದುದನ್ನು ನಾಟಕ ಧ್ವನಿಸುತ್ತದೆ.

ಶರಣ ಚಳವಳಿಯಲ್ಲಿ ಮುಖ್ಯವಾಗಿ ಹರಿಹರನಿಂದ ಇವತ್ತಿನವರೆಗೂ ಬಸವಣ್ಣನನ್ನು ಪವಾಡ ಪುರುಷನನ್ನಾಗಿ ಚಿತ್ರಿಸಿರುವುದು ಮತ್ತು ಪ್ರತಿಲೋಮ ವಿವಾಹ ಈ ಎರಡೂ ಸಂಗತಿಗಳಿಗೆ ಕಾರ್ನಾಡ್‌ರು ಈ ನಾಟಕದಲ್ಲಿ ಸ್ಪಷ್ಟನೆ ನೀಡಿ ಎರಡರ ಹಿಂದೆಯೂ ಭಾವುಕ ಸಮಾಜದ ಪಾತ್ರವಿರುವುದನ್ನು ಗುರುತಿಸಿರುವುದರಿಂದ ನಾಟಕ ವಿಶೇಷ ನೆಲೆಯಲ್ಲಿ ನಿಲ್ಲುತ್ತದೆ. "ಇಲ್ಲಿ ೧೨ನೇ ಶತಮಾನದ ವಸ್ತು ವಿವರಗಳಲ್ಲಿ ಪ್ರಮುಖವಾದುದನ್ನು ಬಿಡದಿರುವಿಕೆಯ ಮೂಲಕ ಚರಿತ್ರೆಗೆ ಬದ್ಧವಾಗಿದ್ದಾರೆ. ಅನೇಕ ಹೆಸರುಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಹೀಗೆ ಒಂದು ರೀತಿಯ ಚರಿತ್ರೆಗೆ ಬದ್ಧವಾಗಿದ್ದು, ಆಧುನಿಕ ಕಾಲಕ್ಕೆ ಸ್ಪಂದಿಸುವಂತೆ ಬರೆದಿರುವುದು ತಲೆದಂಡದ ವೈಶಿಷ್ಟ್ಯವಾಗಿದೆ. ಏಕಕಾಲದಲ್ಲಿ ಈ ಕೃತಿ 'ಚರಿತ್ರೆ'ಯನ್ನು 'ವರ್ತಮಾನ'ವನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತದೆ".[೧೮] ಬಸವಣ್ಣನ ತತ್ತ್ವಗಳಿಗೆ ಚ್ಯುತಿಬಾರದಂತೆ ವರ್ತಮಾನಕ್ಕೆ ತಕ್ಕಂತೆ ನಿರೂಪಿಸುವುದರಲ್ಲಿ ನಾಟಕಕಾರರ ಪ್ರತಿಭೆಯ ಮಹತ್ವವನ್ನು ಗುರುತಿಸಬಹುದು. "ವ್ಯಕ್ತಿಯ ಯೋಗ್ಯತೆಯನ್ನು ಹುಟ್ಟಿನಿಂದಲೇ ಅಳೆಯುವುದನ್ನು ತೊಡೆದು ಹಾಕಿ ಗುಣದಿಂದಲೇ ಯೋಗ್ಯತೆಯನ್ನು ನಿರ್ಧರಿಸಬೇಕೆಂದು ಸಾರಿದನು."[೧೯] ಡಾ. ಎಚ್.ತಿಪ್ಪೇರುದ್ರಸ್ವಾಮಿ ಗುರುತಿಸಿ ಹೇಳಿದ ಈ ತತ್ತ್ವವನ್ನು ಈ ನಾಟಕದಲ್ಲಿ ತೋರಿಸಿರುವುದನ್ನು ನೋಡಬಹುದು. ರಾಜಕುಮಾರ ಸೋಮದೇವ ಬಸವಣ್ಣನ ಭಂಡಾರವನ್ನು ಪರೀಕ್ಷೆ ಮಾಡಿ ವಿಫಲನಾಗಿದ್ದು, ಬಿಜ್ಜಳನಿಗೆ ತಿಳಿದು, ಮರೆತುಬಿಡುವಂತೆ ಬಸವಣ್ಣನಿಗೆ ಭಿನ್ನವಿಸಿಕೊಳ್ಳುವುದು, ಬಸವಣ್ಣ "ರಾಜಕುಮಾರ' ಎಂದು ಸಂಬೋಧಿಸಿದಾಗ 'ಯುವರಾಜ' ಸಂಬೋಧನೆಯನ್ನು ಬಿಜ್ಜಳ ಸೂಚಿಸಿ ರಾಜಧಾನ್ಯಾಗ ಒಬ್ಬನಾ ರಾಜಪುತ್ರ ಇದ್ದಾಗ ಅವನನ್ನು ಯುವರಾಜ ಅಂತ ಕರಿಯೋದು .. .. ಒಂದು ಪದ್ಧತಿ ಎಂದು ಹೇಳಲು. ಬಸವಣ್ಣ ಆಡುವ ಮಾತುಗಳು ಅವರು ತನ್ಮೂಲಕ ಶರಣಚಳವಳಿಯ ತತ್ತ್ವವನ್ನು ಸಾರುತ್ತವೆ. "ರಾಜ್ಯಭಾರ ಒಂದು ಕಾಯಕ. ಅದು ಹುಟ್ಟಾ ಬರತಕ್ಕಂಥಾ ಹಕ್ಕಲ್ಲ. ಆಸ್ತಿ ಅಲ್ಲ, ಅದನ್ನ ಮಾಡೋ ಅಧಿಕಾರ

ಗಳಿಸಿಕೋಬೇಕು, ಆ ಮ್ಯಾಲ ಅದನ್ನು ಶ್ರದ್ಧೆಯಿಂದ ಮಾಡಬೇಕು."[೨೧] ಎಂಬ ಬಸವಣ್ಣನ ಮಾತುಗಳಲ್ಲಿ ಇಂದು ಅರ್ಹತೆಯಿಲ್ಲದಿದ್ದರೂ ಹಣಬಲ, ಅಧಿಕಾರ ಬಲದಿಂದ ಒಳ್ಳೆಸ್ಥಾನ ಅಲಂಕರಿಸಿ ಮೆರೆಯುವವರಿಗೂ ಅನ್ವಯಿಸುವಂತಿದೆ. ನಾಟಕದ ಕಥಾಸಂವಿಧಾನ, ಮೂಲಕ್ಕೆ ಧಕ್ಕೆಯಾಗದಂತೆ ವರ್ತಮಾನವನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿದೆ ಎಂದೇ ಹೇಳಬಹುದು. ನಾಟಕದಲ್ಲಿನ ಸಂಭಾಷಣೆಗಳು ಸಮಾಜಕ್ಕೆ ಉತ್ತಮ ಸಂದೇಶ ರವಾನಿಸುತ್ತವೆ, ಜಗದೇವ, ಶರಣರು ಜೈನಬಸದಿಯನ್ನು ಹಾಳುಮಾಡುತ್ತಿರುವುದನ್ನು ಸಮರ್ಥಿಸಿದಾಗ ಬಸವಣ್ಣ, "ಹಿಂಸೆಗೆ ಕೈ ಹಾಕೋದ ತಪ್ಪು, ಯಾರು ಹಾಕಿದರೂ ತಪ್ಪು, ಇನ್ನೊಬ್ಬರು ಮಾಡತಾರಂತ ನಾವು ಮಾಡೋದು ಅದಕ್ಕೂ ದೊಡ್ಡ ತಪ್ಪು....."[೨೨] ಎಂದು ಖಂಡಿಸುವಲ್ಲಿ ಸಮಾಜದ ನಡಾವಳಿಯ ಬಗ್ಗೆ ಉತ್ತಮ ಸಂದೇಶ ರವಾನೆಯಾಗುತ್ತದೆ.

ಜಗದೇವ ಬಿಜ್ಜಳನನ್ನು ಕೊಲ್ಲಲು ಬಂದಾಗ ಬಿಜ್ಜಳ ಶಿವಗುಡಿಯಿಂದ ಬಸವಣ್ಣನ ಕಡೆಯಿಂದ ಬಂದಿರುವವರೆಂದು ತಿಳಿದ ಕೂಡಲೇ ಹೊರಬಂದಾಗ 'ಜಗದೇವ' ಬಿಜ್ಜಳನಿಗೆ ಇರಿಯುತ್ತಾನೆ. "ಎಲ್ಲಾ ಮಹಾನ್ ಚಳವಳಿಗಳಲ್ಲೂಈ ರೀತಿಯ ಅತಿವಾದಿಗಳು ಹುಟ್ಟಿಕೊಂಡುಬಿಡುತ್ತಾರೆ ಅಂತ ಕಾಣ್ತದೆ, ಮಾರ್ಕ್ಸ್‌ವಾದಿಗಳ ನಡುವಿನಿಂದ ನಕ್ಸಲ್‌ವಾದಿಗಳು ಹುಟ್ಟಿಕೊಂಡ ಹಾಗೆ".[೨೩] ಇಂದಿನ ನಕ್ಸಲ್‌ರನ್ನು ಪ್ರತಿಬಿಂಬಿಸುವಂತೆ ಜಗದೇವನ ಪಾತ್ರವನ್ನು ಚಿತ್ರಿಸಿರುವುದು ಇಲ್ಲಿನ ವಿಶೇಷವಾಗಿದೆ. ಈ ನಾಟಕದಲ್ಲಿ ಎರಡೂ ಕಡೆಯಿಂದ ಕ್ರೌರ್ಯ, ಹಿಂಸೆಗೆ ಜಗದೇವ-ಸೋಮದೇವ ಮುಂದಾಗುವುದನ್ನು ನೋಡಬಹುದಾಗಿದೆ. "ಬಸವಣ್ಣನ ಕ್ರಾಂತಿಯನ್ನು ಕೇವಲ ಒಂದು ಹೊಸ ಧರ್ಮದ ಉದಯವೆಂದು ನಂಬಿ ಉಗ್ರಗಾಮಿಯಾಗುವ ಜಗದೇವನಂಥವರು, ಧಾರ್ಮಿಕ ವಿರೋಧಿಗಳನ್ನು ಬಗ್ಗುಬಡಿಯಬೇಕೆನ್ನುವ ಜಗದೇವನಂತೆ, ರಾಜಕೀಯ ವಿರೋಧಿಗಳನ್ನು ಬಗ್ಗುಬಡಿಯುವುದೇ ರಾಜಕಾರಣವೆಂದು ನಂಬುವ ಸೋವಿದೇವನಂಥವರು... ಹೊಸ ಕ್ರೌರ್ಯಕ್ಕೆ ಮುಂದಾಗುವರು.[೨೪] ಈ ರೀತಿ ನಾಟಕಕಾರರು ವರ್ತಮಾನವನ್ನು ಬಿಂಬಿಸಿದ್ದಾರೆ.

ಹೀಗೆ ಕಾರ್ನಾಡರು ಒಂದು ಶ್ರೇಷ್ಠ ನಾಟಕ ಕೃತಿಯನ್ನು ನೀಡಿ ತನ್ಮೂಲಕ ತಾವೊಬ್ಬ ಉತ್ತಮ ನಾಟಕಕಾರರೆಂಬುದನ್ನು ಇಲ್ಲಿಯೂ ನಿರೂಪಿಸಿದ್ದಾರೆ.

ಶಿವರಾತ್ರಿ: ಚಂದ್ರಶೇಖರಕಂಬಾರರು ಕವಿಯಾಗಿ, ಜನಪದ ವಿದ್ವಾಂಸರಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ಸಿನಿಮಾ ನಿರ್ದೇಶಕರಾಗಿ, ಸಂಗೀತಗಾರರಾಗಿ

ಖ್ಯಾತರಾದವರು. ಕವಿಯಾಗಿ ೪ ಕವನಸಂಕಲನಗಳನ್ನು ಕೊಟ್ಟ ಕಂಬಾರರ ಪ್ರಮುಖ ಆಯ್ಕೆ ಜಾನಪದೀಯ ನೆಲೆಯೇ ಆಗಿರುವುದನ್ನು ಅವರ ಈವರೆಗಿನ 'ಹೇಳತೇನ ಕೇಳ' ಸಂಕಲನದಲ್ಲಿ ನೋಡಬಹುದು, 'ಕರಿಮಾಯಿ', 'ಸಿಂಗಾರವ್ವ ಮತ್ತು ಅರಮನೆ', 'ಜಿ.ಕೆ.ಮಾಸ್ತರನ ಪ್ರಣಯಪ್ರಸಂಗ' – ಇವರ ಕಾದಂಬರಿಗಳು, ನಾಟಕಕಾರರಾಗಿ 'ಅಂಗಿಮ್ಯಾಲಂಗಿ', 'ಹರಕೆಯಕುರಿ', 'ಜೈಸಿದ್ಧನಾಯ್ಕ' 'ನಾಯೀಕತೆ', 'ಕಾಡುಕುದುರೆ', ಸಿರಿಸಂಪಿಗೆ', 'ಪುಷ್ಪರಾಣಿ', 'ತುಕ್ರನ ಕನಸು', ಇತ್ತೀಚೆಗೆ 'ಶಿವರಾತ್ರಿ' ನಾಟಕಗಳನ್ನು ರಚಿಸಿದ್ದಾರೆ. 'ಚಕೋರಿ' ಎಂಬ ಮಹಾಕಾವ್ಯವೂ ಇವರಿಂದ ಸೃಜನೆಗೊಂಡಿದೆ.

ಇವರ ಪ್ರತಿಭೆಯ ಪ್ರತೀಕವಾಗಿ ಜ್ಞಾನಪೀಠ ಪ್ರಶಸ್ತಿಯೂ ಇವರ ಮುಡಿಗೇರಿರುವುದು ಕನ್ನಡದ ಹೆಮ್ಮೆಯಾಗಿದೆ. ಶರಣಕ್ರಾಂತಿಯ ಹಿನ್ನೆಲೆಯಲ್ಲಿ ಬಂದ ಇವರ ಇತ್ತೀಚಿನ ನಾಟಕ ಕೃತಿ ತನ್ನದೇ ಆದ ಪ್ರಯೋಗಶೀಲತೆಯಿಂದ ವಿಶೇಷವಾಗಿದ್ದು ಪ್ರಮುಖವಾಗಿದೆ. ಇದು ಇವರ ೨೨ನೇ ನಾಟಕವಾಗಿದ್ದು, ಮೊದಲ ಚಾರಿತ್ರಿಕ ನಾಟಕವೆಂಬ ಹೆಗ್ಗಳಿಕೆಯಿದೆ. ಶರಣ ಚಳುವಳಿಯ ಹಿನ್ನೆಲೆಯಲ್ಲಿ ಬಂದ ಕನ್ನಡದ ಇತರ ನಾಟಕ ಕೃತಿಗಳಿಗಿಂತ ಆಶಯ – ಆಕೃತಿಗಳೆರಡರಲ್ಲೂ 'ಶಿವರಾತ್ರಿ' ನಾಟಕ ಭಿನ್ನವಾಗಿದ್ದು ವಿಶೇಷವಾಗಿದೆ.

ನಾಟಕದ ಪ್ರಾರಂಭದಲ್ಲಿ ಸೂತ್ರಧಾರನು ಸಂಕ್ಷಿಪ್ತವಾಗಿ ಹಿಂದಿನ ಕಥೆಯೆಲ್ಲವನ್ನು ನಿರೂಪಿಸಿ, ಕೊನೆಗೆ ಹರಳಯ್ಯ–ಮಧುವರಸರ ಪ್ರಸಂಗಕ್ಕೆ ಬರುತ್ತಾನೆ, ನಾಟಕ ಅಲ್ಲಿಂದ ಮುಂದುವರಿಯುತ್ತದೆ. ಕೆಲವು ಪಾತ್ರಗಳು ಬಾಸ್ತವಿಕ ನೆಲೆಯಲ್ಲಿದ್ದರೆ ಮುಗ್ದಸಂಗಯ್ಯ ಹುಚ್ಚಿಯಾದ ಕಲ್ಯಾಣನಗರಲಕ್ಷ್ಮಿ ಮುಂತಾದವರ ಪಾತ್ರಗಳು ವಾಸ್ತವ ಸಾಂಕೇತಿಕ ನೆಲೆಗಳ ನಡುವೆ ವರ್ತಿಸುತ್ತವೆ. ಅಂದರೆ ಶಿವರಾತ್ರಿ ನಾಟಕವು ೧೨ನೇ ಶತಮಾನದ ಶರಣ ಚಳವಳಿಯನ್ನು ದಲಿತರ ಹಾಗೂ ಇತರ ಕೆಳವರ್ಗಗಳ ದೃಷ್ಟಿಕೋನದಿಂದ ಕಟ್ಟಿಕೊಡಲು ಪ್ರಯತ್ನಿಸುತ್ತದೆ. ಇಲ್ಲಿ ಪ್ರಮುಖವಾಗಿ ಮೂರು ಪ್ರಶ್ನೆಗಳಿಗೆ ಉತ್ತರಕಂಡುಕೊಳ್ಳಬಹುದು: ೧) ಶರಣ ಚಳವಳಿಯನ್ನು ಅಂದಿನ ಕಾಲದ ಕೆಳವರ್ಗದ ಜನರು ಹೇಗೆ ಗ್ರಹಿಸಿದರು? ೨) ಚಳವಳಿಯ ಯಾವ ಮೌಲ್ಯಗಳು ಅವರ ಬದುಕನ್ನು ಪ್ರವೇಶಿಸಿದವು? ೩) ಬಸವಣ್ಣ ಮತ್ತು ಬಿಜ್ಜಳ ಇವರಿಬ್ಬರ ನಡುವೆ ಉಂಟಾಗಿದ್ದ ಬಿರುಕಿನ ಸ್ವರೂಪವೇನು?

ಶರಣ ಚಳವಳಿಯ 'ಇಷ್ಟಲಿಂಗ', 'ಸ್ಥಾವರ ಜಂಗಮ', 'ಮಹಾಮನೆ'– ಇತ್ಯಾದಿ ಪರಿಕಲ್ಪನೆಗಳ ಸಂಪೂರ್ಣ ಅರ್ಥವನ್ನು, ಬಸವಣ್ಣನವರು ಮತ್ತು ಅವರು

ಹುಟ್ಟುಹಾಕಿದ ಚಳವಳಿಯ ಬಗ್ಗೆ ಗೌರವವಿದ್ದ ಅಂದಿನ ಸಾಮಾನ್ಯಜನರು ಗ್ರಹಿಸಲು ಸಾಧ್ಯವಾಗಿರಲಿಲ್ಲ ಇದನ್ನು ನಾಟಕದ ಒಂದು ಸಂದರ್ಭದ ಮೂಲಕ ನಿರೂಪಿಸಬಹುದು. ಕಲ್ಲಪ್ಪ ಮಹಾಮನೆಯ ಬಗ್ಗೆ ವರ್ಣಿಸುತ್ತಾ "ಅಣ್ಣಾವರು ಎಲ್ಲರಿಗೂ ಒಂದೊಂದು ಆತ್ಮ ಕೊಡತಾರಂತ'? ಎಂದು ಕೇಳಲು ತುಂಗವ್ವ- 'ಹೆಂಗೊಂದು?' ಎಂದು ಲೆಕ್ಕಚಾರಕ್ಕೆ ತೊಡಗುವುದು ಕಾಶವ್ವ ಪುಕ್ಕಟೆ ಕೊಡುತ್ತಾರೆಂದು ತಿಳಿಸಿದಾಗ ಕಲ್ಲಪ್ಪ- ಪಕ್ಕಟ ಅಂದರ ಒಂದೆರಡು ತರಬಾರದೇನವಾ ಅಕ್ಕಾ? ನಾವು ಹಾಂಗ ಕುಣಿಸಿಕೋತ ಕಂದರತಿದ್ದಿವಿ"[೨೫] ಎಂದು ಉದ್ಗರಿಸುವುದರಲ್ಲಿ ಜನಸಾಮಾನ್ಯರು ಚಳವಳಿಯ ಬಗ್ಗೆ ಗೌರವವಿದ್ದರೂ ಚಳವಳಿಯ ಪರಿಕಲ್ಪನೆಗಳ ಬಗೆಗಿನ ಅವರ ಜ್ಞಾನದಮಿತಿಯನ್ನು ನಾಟಕಕಾರರು ಪ್ರತಿಬಿಂಬಿಸುವಲ್ಲಿ ಸಫಲರಾಗಿದ್ದಾರೆ.

ಇನ್ನು ಚಳವಳಿಯ ಮೌಲ್ಯಗಳಾದ ಕಾಯಕ ನಿಷ್ಠೆ, ಅಸಂಗ್ರಹ ತತ್ತ್ವ, ಹಾಗೂ ಬಸವಣ್ಣನ ಕೆಲವು ಮೂಲಭೂತ ಮೌಲ್ಯಗಳಾದ 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ' ಇತ್ಯಾದಿ ಇವೆಲ್ಲಾ ಜನಸಾಮಾನ್ಯನ ಬದುಕಲ್ಲಿ ಹಾಸು-ಹೊಕ್ಕಾಗಿದ್ದದನ್ನು ಅರಮನೆಯ ರತ್ನದಸರದ ಅಪಹರಣದ ಪ್ರಸಂಗದಲ್ಲಿ ನೋಡಬಹುದು. ಅರಮನೆಯ ರತ್ನದ ಸರವನ್ನು ಅರಮನೆಯ ಹರಿಹರ ಪಂಡಿತನ ಪ್ರಚೋದನೆಯಿಂದಲೆ ಅವನ ಮಗ ದಾಮೋದರ ಕಳುವು ಮಾಡಿ ತಂದು ಕಾಶವ್ವಳ ಮನೆಯಲ್ಲಿ ಬಚ್ಚಿಟ್ಟು ಭಟರಿಂದ ತಪ್ಪಿಸಿಕೊಳ್ಳಲು ಓಡುತ್ತಾನೆ. ಮನೆಹಲ್ಲಿ ಏನೋ ಕೆಟ್ಟವಾಸನೆ ಎಂದು ಕಾಶವ್ವ ಹೇಳಿದ್ದರಿಂದ ಮುದುಕ "ಸತ್ತ ಹೆಗ್ಗಣದಾಂಗ ನಾರತೈತಲ್ಲ ಮನ್ಯಾಗ?'[೨೬] ಎಂದು ಒಳಹೋಗಿ ನೋಡಿ ಆ ಸರವನ್ನು ತಂದು 'ಇಕಾ ಇಲ್ಲಿದೆ ನೋಡೇ ಹೆಗ್ಗಣ' ಎಂದು ದಾಮೋದರ ಅಲ್ಲಿಗೆ ಬರಲು ಅವನ ಮೇಲೆ ತಿರಸ್ಕಾರದಿಂದ ಎಸೆಯುತ್ತಾನೆ. ಇಲ್ಲಿ ಕಳುವು ಮಾಲು ಎಷ್ಟೇ ಬೆಲೆಬಾಳುವ ವಸ್ತುವಾದರೂ ಅದು ಕೊಳೆತ ಹೆಗ್ಗಣಕ್ಕೆ ಸಮಾನವಾಗಿ ಕಾಣುವುದು, ಮುಂದೆ ಮುಗ್ದಸಂಗಯ್ಯ ಕಾಮಾಕ್ಷಿಗೆಂದು ಆ ಸರವನ್ನು ಕೊಡಲು ಕಾಮಾಕ್ಷಿ 'ಈ ಸರದ ಬೆಲೆ ನನ್ನ ಬೆಲೆಗಿಂತ ಹೆಚ್ಚು, ನನಗಿದು ಬೇಡ'[೨೭] ಎಂದು ಸಾವಂತ್ರಿಗೆ ಕೊಡುವುದು ಮುಂದೆ ಬಿಜ್ಜಳ ಬಂದು ಸಂಗಯ್ಯ ಕಾಮಾಕ್ಷಿಗೆ ಕೊಟ್ಟ ಬೆಲೆ ಎಷ್ಟೆಂದು ಹೇಳು ಎಂದು ಕೇಳಲು ಸಾವಂತ್ರಿ "ತನ್ನ ಬೆಲೆಗಿಂತ ಹೆಚ್ಚಿನದಾದ ಅದು ತನಗೆ ಬೇಡವೆಂದು ಕಾಮಾಕ್ಷಿ ಕೊಟ್ಟಳು. ನಾನು ಅವನ್ನು ಕೊತವಾಲನಿಗೆ ಕೊಡೋಣವೆಂದು ಅಲ್ಲಿ ಇಟ್ಟಿದ್ದೆ"[೨೮] ಎಂದು ಪಾದರಕ್ಷೆ ಇಡುವ ಕೆಳಗಿನ ಮಾಡುವಿನಲ್ಲಿಂದ ತರಿಸಿಕೊಡುವುದು ಇಲ್ಲೆಲ್ಲಾ ಶರಣತತ್ತ್ವಗಳು ಸಾಮಾನ್ಯಜನರ ಬದುಕನ್ನು ಆಳವಾಗಿ ಪ್ರಭಾವಿಸಿರುವುದನ್ನು

ಚಿತ್ರಿಸಿಕೊಡುವ ನಾಟಕಕಾರರು ಅರಮನೆಯ ಪಂಡಿತ ಮೇಲ್ವರ್ಗದ ಹರಿಹರ ತನ್ನ ಮಗನಿಂದಲೇ ರತ್ನಸರ ಕಳುವುಮಾಡಿಸುವುದನ್ನು ತೋರಿಸಿ ಮೇಲ್ವರ್ಗದ ಅರಮನೆಯ ಜನರು ಶರಣಚಳವಳಿಯ ಆದರ್ಶ ತತ್ತ್ವಗಳಿಂದ ಹೊರಗುಳಿದುದ್ದನ್ನು ದರ್ಶಿಸುವ ಮೂಲಕ ತಮ್ಮ ನಾಟಕ ಪ್ರತಿಭೆಯ ತಂತ್ರಕೌಶಲ್ಯವನ್ನು ಮೆರೆದಿದ್ದಾರೆ. ಮುಂದೆ 'ಅರಮನೆ'ಯನ್ನು ಪ್ರತಿನಿಧಿಸುವ ಬಿಜ್ಜಳ ಕಾಮತೃಷೆಗಾಗಿ ಸಾವಂತ್ರಿ ವೇಶ್ಯೆಯ ಮನೆಗೆ ಬಂದರೆ ಮುಗ್ಧಸಂಗಯ್ಯನನ್ನು ಹುಡುಕಿಕೊಂಡು ಮಹಾಮನೆಯನ್ನು ಪ್ರತಿನಿಧಿಸುವ 'ಬಸವಣ್ಣ' ಅಲ್ಲಿಗೇ ಆಗಮಿಸುವುದು ನಾಟಕದಲ್ಲಿ ಎಲ್ಲರ ಕುತೂಹಲವನ್ನು ಅತ್ತ ಸೆಳೆಯುತ್ತದೆ. ಇಲ್ಲಿ ನಾಟಕಕಾರರು ಇವರಿಬ್ಬರ ಮುಖಾಮುಖಿಯಲ್ಲಿ 'ಮಹಾಮನೆ' ಮತ್ತು 'ಅರಮನೆ'ಯ ಮೌಲ್ಯಾಮೌಲ್ಯಗಳನ್ನು ಸ್ಪಷ್ಟಪಡಿಸಿದ್ದಾರೆ. ಬಸವಣ್ಣ ಬಿಜ್ಜಳರ ನೇರ ಮುಖಾಮುಖಿ ಸಂಭಾಷಣೆಯಗಳಿಂದಲೇ ಸ್ಪಷ್ಟಪಡಿಸಿರುವುದು ವಿಶೇಷವಾಗಿದೆ. ಮಹಾಮನೆಯ ದೃಷ್ಟಿಯಲ್ಲಿ ಮಧುವರಸ ಹರಳಯ್ಯನ ಮಕ್ಕಳ ವಿವಾಹ ಪ್ರತಿಲೋಮ ವಿವಾಹವಲ್ಲ. ಅವರಿಬ್ಬರೂ ಈಗ ಲಿಂಗದೀಕ್ಷೆ ತಗೊಂಡು ಶಿವಧರ್ಮದವರಾಗಿದ್ದು, ಇದು ಸ್ವಜಾತಿಯ ಸ್ವಧರ್ಮದ ವಿವಾಹ ಎಂದು ಅಂದಿನ ಜಾತಿಮೀರಲಾಗದ ವ್ಯವಸ್ಥೆಯ ಮೂಲಕವೇ ಜಾತವ್ಯವಸ್ಥೆಗೆ ಕೊಡಲಿಪೆಟ್ಟು ಕೊಡಲು ಈ ರೀತಿಯ ತಾರ್ಕಿಕ ಉತ್ತರ ನೀಡಿರುವುದು ಪ್ರಶಂಸಾರ್ಹವಾದುದು. ಇನ್ನು ಅರಮನೆಯದು ದೇವಭಾಷೆ ಸಾಮಾನ್ಯರಿಗೆ ಎಟಕುವಂಥದಲ್ಲ. ಮಹಾಮನೆಯಲ್ಲಿ ದೇವರು ಭಕ್ತರೊಡನೆ ಭಕ್ತರ ಭಾಷೆಯಲ್ಲಿಯೇ ಮಾತನಾಡುತ್ತಾನೆ. ಇಲ್ಲಿ ವಚನಸಾಹಿತ್ಯ ಪ್ರಭುತ್ವ ಮತ್ತು ಧರ್ಮ ಎರಡನ್ನೂ ಒಟ್ಟಿಗೇ ವಿರೋಧಿಸಿದ ಅಂಶ ಸೂಚ್ಯವಾಗಿದೆ. ಬಸವಣ್ಣನಿಗೆ (ಮಹಾಮನೆ) ಸಾವಂತ್ರಿ ತಾಯಿಯ ಹಾಗೆ ಕಂಡರೆ ಬಿಜ್ಜಳನಿಗೆ ತನ್ನ ದೇಹವನ್ನು ಮಾರಿ ಪುರುಷರ ಕಾಮತೃಷೆ ತೀರಿಸುವ ವೇಶ್ಯೆ ಇತ್ಯಾದಿ ವ್ಯತ್ಯಾಸಗಳನ್ನು ಪ್ರಕಟಿಸುವ ಮೂಲಕ 'ಮಹಾಮನೆ'ಯ ಸದಾಶಯಗಳನ್ನು ನಾಟಕಕಾರರು ಬಿಂಬಿಸಿದ್ದಾರೆ. ಇಲ್ಲಿ ಬಸವಣ್ಣ ಬಿಜ್ಜಳನಿಗೆ ಹೇಳುವ "ರಾಜನ ಕನೂನಿಗೆ ದೈವಪ್ರಜ್ಞೆ ಆಧಾರವಾಗಿರಬೇಕು. ಮನುಷ್ಯನ ಆತ್ಮಗೌರವದ ಬಗ್ಗೆ ಸಮ್ಮತಿ ಇರಬೇಕು. ಎಲ್ಲಿಯತನಕ ಕಾನೂನು ಇದನ್ನು ಮೀರುವುದಿಲ್ಲವೋ ಅಲ್ಲಿಯತನಕ ತಾವು ರಾಜರು"[೨೯] ಈ ಮಾತುಗಳು ಇಂದಿಗೂ ಪ್ರಸ್ತುತವಾಗಿದ್ದು, ಶಾಸನಕಾರರಿಗೆ ಮಾರ್ಗಸೂಚಕಗಳಾಗಿವೆ. ಬಿಜ್ಜಳನಿಗೆ ಜಗದೇವ–ಬೊಮ್ಮರಸರ ಕೈಯಲ್ಲಿ ಸಾಯುವಾಗ ಈ ಮಾತುಗಳ ಅರ್ಥ ಹೊಳೆದು, "ವ್ಯವಸ್ಥೆಗೆ ಹೃದಯವಿಲ್ಲ ಸಂಗಯ್ಯನಿಗೆ ಕರುಣೆಯಿಲ್ಲ ಬಸವಣ್ಣ, ಎರಡು ತಿರಸ್ಕಾರಗಳ ನಡುವೆ ನಿಂತಿದ್ದೇನೆ ಹೇಳಿ ಕೇಳಿ ಭವಿನಾನು, ಬಸವಾ, ಕ್ಷಮಿಸು ನನ್ನ"[೩೦] ಎಂದು

ವಿಷಾದದಿಂದ ಉದ್ಗರಿಸಿ ಸಾಯುವುದಕ್ಕೆ ಸಿದ್ಧನಾಗುವುದು ಬಸವಣ್ಣನ ಮಾತುಗಳಿಗೆ ಸಮರ್ಥನೆ ನೀಡಿದಂತಾಗುತ್ತದೆ. ಶರಣಚಳವಳಿಯ ಸೋಲಿಗೆ ಕಾರಣವನ್ನು ಅಂದೇ ಬಿಜ್ಜಳ "ನಿಮ್ಮ ಸಿದ್ಧಾಂತವನ್ನು ಜೀರ್ಣಿಸಿಕೊಂಬ ಶಕ್ತಿ ಸಮಾಜಕ್ಕಿಲ್ಲ ಬಸವಣ್ಣ"[೩೧] ಎಂದು ಹೇಳಿದ್ದು ಅದೃಷ್ಟವಶಾತ್ ಅದೇ ನಿಜವಾಗುತ್ತದೆ.

ಇಷ್ಟು ಅಚ್ಚುಕಟ್ಟಾಗಿ ನಾಟಕ ಮೂಡಿಬಂದಿದ್ದು, ನಾಟಕಕಾರರ ಸೃಜನಶೀಲ ಪ್ರತಿಭೆಯನ್ನು ಇದರಿಂದ ಅರ್ಥಮಾಡಿಕೊಳ್ಳಬಹುದು. ಈ ನಾಟಕದ ಮುನ್ನುಡಿಯಲ್ಲಿ ಸಿ.ಎನ್.ರಾಮಚಂದ್ರನ್ ಅವರು ಹೇಳಿರುವಂತೆ 'ಕನ್ನಡ ನಾಟಕ ಕ್ಷೇತ್ರಕ್ಕೆ ಅವರಿತ್ತಿರುವ ಮೌಲಿಕ ಕೊಡುಗೆ' ಎಂದು ಹೇಳಬಹುದು.

ಕೊನೆಟಿಪ್ಪಣಿಗಳು

೧. ಸಂ.ಜಿ.ಎಸ್.ಸಿದ್ದಲಿಂಗಯ್ಯ: ಸಾಲುದೀಪಗಳು: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧, ಪು. ೨೧೨.

೨. ಅದೇ, ಪು. ೨೧೬

೩. ಜಡವರತ: ನಾನೇ ಬಿಜ್ಜಳ, ಪ್ರ.ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೭, ಪು. ೭,೮

೪. ಸಂ.ಜಿ.ಎಸ್.ಸಿದ್ಧಲಿಂಗಯ್ಯ, ಸಾಲುದೀಪಗಳು, ಪು. ೨೬.

೫. ಅದೇ, ಪು. ೨೧೬.

೬. ಅದೇ, ಪು. ೨೧೬

೭. ಜಡಭರಿತ, ನಾನೇಬಿಜ್ಜಳ, ಪು. ೧೩೫

೮. ಸಂಕ್ರಾಂತಿ, ಪಿ. ಲಂಕೇಶ್, ಪು. ೧೮.

೯. ಅದೇ, ಪು. ೩೧.

೧೦. ಶಿವರಾಮಯ್ಯ, ಸಾಹಿತ್ಯ ಪರಿಸರ, ಪು. ೧೩೦, ೧೩೧.

೧೧. ಪಿ.ಲಂಕೇಶ್, ಸಂಕ್ರಾಂತಿ, ಪು. ೫೯

೧೨. ಜಿ.ಎಸ್.ಅಮೂರ, ಸಾತ್ವಿಕಪಥ, ಪು. ೧೮.

೧೩. ಸಿವರಾಮಯ್ಯ, ಸಾಹಿತ್ಯಪರಿಸರ, ಪು. ೧೩೨-೧೩೩

೧೪. ಎಚ್.ಎಸ್.ಶಿವಪ್ರಕಾಶ್, ಮಹಾಚೈತ್ರ, ಮುನ್ನುಡಿ

೧೫. ಅದೇ, ಪು. ೭.

೧೬. ಸಾಲುದೀಪಗಳು, ಪು. ೫೧೦.

೧೭. ಗಿರೀಶ್‌ಕಾರ್ನಾಡ್, ತಲೆದಂಡ, ಪು. ೪೫.

೧೮. ಡಾ.ರಾಜುಹೆಗಡೆ, ಗಿರೀಶ್‌ಕಾರ್ನಾಡರ ಸಮಗ್ರ ನಾಟಕಗಳ ಸಮೀಕ್ಷೆ, ಪು.೧೫೬.

೧೯. ಡಾ.ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕಶರಣ ಕಥಾಮೃತ, ಪು. ೪೧.

೨೦. ಗಿರೀಶ್‌ಕಾರ್ನಾಡ್, ತಲೆದಂಡ, ಪು. ೨೩.

೨೧. ಅದೇ, ಪು. ೨೩.

೨೨. ಅದೇ, ಪು. ೩೯.

೨೩. ಯು.ಆರ್. ಅನಂತಮೂರ್ತಿ, ಸಾಹಿತ್ಯವಿಮರ್ಶೆ, ೧೯೯೪, ಪು. ೧೪೬

೨೪. ಟಿ.ಪಿ.ಅಶೋಕ, ಸಾಹಿತ್ಯ ಸಂದರ್ಭ, ಪು. ೧೯೨.

೨೫. ಚಂದ್ರಶೇಖರ ಕಂಬಾರ, ಶಿವರಾತ್ರಿ, ಪು. ೨೩.

೨೬. ಅದೇ, ಪು. ೩೦.

೨೭. ಅದೇ, ಪು. ೩೩.

೨೮. ಅದೇ, ಪು. ೫೧.

೨೯. ಅದೇ, ಪು. ೬೬.

೩೦. ಅದೇ, ಪು. ೮೯.

೩೧. ಅದೇ, ಪು. ೬೩.

೩. (೧) ಬಿಜ್ಜಳನ ಪಾತ್ರ: ತೌಲನಿಕ ವಿವೇಚನೆ

ಬಿಜ್ಜಳ ಕಳಚೂರಿವಂಶದ ಪ್ರಸಿದ್ಧ ಅರಸ. ಇವನ ತಂದೆ 'ಪೇರಮಡಿ' ಚಾಲುಕ್ಯ ೩ನೇ ಸೋಮೇಶ್ವರನ ಕಾಲದಲ್ಲಿ 'ತರ್ದವಾಡಿ'ಯ ಮುಖ್ಯಾಧಿಕಾರಿಯಾಗಿದ್ದನು. ಬಿಜ್ಜಳನ ಮಹತ್ವಾಕಾಂಕ್ಷೆಗೆ ತರ್ದವಾಡಿಯ ಮುಖ್ಯಾಧಿಕಾರತ್ವ ಸಾಲಲಿಲ್ಲ. ಇವನ ಕಾಲದಲ್ಲಿ ಪಟ್ಟಕ್ಕೆ ಬಂದ ೩ನೇ ತೈಲಪ ದುರ್ಬಲನಾಗಿದ್ದರಿಂದ ಸಮಯ ಸಾಧಿಸಿ ಅವನನ್ನು ರಾಜಧಾನಿಯಿಂದ ಓಡಿಸಿ ಮಾಂಡಳಿಕನಾದ ಬಿಜ್ಜಳ ತಾನೇ ರಾಜನಾದ. ಈತ ವೀರನಾಗಿದ್ದಂತೆ, ರಾಜ್ಯಾಂಗ ನಿರ್ಮಾಣ ಕುಶಲವಾಗಿರಲಿಲ್ಲ. ಇವನ ಆಸ್ಥಾನದಲ್ಲಿ ಭಂಡಾರದ ಮಂತ್ರಿಯಾಗಿದ್ದ ಬಸವಣ್ಣನ ಕಾಯಕತತ್ತ್ವ, ಅಸಂಗ್ರಹತತ್ತ್ವ, ಆರ್ಥಿಕ ಚಾಣಾಕ್ಷತೆಯಿಂದ ರಾಜ್ಯದ ಆದಾಯ ಹೆಚ್ಚಿ ಸಮೃದ್ಧವಾಗಿತ್ತು. ಆದರೆ ಪುರೋಹಿತ ಕೊಂಡೆಯರ ಚಾಡಿ ಮಾತಿಗೆ ಮರುಳಾಗಿ ಬಿಜ್ಜಳ ಪ್ರತಿಲೋಮ ವಿವಾಹ ಕಾರಣ ಮುಂದು ಮಾಡಿ ಬಸವಣ್ಣನನ್ನು ಅಧಿಕಾರದಿಂದ ಕೆಳಗಿಳಿಸುತ್ತಾನೆ. ಕಲ್ಯಾಣದಲ್ಲಿ ಕ್ರಾಂತಿಯಾಗಿ ಬಿಜ್ಜಳನ ಸಹಚರರೇ ಅವನನ್ನು ಕೊಲ್ಲುತ್ತಾರೆ. ಬಸವಣ್ಣ ಕೂಡಲ ಸಂಗಮದಲ್ಲಿ ಐಕ್ಯನಾಗುತ್ತಾನೆ. ಇದು ಇತಿಹಾಸ, ಶರಣಕ್ರಾಂತಿಯ ಹಿನ್ನೆಲೆಯಲ್ಲಿ ಬಂದ ಹೊಸಗನ್ನಡದ ಈ ಐದು ಪ್ರಾತಿನಿಧಿಕ ನಾಟಕಗಳಲ್ಲಿ ಈ ಬಿಜ್ಜಳನನ್ನು ನಾಟಕಕಾರರು ತಮ್ಮ ಆಶಯಗಳಿಗನುಗುಣವಾಗಿ ರೂಪಿಸಿದ್ದಾರೆ. ಈ ಐದೂ ನಾಟಕಗಳಲ್ಲಿ ಬಿಜ್ಜಳ ಬಸವಣ್ಣನ ಸ್ನೇಹಿತನಾಗಿ, ಒಬ್ಬ ಪ್ರಭುವಾಗಿ, ಸಂಸಾರಸ್ಥನಾಗಿ, ರಸಿಕನಾಗಿ, ಹೀಗೆ ವಿವಿಧ ಆಯಾಮಗಳಲ್ಲಿ ಹೇಗೆ ಚಿತ್ರಿತಗೊಂಡಿದ್ದಾನೆ ಎಂಬುದನ್ನು ಅಧ್ಯಯನಬೇಕಾಗಿದೆ.

"ಬಸವಣ್ಣನಿಗೂ ಬಿಜ್ಜಳನಿಗೂ ವೈಯಕ್ತಿಕವಾದ ಅನೇಕ ಭೇದಗಳಿದ್ದವು. ಅವರಿಬ್ಬರೂ ಬೇರೆ ಬೇರೆ ಪಂಥಗಳಿಗೆ ಸೇರಿದವರು. ಬಸವಣ್ಣನವರ ಪ್ರತಿಯೊಂದು ಕೆಲಸವನ್ನೂ ಬಿಜ್ಜಳ ಸಹಾನುಭೂತಿಯಿಂದ ನೋಡಲು ಸಾಧ್ಯವಾಗುತ್ತಿರಲಿಲ್ಲ. ಅವರ ಸಾಮಾನ್ಯ ಜೀವನ, ಸ್ಥಾನಮರ್ಯಾದೆಯನ್ನು ಪರಿಗಣಿಸಿ ಸಾಮ್ಯವಾದ ಇತಿಮಿತಿಯಿಲ್ಲದ ದಾನಧರ್ಮ ಅರಸನಿಗೆ ಕೊಂಚ ವ್ಯತಿರೇಕವಾಗಿ ಕಂಡಿರಬಹುದು. ಆದರೆ ಇದನ್ನೇ ಬೆಳೆಸಿ ತಮ್ಮ ಮಧುರ ಬಾಂಧವ್ಯ ಕೆಡಲು ಅವಕಾಶ ಕೊಡಲಿಲ್ಲ."[೧] ಶರಣನಿಂದ ಅತ್ಯಾಚಾರವಾಗಿದೆ. ಎಂದು ಬಿಜ್ಜಳನಿಗೆ ಚಾಡಿ ಹೇಳಿದಾಗ– 'ಸಂಕ್ರಾಂತಿ' ನಾಟಕದಲ್ಲಿ ಅದನ್ನು ಅಲ್ಲೇ ಸಮನ ಮಾಡಲು "ಅದು ಅತ್ಯಾಚಾರ ಯಾಕೇ? ಪ್ರೇಮ ಯಾಕಿರಬಾರದು"[೨] ಎಂದು ಹೇಳಿ ಪ್ರಯತ್ನಿಸುತ್ತಾನೆ. ಶಾಸ್ತ್ರಿಗಳು ಬಿಜ್ಜಳನಿಗೆ ಬಸವಣ್ಣನ ಪ್ರಭಾವದಿಂದ ಕೊಬ್ಬಿರುವವರು ಕೆಳಜಾತಿಯವರು ತಮ್ಮ ಮಡಿಗೆ ತೊಂದರೆ

[illegible]

[illegible]

ಮಾಡುತ್ತಾರೆ ಎಂದು ದೂರು ಕೊಡಲು ಅದಕ್ಕೆ ಬಿಜ್ಜಳ ಪ್ರತಿಕ್ರಿಯಿಸುತ್ತಿರುವಾಗ ಬಸವಣ್ಣನ ಪ್ರವೇಶವಾಗುತ್ತದೆ. 'ಬಿನ್ನ ಬಸವಣ್ಣ, ಒಳ್ಳೆಯ ಸಮಯಕ್ಕೆ ಬಂದಿರಿ.... ನೀವು ನಿಮ್ಮ ಜಾತಿಯ ಬಗ್ಗೆ ಉದ್ದುದ್ದ ಮಾತಾಡಿದ್ದೀರಿ. ಈಗ ಮಾತಾಡಿ ನಮ್ಮ ಬಸವಣ್ಣ ನಿಮಗೆ ತಕ್ಕ ಉತ್ತರ ಕೊಡುತ್ತಾರೆ. ನಮ್ಮ ಭಂಡಾರಿ ಬಸವಣ್ಣ ಯಾವುದೊಂದು ಧರ್ಮವನ್ನು ನಿರ್ಲಕ್ಷಿಸಬಲ್ಲರು ಅನ್ನಿಸುವುದಿಲ್ಲ. ವಿಶಾಲಮನಸ್ಸು ಅವರದು"[೩] ಎಂದು ವ್ಯಂಗ್ಯವನ್ನು ಮರೆಮಾಚಿ ಮಾತಾಡುವ ಮೂಲಕ ಸ್ನೇಹಕ್ಕೆ ಚ್ಯುತಿಬಾರದಂತೆ ಎಚ್ಚರ ವಹಿಸುವುದನ್ನು ನೊಡಬಹುದು. ಬಿಜ್ಜಳ ಬಸವಣ್ಣನೊಂದಿಗೆ ಸಮಾಲೋಚಿಸುವಾಗ ಬಸವಣ್ಣ ಹೊರಗಡೆ ಕೆಲವೇ ನಿಮಿಷಗಳ ಹಿಂದೆ ಕೊಲೆ ನಡೆದಿರುವುದನ್ನು ಹೇಳಲು ಬಿಜ್ಜಳ ಅದು ಶರಣರು ಮಾಡಿದ್ದು ಎನ್ನಲು ಬಸವಣ್ಣ 'ಬಹಳ ಸಲ ನಿಮ್ಮನ್ನು ನಾನು ಮೂರ್ಖ ಅಂದಿಲ್ಲ, ಈಗ ಅನ್ನಬೇಕಾಗಿದೆ'[೪] ಎಂದು ಹೇಳುತ್ತಾರೆ. ಇಲ್ಲಿ ಇವರಿಬ್ಬರ ಸ್ನೇಹದ ಗಾಢತೆಯನ್ನು ನೋಡಬಹುದು. ಮುಂದೆ ಬಸವಣ್ಣ ಆ ಕೊಲೆ ಮಾಡಿದ್ದು ಬ್ರಾಹ್ಮಣರೆಂದು ತಾನು ಜನರ ನಡುವೆ ಇರುವುದರಿಂದ ತಿಳಿದಿದ್ದೇನೆ ಎಂದು ಹೇಳಿ, ಬಿಜ್ಜಳ ನಂಬಬಹುದೇ ಎಂದು ಸ್ನೇಹದಲ್ಲಿ ನಂಬಿಕೆಯ ಪ್ರಶ್ನೆ ಮಾಡಿದ್ದೆ ಬಸವಣ್ಣನಿಗೆ ಬೇಸರ ಹೆಚ್ಚಾಗುವಂತೆ ಮಾಡಿ "..... ನನ್ನನ್ನು ವಿಶ್ವಾಸದಿಂದ ನಡೆಸಿಕೊಂಡಿದ್ದೀರಿ. ನಮ್ಮಿಬ್ಬರ ಮನಸ್ಸು ಕಹಿಯಾಗುವುದಕ್ಕೆ ಮುನ್ನ ನಾನು ಹೊರಡಬೇಕು"[೫] ಎಂದು ಹೇಳಿ ಹೊರಡುವಾಗ ಹೋಗಬೇಡಿ, ಇದು ಅಪ್ಪಣೆಯಲ್ಲ ಬೇಡಿಕೆ ಎಂದು ಬೇಡುವುದು ಅಲ್ಲದೆ 'ನೀವಿಲ್ಲದೆ ನನಗೆ ಬದುಕಿಲ್ಲ ಅನ್ನುವುದು ನಿಮಗೆ ಗೊತ್ತಿದೆ, ನಾನು ನಿಮ್ಮ ಶರಣನಲ್ಲ ಆದರೂ ನನ್ನ ಮಾತಲ್ಲಿ ನಂಬಿಕೆಯಿದೆ ನಿಮಗೆ ಪುಸ್ತಕ ಹೆಂಗಸು, ಸ್ನೇಹಿತರು, ಸಿಂಹಾಸನ ಎಲ್ಲ ತೊರೆದು ನಿಮ್ಮೊಂದಿಗಿದ್ದೇನೆ" ಎಂಬಲ್ಲಿ ಬಸವಣ್ಣನ ಸ್ನೇಹದ ಮೇಲಿನ ತನ್ನ ಬದ್ಧತೆಯನ್ನು ತೋಡಿಕೊಂಡಿರುವುದು ಬಿಂಬಿತವಾಗಿದೆ. ಬಸವಣ್ಣ ಹೊರಡಲುನುವಾದರೆ ಬಿಜ್ಜಳ ಕುಳಿತುಕೊಳ್ಳಿ. ನೀವಿಲ್ಲದಾಗ ನನಗೆ ಏಕಾಂತತೆಯ ಭಯ ಎಂದು ಹೇಳುವಲ್ಲಿ ಬಸವಣ್ಣನೊಂದಿಗಿನ ಆತನ ಆತ್ಮೀಯತೆ ಧ್ವನಿತವಾಗಿದೆ. ಬಸವಣ್ಣ ಗಂಭೀರತೆ-ಯಲ್ಲಿದ್ದಾಗ "ಕೊಂಚ ಮಂದಹಾಸ ಬೀರಿ ಬಸವಣ್ಣ ನಾನು ನನ್ನ ಮಾತಲ್ಲಿ ಸಿಕ್ಕು, ನೀವು ನಿಮ್ಮ ಮಾತಲ್ಲಿ ಸಿಕ್ಕು ಸಾಯುತ್ತೇವೆ. ಇಲ್ಲಿ ಪಟ್ಟ ಸುಖ ಮಾತ್ರ ಎಲ್ಲೆಲ್ಲೂ ಹಬ್ಬುತ್ತೆ"[೬] ಎಂದು ಹೇಳುವಲ್ಲಿ ಬಸವಣ್ಣನಂಥ ಸ್ನೇಹಿತನೊಂದಿಗಿದ್ದಾಗ ಗಂಭೀರವಾದ ವಿಷಯದ ಚರ್ಚೆಯ ಜೊತೆಗೆ ಸಂತೋಷದ ವಾತಾವರಣವೂ, ನಗೆಯ ಪರಿಸರವೂ ಇರಬೇಕೆಂದು ಬಯಸುವ ಒಬ್ಬ ಸಹಜ ಸ್ನೇಹಿತನಾಗಿ ಲಂಕೇಶರು ನೋಡಿರುವುದು

[illegible]

ಕಂಡುಬರುತ್ತದೆ. ಇಷ್ಟೆಲ್ಲಾ ಬಸವಣ್ಣನೊಂದಿಗೆ ಒಳ್ಳೆಯ ಸ್ನೇಹಭಾವವಿದ್ದು ತಾನೂ ಒಳ್ಳೆಯ ಸ್ನೇಹಜೀವಿ ಎಂಬುದನ್ನು ತೋರಿದರೂ ಈ ಸ್ನೇಹಕ್ಕೆ ತಡೆಗಳು ಚಾಡಿಗಳಿಂದ ಬರುತ್ತಿದ್ದುವು. "ತಾವು ತಮ್ಮ ಶರಣರಿಗೆ ಬೊಕ್ಕಸದ ದುಡ್ಡು ಹಂಚಿದಿರಿ... ಅದು ಹೇಗೋ ಜನಕ್ಕೆ ಗೊತ್ತಾಯಿತು. ನಿಮ್ಮ ಶತೃಗಳೆಲ್ಲ ನನ್ನಲ್ಲಿ ಬಂದು ನಿಮ್ಮ ಮೆಲೆ ತಮ್ಮ ಇಪ್ಪತ್ತಾರನೇ ಚಾಡಿ ಹೇಳಿದರು – ಒಂದು ಸಮಾಜದ ವ್ಯವಸ್ಥೆಯನ್ನು ಬದಲಾವಣೆ ಮಾಡಹೊರಟ ವ್ಯಕ್ತಿಗೆ ಶತೃಗಳು ಹೆಚ್ಚಾಗುತ್ತಾರೆ. ಅದರಂತೆ ಬಸವಣ್ಣನಿಗೆ ಕಲ್ಯಾಣದಲ್ಲಿ ರಾಜನಾದ ಬಿಜ್ಜಳನಿಗಿಂತ ಹೆಚ್ಚು ಶತೃಗಳಿದ್ದರು. ನಮಗೆಲ್ಲಾ ಗೊತ್ತಿರುವ ಭಂಡಾರದ ಹಣದ ದುರುಪಯೋಗದ ವಿಷಯ ರಾಜನಿಗೆ ತಲುಪಿದ ಬಸವಣ್ಣನ ವಿರುದ್ಧದ 'ಇಪ್ಪತ್ತಾರನೇ ಚಾಡಿ' ಎಂಬುದರಿಂದ, ಬಸವಣ್ಣನ ಸ್ನೇಹ ಒಂದು ಕಡೆ ಜನರ ಒತ್ತಡ ಮತ್ತೊಂದು ಕಡೆಯಾಗಿ ಇಕ್ಕಳದಲ್ಲಿ ಸಿಲುಕಿಕೊಂಡಂತಹ ಸ್ಥಿತಿಯಲ್ಲಿದ್ದುದು, ಭೋಜ, ಕಾಳಿದಾಸರ ಸ್ನೇಹದಂತೆ ಐತಿಹಾಸಿಕ ಸತ್ಯವಾಗಿ ಕಂಡುಬರುತ್ತದೆ.

'ಮಹಾಚೈತ್ರ' ನಾಟಕದಲ್ಲಿ ಬಸವಣ್ಣ ಈಗಾಗಲೇ ಕಲ್ಯಾಣತೊರೆದಿದ್ದು. ಪ್ರಭುಗಳೇ ಅವರನ್ನು ಮಹಾಭಂಡಾರಿ ಹುದ್ದೆಯಿಂದ ತೆಗೆದರು ಎಂದು ತಿಳಿದಾಗ ನಾಗಶೆಟ್ಟಿ ತಾನು ದೋರಸಮುದ್ರಕ್ಕೆ ಹೋದ ದಿನ, ತನಗಿನ್ನೂ ಕಣ್ಣಿಗೆ ಕಟ್ಟಿದಂತಿದ್ದು, ಬಸವಣ್ಣೋರ ಒಬ್ಬನೇ ಮಗ ಸತ್ತಿದ್ದು ಪ್ರಭುಗಳು ತಮ್ಮ ಮಗನೇ ಸತ್ತ ಹಾಗೆ ಶೋಕಿಸುತ್ತಿದ್ದರು. ಎಂದು ಆಶ್ಚರ್ಯಚಕಿತನಾಗಿ ಅವರಿಬ್ಬರ ಸ್ನೇಹಬಂಧುರತೆಗೆ ತಾನೇ ಸಾಕ್ಷಿಯಾಗಿದ್ದನ್ನು ಪ್ರಕಟಿಸುವ ಮೂಲಕ, 'ಇಪ್ಪತ್ತಾರನೇ ಚಾಡಿ' ಎಂದು ಹೇಳುವ ರಾಜನ ಮೇಲಿದ್ದ ಒತ್ತಡವನ್ನು ಈತನೂ ಸಮರ್ಥಿಸುತ್ತಿದ್ದಾನೆಂಬಂತೆ ಬರುತ್ತದೆ. ಯಾವ ಚಾಡಿಯೂ ಪ್ರಯೋಜನಕ್ಕೆ ಬಾರದಿದ್ದುದು ಬಸವಣ್ಣನ ಶತೃಪಾಳಯದಲ್ಲಿ ಬೇಸರಿಕೆ ತಂದಿದ್ದು, ಸಮಯಕ್ಕೆ ಕಾಯುತ್ತಿದ್ದ ಅವರಿಗೆ 'ವರ್ಣಸಂಕರ ವಿವಾಹ' ಒಂದು ಒಳ್ಳೆಯ ನೆಪವಾಗಿ ಒದಗಿ ಬಂತು; ರಾಜನ ಮೇಲೆ ಬಲವಾದ ಒತ್ತಡ ಹೇರಲು. ಪ್ರಭುಗಳು ತ್ರಿಪುರಾಂತಕ ದೇವಲಯಕ್ಕೆ ಪೂಜೆಗೆಂದು ಹೋದಾಗ ಮಂದಿರಕ್ಕೆ ಬಂದ್ ಮಾಡಿ ಇಂಥ ನೀಚಕಾರ್ಯ ನಡೆಯುವಲ್ಲಿ ಪೂಜೆ ಪುನಸ್ಕಾರ ಇಲ್ಲವೆಂಬ ಪ್ರತಿಭಟನೆ ಎದುರಿಸಬೇಕಾಯಿತು. ಇದರ ಬಗೆಗೆ ಮೊದಲೇ ಬಿಜ್ಜಳನಿಗೆ ದೂರು ನೀಡಿದ್ದು ಪ್ರಯೋಜನವಾಗದೆ ಈ ರೀತಿಯ ಪ್ರತಿಭಟನೆಗೆ ಮುಂದಾದರೆಂಬುದು ಧ್ವನಿತವಾಗಿ ಆಗಲೂ ಬಿಜ್ಜಳ ಬಸವಣ್ಣನನ್ನು ಬಿಟ್ಟುಕೊಡಲು ಏಕಾಏಕಿ ಸಮ್ಮತಿಸಿರಲಿಲ್ಲವೆಂಬುದರಿಂದ ತನ್ನ ಸ್ನೇಹ ಗಾಢತೆಯನ್ನು ಅರ್ಥಮಾಡಿಸುತ್ತಾನೆ. ಇಲ್ಲಿ ಚಂದ್ರಶೆಟ್ಟಿ ಹೇಳುವ 'ಕೊನೆಗೆ ಪ್ರಭುಗಳಿಗೆ ಬಸವಣ್ಣನವರನ್ನು ಮಹಾಭಂಡಾರಿ ಪದವಿಯಿಂದ ತೆಗೀಬೇಕಾಯ್ತು'

[illegible]

ಎಂಬ ಮಾತಿನಲ್ಲಿ ಅದು ಬಿಜ್ಜಳನ ಕೊನೆಯ ಆಯ್ಕೆಯೇ ವಿನಾ ಮೊದಲ ಆಯ್ಕೆಯಲ್ಲ ಎಂಬುದು ಇವನ ಸ್ನೇಹಕ್ಕೆ ಪುಷ್ಟಿ ನೀಡುತ್ತದೆ. ಬಸವಣ್ಣನ ನಿರ್ಗಮನದ ನಂತರವೂ ಬಿಜ್ಜಳ ಬಸವಣ್ಣನನ್ನು ನೆನೆಯದಿರುವುದಿಲ್ಲ. ಮಂಗಳಗುಪ್ತ ಮತ್ತು ಮುಕುಂದಭಟ್ಟ ರೊಂದಿಗೆ ಸಮಾಲೋಚಿಸುತ್ತಾ ಕೊರಡಾಗಿದ್ದ ಈ ಸಾಮ್ರಾಜ್ಯ ವೃಕ್ಷವನ್ನು ಕೊನರಿಸುವ, ಕುಸಿದಿದ್ದ ಆಡಳಿತವನ್ನು ಎತ್ತಿ ನಿಲ್ಲಿಸುವ, ಬರಿದಾಗಿದ್ದ ಬೊಕ್ಕಸವನ್ನು ತುಂಬಿಸುವ ಹೊಣೆಗಾರಿಕೆ ತಮ್ಮ ಮೇಲಿದ್ದು ಆಗ ಮಂಗಳವೇಡೆಯಲ್ಲಿ ತಮ್ಮ ನೆಚ್ಚಿನ ಭಂಡಾರಿಯಾಗಿದ್ದ ಬಸವಣ್ಣ ಎಂದು ಹೇಳಿ ತನ್ನನ್ನು ಆಕರ್ಷಿಸಿದವನೆಂದು ಸ್ವಗತಕ್ಕೆ ತೊಡಗುತ್ತಾನೆ. "ಆಗ ಅವನಿಗಿನ್ನೂ ಕುಡಿಮೀಸೆಯ ಹರೆಯ ಕಪ್ಪಡಿಯ ವಿದ್ಯಾರ್ಥಿ ಪೀಠದಲ್ಲಿದ್ದಾಗಲೇ ಅವನ ಹೆಸರು ನನ್ನ ಕಿವಿಗೂ ಬಿದ್ದಿತ್ತು. ಎಲ್ಲರ ಬಾಯಲ್ಲೂ ಅವನ ಮಾತೇ ಮೊದಲು ಕಂಡಾಗಲೇ ಮನಸ್ಸನ್ನು ಸೆರೆಹಿಡಿದ ಚೆಲುವ"[೭] ಎಂದು ಮನದೊಳಗೇ ನೆನೆಯುವುದರಿಂದ ಬಿಜ್ಜಳನ ಬಸವಣ್ಣನ ಮೇಲಿನ ಸ್ನೇಹದ ಗಾಢತೆಯು ಅರ್ಥವಾಗದಿರದು.

'ತಲೆದಂಡ' ನಾಟಕದಲ್ಲಿ ತಾನಿಲ್ಲದಾಗ, ಬಸವಣ್ಣನಿಲ್ಲದಾಗ ತನ್ನ ಮಗ ಸೋವಿದೇವ ಭಂಡಾರಿ ತೆಗೆಸಿರುವುದು ಕೇಳಿ ಬಿಜ್ಜಳ ಸಿಟ್ಟಿಗೇಳುತ್ತಾನೆ. ತನ್ನ ಹೆಂಡತಿ ರಂಭಾವತಿ ತನ್ನ ಮಗನಿಗೆ ಅವಮನವಾಗುವಂತೆ ನಡೆದುಕೊಂಡಿದ್ದಕ್ಕಾಗಿ ಬೇಸರಗೊಂಡಾಗ, ಬಿಜ್ಜಳ ಹೇಳುವ : "ಬಸವಣ್ಣ ಇಲ್ಲದ ವ್ಯಾಳೇಕ ಅವನ ವಿರುದ್ಧ ವಿಚಾರಣೆ ಸುರುಮಾಡಬಾರದಿತ್ತು, ಮಾಡಿಸಿದ.... ನಾನು ವಿಜಯಯಾತ್ರೆ ಮುಗಿಸಿ ದಣಿದು ಹಣ್ಣಾಗಿ ಊರಿಗೆ ಬಂದರೆ ಅಗಸಿ ಬಾಗಲದಾಗ ಮೊದಲು ಯಾ ಸುದ್ಧಿ ಕಿವಿಗೆ ಬೀಳಬೇಕು? ಹತ್ತು ದಿವಸಾತು ಬಸವಣ್ಣ ಯುವರಾಜರನ್ನ ಕಾರಾಗಾರದಾಗ ಕೂಡಿಸಿಕೊಂಡಾಂಗ ಹಿಡಕೊಂಡು ಕುಂತಿದ್ದ. ಇಂದ ಮುಂಜಾಲೆ ಲೆಕ್ಕ ಬರೆದು ಆದ ಮ್ಯಾಗ ಬಿಟ್ಟಾನ ಮನೀಗೆ ಹೋಗಾಕ ಅಂತ. ಮತ್ತೀಟೆಲ್ಲಾ ಮಾನ ಕಳಕೊಂಡಿದ್ದಕ್ಕೆ ಕಡೀಕೆ ಏನು ಸಿಕ್ಕಿತಂದಿ? ಒಂದು ಒಡಕು ಕವಡಿ ಹೆಚ್ಚು ಕಮ್ಮಿ ಆಗಿತ್ತ? ಒಂದು ದುಗ್ಗಣಿ ಏರುಪೇರು? ಬಸವಣ್ಣನ ಲೆಕ್ಕ ಅದು, ಬ್ರಹ್ಮಲಿಖಿತ, ಒಮ್ಮೆ ಬರದರ ಒಂದಂಕಿ ಅಳಗ್ಯಾಡೂದಿಲ್ಲ. ಅದಕ್ಕ ಭಂಡಾರಿ ಮಾಡೀನವಗ ಗೊತ್ತಾತ?"[೮] ಎಂಬ ಮಾತಲ್ಲಿ ಏಕಕಾಲಕ್ಕೆ ಬಿಜ್ಜಳನಿಗೆ ತನ್ನ ರಾಜವಂಶದ ಬಗೆಗಿದ್ದ ಅಭಿಮಾನದ ಜೊತೆಗೆ ಬಸವಣ್ಣನ ಮೇಲಿನ ನಂಬಿಕೆಯನ್ನೂ ಸ್ನೇಹದೊರತೆಯನ್ನೂ ಬಿಂಬಿಸಿದ್ದಾರೆ ನಾಟಕಕಾರರು.

ವರ್ಣಸಂಕರ ವಿವಾಹಕ್ಕೆ ಬಸವಣ್ಣ ಸಮ್ಮತಿ ಕೊಟ್ಟಿಲ್ಲದ್ದು ಕೇಳಿ ಸಂತೋಷಪಟ್ಟ ಬಿಜ್ಜಳ ಬಸವಣ್ಣನ ಬಳಿ ಬಂದು ಸಂತಸ ವ್ಯಕ್ತಪಡಿಸುತ್ತಾನೆ. ಆದರೆ ಬಸವಣ್ಣ ಬ್ಯಾಡ

[illegible]

[illegible]

ಅನ್ನೋ ಅಧಿಕಾರ ನನಗಿಲ್ಲ ಎಂದಾಗಲೂ ಬೇಸರ ಪಡದ ಬಿಜ್ಜಳ "ಇಲ್ಲೀಮಟ ಜಾತಿ-ಮತ-ವರ್ಣ ಎಲ್ಲಾ ಹುಸಿ ಅಂದವ ಈ ಲಗ್ನಕ್ಕ ಅಡ್ಡಗಾಲು ಹಾಕಿದರ ಮಂದಿ ಕೇಳೀತ"?[೯] ಎಂದು ವಾಸ್ತವವನ್ನು ಅರ್ಥಮಾಡಿಕೊಂಡವನಂತೆ ವರ್ತಿಸುತ್ತಾನೆ ಹಾಗೂ ಬಸವಣ್ಣನ ಮೇಲಿನ ಅಲ್ಲದ್ದನ್ನು ಮಾಡಲಾರರು ಎಂಬ ನಂಬುಗೆಯನ್ನು ಪ್ರಕಟಿಸುತ್ತಾನೆ. ಬಸವಣ್ಣ ಈ ಮದುವೆ ನಡೆಯುತ್ತದೆ ಎಂದು ಖಂಡಿತವಾಗಿ ಹೇಳುತ್ತಾರೆ. ಬಸವಣ್ಣ ತಮ್ಮ ಸ್ನೇಹಕ್ಕಾದರೂ ಬೆಲೆ ಕೊಟ್ಟು ತನ್ನ ಮಾತು ಕೇಳಿ ಈ ವರ್ಣಸಂಕರ ವಿವಾಹ ತಡೆದು, ಆಗುವ ಅನಾಹುತವನ್ನು ತಪ್ಪಿಸಬಹುದು ಎಂಬ ನಂಬಿಕೆ ಹುಸಿಯಾಯಿತು. ಬೇಸರದಿಂದ "..... ನನಗೊಂದು ಮಾತು ಇಂದು ಮನದಟ್ಟಾಗೇತಿ, ನಿನಗೆ ಗೆಳೆತನ ಅಂತಿಲ್ಲ. ನಿಷ್ಠೆ ಅಂತಿಲ್ಲ. ನಿನಗೆ ಜಂಗಮ ಬಿಟ್ಟರೆ ಇನ್ನು ಯಾರೂ ಬೇಕಾಗಿಲ್ಲ. ಅಂಥ ಸ್ವಾರ್ಥಿ ನೀ! ಇನ್ನು ನಮ್ಮಿಬ್ಬರ ಪರ್ಲು ಹರೀತು."[೧೦] ಎಂದು ಹೊರಟುಹೋಗುತ್ತಾನೆ. ಇದು ಒಬ್ಬ ಆತ್ಮೀಯ ಸ್ನೇಹಿತನಿಂದ ಬೇಸರಗೊಂಡ ವ್ಯಕ್ತಿಯ ನಡವಳಿಕೆಯಂತೆಯೇ ಕಾಣುವುದನ್ನು ನೋಡಬಹುದು. ಇಲ್ಲಿ ನಾಟಕಕಾರರು ಬಿಜ್ಜಳನಲ್ಲಿರುವ ಒಬ್ಬ ಒಳ್ಳೆ ಸ್ನೇಹಿತನನ್ನು ಕಾಣಿಸಿಕೊಟ್ಟಿದ್ದಾರೆ.

ಇನ್ನು ಬಿಜ್ಜಳ ತನ್ನ ಮಗನಿಂದಲೇ ಗೃಹಬಂಧನಕ್ಕೆ ಒಳಗಾದಾಗ ಬಿಜ್ಜಳ ಈಗಾಗಲೇ ಬಸವಣ್ಣನೊಂದಿಗೆ ತಮ್ಮ ಪರ್ಲುಹರೀತು ಎಂದು ಹೇಳಿ ಹೋಗಿದ್ದವನು. ಈಗ ಬಸವಣ್ಣ ಅಸಂಖ್ಯಾತ ಶರಣರನ್ನು ಕರೆತಂದು ತನ್ನನ್ನು ಬಿಡಿಸಿ ಪುನಃ ರಾಜನನ್ನಾಗಿ ಮಾಡುತ್ತಾನೆಂದು ತಿಳಿದಿರುತ್ತಾನೆ. ಆದರೆ ಬಸವಣ್ಣ ಕೆಲವೇ ಕೆಲವು ಶರಣರ ಜೊತೆಗೆ ಬಂದಿದ್ದನ್ನು ನೋಡಿ ನಿರಾಶನಾಗಿ ಕಣ್ಣುಮುಚ್ಚಿ ಗೋಡೆಗೊರಗಿ ಕೂಡುತ್ತಾನೆ. ಬಸವಣ್ಣ ವಿಚಿತ್ರವಿಶಾದದಲ್ಲಿ ಕಪ್ಪಡಿ ಸಂಗಮಕ್ಕೆ ಹೋಗುತ್ತಾನೆ. ಇದರ ನಡುವೆ 'ಮರಿಯಪ್ಪ' ಎಂಬ ಕೆಲಸದ ಹುಡುಗನನ್ನು ತನ್ನ ಹೆಗಲ ಮೇಲೆ ಏರಿಸಿಕೊಂಡು ಶಿವಾಲಯದ ಬೆಳಕಿಂಡಿಯಿಂದ ಬಸವಣ್ಣ ಬಂದನಾ? ಅವನ ಜತೆಯಲ್ಲಿ ಎಷ್ಟು ಜನರಿದ್ದಾರೆ? ಎಂಬುದನ್ನು ಗ್ರಹಿಸಲು ನೋಡುವ ನಾಟಕೀಯ ಪ್ರಸಂಗದಲ್ಲೂ ಬಸವಣ್ಣನ ಮೇಲಿನ ಸ್ನೇಹದ ನಂಬುಗೆಯನ್ನು ಕಾಣಬಹುದು. "ರಾಜನ ಹೆಗಲಮೇಲೆ ಕೆಳಜಾತಿಯವನು ಏರಿದ ಅನ್ನುವ ಸಾಮಾನ್ಯ ರಾಜಕೀಯ ಅರ್ಥವ್ಯವಸ್ಥೆ ನನಗೆ ಮುಖ್ಯವಲ್ಲ. ಬಸವಣ್ಣ ಬೇಕಾಗಿರುವುದು ಬಿಜ್ಜಳನ ಬಿಡುಗಡೆಗಾಗಿ ಹಾಗಾಗಿ ಅಲ್ಲಿ ಎಷ್ಟು ಜನ ಇದ್ದಾರೆ ಏನು ಆಗ್ತಾ ಇದೆ. ಬಸವಣ್ಣ ಯಶಸ್ವಿ ಆಗಬಲ್ಲನೇ ಎನ್ನುವ ಎಲ್ಲ ಸಂಗತಿಗಳೂ ಬಿಜ್ಜಳನ ಬಿಡುಗಡೆಗೆ ಮುಖ್ಯವಾದವುಗಳೇ. ಅದನ್ನವನು ಹೆಗಲ ಮೇಲೆ ಹೊತ್ತ ಕೆಳಜಾತಿಯ ಹುಡುಗನಿಂದ ತಿಳಿಯುವುದು ಕೂಡ

ಮುಖ್ಯವಾದದ್ದು. Not just politically....."[೧೧] ಎಂದು ಲೇಖಕರೇ ಹೇಳಿರುವ ಮಾತು ಇದರ ಸಾಂಕೇತಿಕತೆಯನ್ನು ತಿಳಿಸುತ್ತದೆ.

ಕೊನೆಯಲ್ಲಿ ಬಿಜ್ಜಳ ಶಿವಾಲಯದಿಂದ ಹೊರಗೆ ಬರದೆ ಕುಳಿತಿದ್ದವನು ಜಗದೇವ ಕಪ್ಪಡಿ ಸಂಗಮದಿಂದ ಬಂದಿದ್ದು. ಬಸವಣ್ಣ ಕಳುಹಿಸಿದ್ದಾರೆ ಎಂದು ಹೇಳಲು ಉತ್ಸುಕತೆಯಿಂದ ಬಸವಣ್ಣ! ಎಂದು ಹೊರಬುರುವುದು ಅವನ ಸ್ನೇಹತ್ವದ ಸಂಕೇತವಾಗಿದೆ.

'ಶಿವರಾತ್ರಿ' ನಾಟಕದಲ್ಲಿ ಹರಳಯ್ಯ – ಮಧುವರಸರಿಗೆ 'ಪ್ರತಿಲೋಮ ವಿವಾಹ'ದ ಕಾರಣವಾಗಿ ಎಳೆಹೂಟೆ ಕಟ್ಟಿ ಶೂಲಕ್ಕೇರಿಸಿದ ಮಾರನೇ ದಿನದ ರಾತ್ರಿ ರಾಜಭಟರು ಶರಣರನ್ನು ಬೀದಿಬೀದಿಗಳಲ್ಲಿ ಬೇಟೆಯಾಡುತ್ತಿರುವ ರಾತ್ರಿ ಎಲ್ಲೆಡೆ ಭೀತಿಯ ಕತ್ತಲೆ ಅಮಾವಾಸ್ಯೆಯ ಕತ್ತಲೆಯನ್ನು ಇನ್ನಷ್ಟು ದಟ್ಟಗೊಳಿಸಿರುವ ರಾತ್ರಿಯ ಕಾಲಾವಧಿಯಲ್ಲಿ ನಡೆದದ್ದುನ್ನು ಈ ನಾಟಕದಲ್ಲಿ ತೋರಿಸಲಾಗಿದೆ. 'ಮಹಾಮನೆ' ಮತ್ತು 'ಅರಮನೆ' – ಈ ಕೇಂದ್ರ ರೂಪಕಗಳ ಸುತ್ತ ನಾಟಕ ಕಟ್ಟಲ್ಪಟ್ಟಿದೆ ಮತ್ತು ಪರಸ್ಪರ ವಿರುದ್ಧವಿರುವ ಈ ಎರಡು ರೂಪಕಗಳು ಸೂಳೆ ಸಾವಂತ್ರಿಯ ಮನೆಯಲ್ಲಿ ಪರಸ್ಪರ ಎದುರಾದ ಸನ್ನಿವೇಶದಲ್ಲಿ ಬಿಜ್ಜಳ ಬಸವಣ್ಣನವರ ಸಂಭಾಷಣೆಯಲ್ಲಿ ಬಿಜ್ಜಳನ ಸ್ನೇಹತ್ವ ಪ್ರಕಟವಾಗುವುದನ್ನು ಕಾಣುತ್ತೇವೆ.

ಕಾಮಾಕ್ಷಿಗಾಗಿ ಸಾವಂತ್ರಿಯ ಮನೆಗೆ ಬಿಜ್ಜಳ ಬಂದಿರುತ್ತಾನೆ. ಮುಗ್ದಸಂಗಯ್ಯನನ್ನು ಹುಡುಕಿಕೊಂಡು ಅಲ್ಲಿಗೆ ಬಂದ ಬಸವಣ್ಣನನ್ನು ಕುರಿತು ಬಿಜ್ಜಳ 'ದೇಶದ ಮಹಾರಾಜ ಮಂತ್ರಿವರ್ಯರು ಕಲ್ಯಾಣದ ಸೂಳೆಯ ಮನೆಯಲ್ಲಿ ಬೇಟಿಯಾದುದರ ಬಗ್ಗೆ ಅಚ್ಚರಿ ವ್ಯಕ್ತಪಡಿಸುತ್ತಾನೆ. ಇಲ್ಲಿ ಬಸವಣ್ಣ ತಾನು ಮಾಜಿ ಮಂತ್ರಿಯಾಗಿರುವುದನ್ನು 'ಮಹಾರಾಜ ಮಾಜಿಮಂತ್ರಿ ಸೇರುವುದು' ಎಂದು ತಿದ್ದುತ್ತಾನೆ. ಇಲ್ಲಿ ಬಿಜ್ಜಳನ ಬಸವಣ್ಣನ ಮೇಲಿನ ಆತ್ಮೀಯತೆ 'ಮಾಜಿ' ಎಂದು ಒಪ್ಪಿಕೊಳ್ಳಲು ಅವಕಾಶಕೊಟ್ಟಿಲ್ಲ. ಮುಂದೆ ಬಿಜ್ಜಳ ಕಲ್ಯಾಣಕ್ರಾಂತಿಯ ನೇತಾರ ಬಸವಣ್ಣನನ್ನು 'ಮಹಾತ್ಮಾ' ಬಸವಣ್ಣನವರು ಎಂದು ಕರೆಯಲೂ ಹಿಂದೆ ಮುಂದೆ ನೋಡದಿರುವುದೂ ಆತನ ಔದಾರ್ಯತೆಯನ್ನು ಸಾರುತ್ತದೆ. ಜನಪದ ಹಿನ್ನೆಲೆಯಲ್ಲಿ ಬಂದ ರಾಜನ ಮೇಲಿನ ಪವಾಡಗಳ ಕತೆಯನ್ನು ಸಾವಂತ್ರಿ ಹೇಳಲು ಮುಂದಾದಾಗ "ಬೇಡ ಮಾರಾಯ್ತಿ ಅಪರೂಪಕ್ಕೆ ನನ್ನ ಮೇಲೆ ಕೋಪಗೊಂಡಿದ್ದ ಬಸವಣ್ಣ ನಿನ್ನ ಮನೆಯಲ್ಲಿ ಸಿಕ್ಕಿದ್ದಾನೆ. ಸ್ವಲ್ಪ ಅಂತರಂಗ ಮಾತಾಡುತ್ತೇವೆ."[೧೨] ಎಂಬ ಬಿಜ್ಜಳನ ಮಾತಿನಿಂದ ತನ್ನ

ಮೇಲೆ ಬಸವಣ್ಣ ಕೋಪಗೊಂಡಿದ್ದನೇ ವಿನಾ ತನಗೆ ಕೋಪವಿರಲಿಲ್ಲ ಎಂಬುದನ್ನೂ ಹಾಗೂ ತಾನು ಬಸವಣ್ಣನನ್ನು ಇಷ್ಟು ದಿನ ಕಳೆದುಕೊಂಡಿದ್ದನ್ನು ಬಿಂಬಿಸುತ್ತಾನೆ. ಇದು ಅವನ ಸ್ನೇಹಭಾವದ ತೀವ್ರತೆಯನ್ನು ತಿಳಿಸುತ್ತದೆ. ಇಡೀ ಕಲ್ಯಾಣವೇ ಕ್ರಾಂತಿಯಲ್ಲಿ ಮುಳುಗಲು ಕಾರಣವಾದ ಪ್ರತಿಲೋಮ ವಿವಾಹದ ಮದುಮಗ ಶೀಲವಂತನಿಗೆ ರಕ್ಷಣೆ ಕೊಡುವಂತೆ ಬಸವಣ್ಣ ಕೇಳಿದ ತಕ್ಷಣ ದ್ವಾರಪಾಲಕನನ್ನು ಕರೆದು ಶೀಲವಂತ ಎಲ್ಲಿದ್ದರಲ್ಲಿ ಅವನಿಗೆ ರಕ್ಷಣೆ ಕೊಡುವಂತೆ ಕೊತವಾಲನಿಗೆ ಹೇಳುವಂತೆ ಹೇಳಿಕಳಿಸುವುದು ಅವನ ಸ್ನೇಹತ್ವ ಸಂಕೇತವಾಗಿ ಬಂದಿದ್ದು ಕುಂಬಾರರು ಇಲ್ಲೆಲ್ಲಾ ಬಿಜ್ಜಳನೊಳಗಿದ್ದ ಒಬ್ಬ ಒಳ್ಳೆಯ ಸ್ನೇಹಿತನನ್ನು ತೋರಿಸಿಕೊಟ್ಟಿದ್ದಾರೆ. ಬಸವಣ್ಣನಿಗೆ 'ನಿಮ್ಮ ಸಿದ್ಧಾಂತವನ್ನು ಜೀರ್ಣಿಸಿಕೊಂಡ ಶಕ್ತಿ ಸಮಾಜಕ್ಕಿಲ್ಲ ಎಂದು ಹೇಳುತ್ತಾನೆಯೇ ಹೊರತು ತಮ್ಮ ಸಿದ್ಧಾಂತವೇ ತಪ್ಪು ಎಂದು ಹೇಳಹೋಗುವುದಿಲ್ಲ. ಬಸವಣ್ಣನಿಗೆ ಕಲ್ಯಾಣದಿಂದ ಕೂಡಲಸಂಗಮದವರೆಗಿನ ನಿನ್ನ ಪಾತ್ರವೇನು? ಹುತಾತ್ಮನೋ? ದಳ್ಳಾಳಿಯೋ? ಎಂದು ಕೇಳಲು ಬಸವಣ್ಣ ತಾವು ಕೊಂದರೆ 'ಹುತಾತ್ಮ' ಎಂದು ನೇರವಾಗಿ ಉತ್ತರಿಸುತ್ತಾರೆ. ಇಲ್ಲಿ ಬಿಜ್ಜಳ ಬೇಸರಗೊಂಡು 'ನನ್ನ ಮೇಲೆ ಯುದ್ಧ ಸಾರಿದಂತಿದೆ' ಎನ್ನುವುದು ಬಸವಣ್ಣ ಇಲ್ಲ ತಮಗೇನಾದರೂ ಗಾಯಗಳಾಗಿದ್ದರೆ ಅವು ತಮ್ಮ ಪ್ರೇಯಸಿಯರು ಕಚ್ಚಿಮಾಡಿದ ಗಾಯಗಳು ಎಂದು ಛೇಡಿಸಿ ನಕ್ಕರೆ 'ಸದ್ಯ ನಕ್ಕೆಯಲ್ಲಾ ಮಾರಾಯಾ! ನಿನ್ನ ಮುಖ ಅರಳಿದ್ದನ್ನು ನೋಡಿ ವರ್ಷಗಳಾಗಿದ್ದವು' ಎಂದು ಹೇಳಿದ್ದು ಇಲ್ಲಿ ನಾಟಕಕಾರರು ಒಬ್ಬ ನಿಜವಾದ ಸ್ನೇಹಿತನಲ್ಲಿರಬೇಕಾದ ಬಯಕೆಯನ್ನು ಮತ್ತು ಸ್ನೇಹಿತನೊಬ್ಬನಿಂದ ಮಾಡುವ ನಿರೀಕ್ಷೆಯೇನೆಂಬುದನ್ನು ಬಿಜ್ಜಳನಲ್ಲಿ ತೋರಿಸಿ ಉತ್ತಮ ಸ್ನೇಹಜೀವಿ-ಯಾಗಿಸಿದ್ದಾರೆ. ಸಾಯುವಾಗಲೂ ಬಿಜ್ಜಳ "ಅಯ್ಯೋ ಬಸವಾ! ಎಲ್ಲಾ ಪ್ರಶ್ನೆಗಳ ಉತ್ತರಗಳನ್ನು ಬಲ್ಲ ಮಿತ್ರನೊಬ್ಬನಿದ್ದ ಅವನ ಒಂದು ಕೊನೆಯ ಆಸೆಯನ್ನು ಈಡೇರಿಸದವನಿಗೆ (ಶೀಲವಂತನಿಗೆ ರಕ್ಷಣೆ ಕೊಡಲಾಗದೇ ಆತ ಸತ್ತಿದ್ದು) ಇನ್ನೇನು ಬಾಕಿ ಉಳಿದೀತ್ರಪ್ಪ..... ಇಂತ ಕತ್ತಲೆಯಲ್ಲಿ ನನ್ನೊಬ್ಬನನ್ನೇ ಬಿಟ್ಟು ಹೋದೆಯಲ್ಲಾ ಬಸವಾ? ಮುಟ್ಟಲಾಗದ ನನ್ನ ಎದೆಯ ಮೂಲೆಗಳನ್ನು ಮುಟ್ಟಿದವ, ತಟ್ಟಿದವ ನೀನೊಬ್ಬನೇ ಬಸವಣ್ಣಾ!.... ಹೇಳಿ ಕೇಳಿ ಭವಿ ನನು, ಬಸವಾ ಕ್ಷಮಿಸು ನನ್ನ!"[೧೩] ಎಂದು ಹೇಳಿ ಸಾಯಲು ಸಿದ್ದನಾಗುತ್ತಾನೆ. ಇವನ ಬಸವಣ್ಣನೊಂದಿಗಿನ ಸ್ನೇಹವನ್ನು ಮೊದಲಿನಿಂದಲೂ ಸೂಚ್ಯವಾಗಿ ತೋರಿಸುತ್ತಾ ಬಂದ ನಾಟಕಕಾರರು ಕೊನೆಗೆ ಅವನ ಬಾಯಿಯಿಂದಲೇ ಹೇಳಿಸಿ ಸಮರ್ಥಿಸಿರುವುದನ್ನು ನೋಡಬಹುದಾಗಿದೆ.

ಸ್ನೇಹಿತನಾಗಿ ಬಸವಣ್ಣನನ್ನು ಒಪ್ಪಿಕೊಂಡಿದ್ದು, ತಾನೊಬ್ಬ ರಾಜನಾಗಿ ತನ್ನರಮನೆಯ ಕೊಂಡೆಯರ ವಿರೋಧ ಹಾಗೂ ಇತರ ಒತ್ತಡಗಳಿಂದ ಬಸವಣ್ಣನನ್ನು ಮಿತಿಮೀರಿದ ಅವನ ದಾನಧರ್ಮ, ವೈಚಾರಿಕತೆಯನ್ನು ಸಹಿಸಲು ಸಾಧ್ಯವಾಗಲಿಲ್ಲ. 'ರಾಜನಾಗಿ' ಹಲವು ಒತ್ತಡಗಳನ್ನು ಬಿಜ್ಜಳ ಎದುರಿಸಬೇಕಾದ ಸಂದರ್ಭದಲ್ಲಿ ಅವನು ವರ್ತಿಸಿದ ರೀತಿ ಅವನ ಜಾಣ್ಮೆ, ತಾಳ್ಮೆಗಳನ್ನು ನೋಡಬಹುದು.

ಸಂಕ್ರಾಂತಿ ನಾಟಕದಲ್ಲಿ ಶರಣನಾದ ಶೂದ್ರ ರುದ್ರ ಆಸ್ಥಾನ ಪಂಡಿತರ ಮಗಳು 'ಉಷಾ' ಮೇಲೆ ಅತ್ಯಾಚಾರವೆಸಗಿದ್ದಾನೆ ಎಂಬ ಆರೋಪದ ಹಿನ್ನೆಲೆಯಲ್ಲಿ ಶರಣರಿಗೆ ಧಿಕ್ಕಾರ ಕೂಗುತ್ತಾ ಬ್ರಾಹ್ಮಣರು ಅರಮನೆಯ ಮುಂದೆ ನೆರೆದಿರುತ್ತಾರೆ. ನ್ಯಾಯಕ್ಕಾಗಿ ಪ್ರಭುಗಳನ್ನು ಬೇಡುತ್ತಾರೆ. ಆಗ ಬಿಜ್ಜಳ ಹೇಳುವ – "ಎಂಥ ನ್ಯಾಯ? ದಿನ ಬೆಳಗಾದರೆ ಬಂದು ಕಿರುಚುವುದು ನಿಮ್ಮ ಉದ್ಯೋಗವಾಗಿಹೋಗಿದೆ. ಮೊನ್ನೆ ಜೈನರು, ನಿನ್ನೆ ಶೈವರು, ಇವತ್ತು ನೀವು..... ಧರ್ಮ!ಧರ್ಮ! ಅದಕ್ಕೆ ಯಾವುದಾದರೊಂದು ಕಳಂಕ ಯಾವಾಗಲೂ ಬಂದೇ ಇರುತ್ತೆ. ಮನುಷ್ಯರಿಗೇನಾಗಿದೆ ಹೇಳಿ"[೧೪] ಎಂಬ ಮಾತುಗಳಲ್ಲಿ ಅಂದು ಧರ್ಮಗಳ ಹೆಸರಲ್ಲಿ ನಡೆಯುತ್ತಿದ್ದ ನಿತ್ಯ ಸಂಘರ್ಷಗಳು, ರಾಜನ ಮೇಲಾಗುತ್ತಿದ್ದ ಒತ್ತಡದ ಜೊತೆಗೆ ಬಿಜ್ಜಳನಿಗೆ ಧರ್ಮ ಧರ್ಮಗಳ ಮೇಲೆ ನಂಬಿಕೆ ಇರದೆ ಮನುಷ್ಯರಾಗಿ ಬದುಕಬೇಕು ಎಂಬ ಕಾಳಜಿ ಇದ್ದಂತಿರುವುದನ್ನು ನಾಟಕಕಾರರು ಕಾಣಿಸಿದ್ದಾರೆ. ಹುಡುಗಿಯರು ನೀರು ತರಲು ಹೋದಾಗ ಈ ಅತ್ಯಾಚಾರ ನಡೆದಿರುವುದನ್ನು ತಿಳಿಸಲು 'ಹುಡುಗಿಯರೇ ಯಾಕೆ ನೀರು ತರಬೇಕು' ಎಂಬುದು ಅವನ ಪ್ರಶ್ನೆ. 'ಮಡಿ'ಯ ವಿಚಾರ ಬಂದಾಗ "ಮಡಿ ಮಡಿ! ನಿಮ್ಮ ಮಡಿಯಿಲ್ಲದಿದ್ದರೆ ಯಾವ ವಿಧವೆಯಾದರೂ ನೀರು ತರಬಹುದಿತ್ತು, ಶೂದ್ರನಾದರೂ ತರಬಹುದಿತ್ತು. ಈ ಗೋಳು ತಪ್ಪುತ್ತಿತ್ತು." ಎಂದು ವೈಚಾರಿಕತೆಯ ಪಾಠ ಮಾಡುತ್ತಾನೆ. ಜೊತೆಗೆ ಈ ಧರ್ಮ, ಮಡಿ, ಮೈಲಿಗೆಗಳಿಂದ ಆಗುವ ಅನಾಹುತಗಳನ್ನು ನಾಟಕಕಾರರು ತೋರಿಸುವ ಪ್ರಯತ್ನ ಮಾಡಿದ್ದಾರೆ. ಶರಣರ ಉದ್ಧಟತನದ ಬಗ್ಗೆ ದೂರು ಬಂದಾಗ 'ಇದನ್ನು ಕೇಳಿ ಕೇಳಿ ತನಗೆ ಸಾಕಾಗಿ ಹೋಗಿರುವುದಾಗಿ ಬೇಸರ ವ್ಯಕ್ತಪಡಿಸುವುದು, ಸಮಸ್ಯೆ ಬಗೆಹರಿಸದಿದ್ದುದೇ ಈ ಕೋರಿಕೆಯ ಪುನರಾವರ್ತನೆಗೆ ಕಾರಣವೆಂದು ಶಾಸ್ತ್ರಿಗಳು ಹೇಳಿದಾಗ ಬಿಜ್ಜಳ ಹೇಳುವ "ಹೌದು ನಾನು ದುರ್ಬಲ, ನೀವೇ ಯಾಕೆ ಕಚ್ಚಾಡಿಕೊಂಡು ಒಂದು ನಿರ್ಧಾರಕ್ಕೆ ಬರಬಾರದು? ಅದೂ ನಿಮ್ಮಿಂದಾಗುವುದಿಲ್ಲ. ನಿಮ್ಮ ಹೆಂಗಸರು ಹೊಲೆಯರನ್ನು ನೋಡದಂತೆ ಯಾಕೆ ಮಾಡಬಾರದು?"[೧೫] ಎಂಬ ಮಾತುಗಳಿಂದ ಇಂದು ಅತ್ಯಾಚಾರ

ಪ್ರಕರಣಗಳ ಬಗ್ಗೆ ಹೆಣ್ಣುಮಕ್ಕಳಿಗೆ ಕರಾಟೆ ಕಲಿಯಲು ಮತ್ತು ತಮ್ಮ ಮಾನ ರಕ್ಷಣೆ ಮಾಡಿಕೊಳ್ಳುವಂತೆ ಬಿಟ್ಟಿ ಸಲಹೆ ಕೊಡುವ ಇಂದಿನ ರಾಜಕಾರಣಕ್ಕೆ ಪ್ರಸ್ತುತವಾಗುತ್ತಾನೆ. ಬಸವಣ್ಣನವರ ಸಮಾಜ ಪರಿವರ್ತನೆಯ ಕನಸಿಗೆ ಪ್ರಾಯೋಗಿಕ ಚಿಂತನೆಯನ್ನು ಮುಂದಿಡುತ್ತಾನೆ. "ಕುಡಿಯುವ, ಕೊಂದು ತಿನ್ನುವ ಅಭ್ಯಾಸ ನಿಮ್ಮ ಮಾತುಗಳಿಂದ ತೊಳೆದುಹೋಗುತ್ತದೆಂದು ನಂಬುವುದು ಹೇಗೆ ಸಾಧ್ಯ? ನೀವು ಕುರಿಕೊಲ್ಲುವುದನ್ನು ತಪ್ಪಿಸಿದರೆ ಈ ಜನ ಮನುಷ್ಯರನ್ನು ಕೊಲ್ಲುತ್ತಾರೆ! ಅವರ ಭಜನೆಯ ಗದ್ದಲ ನನಗೆ ತಮಾಷೆ ಅನ್ನಿಸಿದೆ. ಈ ಭಜನೆಯ ಅವಸರದಲ್ಲಿ ಪಾಳುಬಿದ್ದ ಗದ್ದೆಗಳನ್ನು ನೀವು ನೋಡಿಲ್ಲ. ಬ್ರಾಹ್ಮಣರ ಮಂತ್ರಗಳಂತೆಯೇ ಶರಣರ ವಚನಗಳೂ ಕೂಡ ಉತ್ತು ಬೆಳೆ ಕೊಡಲಾರವು.... ತಮ್ಮ ಅಹಿಂಸೆಯ ಹುಚ್ಚು ನನಗೆ ಅರ್ಥವಾಗುತ್ತಿಲ್ಲ ಮುಂಗಾರಲ್ಲಿ ಹೊಡೆವ ಸಿಡಿಲಿಗೆ ಹಿಂಸೆ, ಅಹಿಂಸೆಯ ಪರಿವೆಯಿಲ್ಲ! ಉಕ್ಕುವ ಸಮುದ್ರ ಸಾವಿರಾರು ಜೀವಗಳನ್ನು ಕೊಂದು ಹಿಂಸೆ, ಅಹಿಂಸೆಯ ತೊಳಲಾಟವಿಲ್ಲದೆ ಹಿಂದಕ್ಕೆ ಸರಿಯುತ್ತದೆ. ಬಿರುಗಾಳಿಗೆ ಸಿಕ್ಕಿ ಮರ ಬಿದ್ದೊಡನೆ ಅಕ್ಕಪಕ್ಕದ ಪಕ್ಷಿಗಳು ನೆಲಕ್ಕೆ ಬಿದ್ದು ಸಾಯುತ್ತವೆ." ಹೀಗೆ ನಿಸರ್ಗ ಸಹಜವಾದುದನ್ನು ಬಸವಣ್ಣ ಬದಲಾವಣೆ ಮಾಡಹೊರಟಿರುವುದನ್ನು ಪ್ರಭುತ್ವದ ನೆಲೆಯಲ್ಲಿ ನಿಂತು ಅಲ್ಲಗಳೆಯುತ್ತಾನೆ. ಸಿದ್ದಲಿಂಗಯ್ಯನವರ 'ಏಕಲವ್ಯ' ನಾಟಕದಲ್ಲಿ ಭೀಷ್ಮ ಸಮಾಜದ ಅಸಮಾನತೆಯನ್ನು ಸಮರ್ಥಿಸುತ್ತಾ "ಈ ಲೋಕದಲ್ಲಿ ಮುಗಿಲೆತ್ತರದ ತೆಂಗಿನ ಮರಗಳಿವೆ, ಸಣ್ಣಪುಟ್ಟ ತುಳಸಿಗಿಡಗಳು ಇದೆ, ಹೆಮ್ಮಾವಿನ ಮರಗಳಿವೆ, ಅವುಗಳನ್ನು ಬಳಸಿದ ನವಿರಾದ ಬಳ್ಳಿಗಳಿವೆ. ಖಗ, ಮೃಗಗಳಲ್ಲಿಯೂ ಸಾಕಷ್ಟು ಏರುಪೇರುಗಳಿವೆ. ಇನ್ನು ಮನುಜರಲ್ಲಿ ಬಡವ ಶ್ರೀಮಂತರಿದ್ದಾರೆ, ಅರಸರೂ ಆಳುಗಳೂ ಈ ನೆಲದ ಮೇಲಿದ್ದಾರೆ"[೧೭] ಎಂದು ಹೇಳುವುದನ್ನು ನೆನಪಿಸುತ್ತದೆ. ಭೀಷ್ಮನೂ ಪ್ರಭುತ್ವದ ನೆಲೆಯಲ್ಲಿ ನಿಂತು ಮಾತಾಡುವುದು ವಿಶೇಷ. ತಮ್ಮಿಂದ ಸಹಿಸಲಾಗದ ಹೊಸ ಬದಲಾವಣೆಗಳಿಗೆ ಏನಾದರೊಂದು ನೆಪ ಹೇಳಿ ತಡೆಯುವ ಇಂದಿನ ಹಾಗೂ ಹಿಂದಿನ ರಾಜಕಾರಣಕ್ಕೆ ಪ್ರತಿಮೆಯಾಗಿ ಬಿಜ್ಜಳನನ್ನು 'ಸಂಕ್ರಾಂತಿ' ನಾಟಕದಲ್ಲಿ ರೂಪಿಸಿದ್ದಾರೆ ನಾಟಕಕಾರರು.

'ತಲೆದಂಡ' ನಾಟಕದಲ್ಲಿ ತಾನು ಮತ್ತು ಬಸವಣ್ಣನಿಲ್ಲದಾಗ ಭಂಡಾರ ಪ್ರವೇಶಿಸಿದ್ದ ತನ್ನ ಮಗನನ್ನು ಬಸವಣ್ಣನಿಂದ ಬಂದನಕ್ಕೊಳಪಡಿಸಿ ಸ್ವಲ್ಪವೂ ವ್ಯತ್ಯಾಸವಿಲ್ಲದ ತನ್ನ ಭಂಡಾರದ ಲೆಕ್ಕತೋರಿಸಿ ನಂತರ ಬಿಟ್ಟ ಸುದ್ದಿ ತಿಳಿದು ಕೋಪಗೊಳ್ಳುತ್ತಾನೆ. 'ಎಲ್ಲಿ ಅದಾನು ಅ ಬೋಸುಡೀ ಮಗ?'[೧೮] ರಾಜನಾದ ಆತ ತನ್ನ ಗ್ರಾಮ್ಯಭಾಷೆ ಮತ್ತು ಒರಟು ವರ್ತನೆಯಿಂದ ಗಮನ ಸೆಳೆಯುತ್ತಾನೆ. ಬಿಜ್ಜಳನಿಗೆ

ಇಲ್ಲಿಯ ಭೀಕರ ವಾಸ್ತವದ ಅರಿವಿದೆ. ಇಲ್ಲಿ ಏನೇ ಮಾಡಿದರೂ ಜಾತೀಯತೆಯನ್ನು ತೊಡೆದುಹಾಕುವುದು ಅಸಾಧ್ಯವೆಂಬ ಅರಿವಿದೆ. "ನಾನು ಕಳಚೂರ್ಯ ಕಟ್ಟಚೂರಿ ಅಂದರೆ ಕ್ಷೌರಿಕ. ನನ್ನ ಜಾತಿ ಕ್ಷೌರಿಕರದು.... ಜಾತಿ ಅಂದರ ಮೈ ತೊಗಲಿದ್ದಾಂಗ, ಅದನ್ನು ಸುಲಿದು ಕಿತ್ತು ಒಕ್ಕೊಟ್ಟರೂ ಹೊಸತೊಗಲು ಬಂದ ಗಳಿಗೆ ಎಲ್ಲರ ಕಣ್ಣಿಗೆ ಬೀಳೋದು ಅದ ಅದೇ ಜಾತಿ......"[೧೯] ಎಲ್.ಹನುಮಂತಯ್ಯನವರ ಕವಚ ಪದ್ಯದ 'ಹುಟ್ಟಿನೊಂದಿಗೆ ಕಟ್ಟಿಕೊಂಡ ಕವಚ ಬೀಳಲೊಲ್ಲದು, ದೇಶ ಸುತ್ತಿ ಕೋಶವನೋದಿದರೂ ಬಗಲಲ್ಲೇ ಭುಗಿಲೇಳುವುದು' ಸಾಲುಗಳನ್ನು ನೆನಪಿಸುತ್ತದೆ. ಇಲ್ಲಿ ಕಾರ್ನಾಡರು ಬಿಜ್ಜಳನ ಪಾತ್ರದ ಮೂಲಕ ಈ ಜಾತಿ ವ್ಯವಸ್ಥೆಯು ನಾಶವಾಗದ್ದರ ಬಗೆಗೆ ಕವಿಯ ಸಾಮಾಜಿಕ ಜವಾಬ್ದಾರಿಯನ್ನು ಹೊರ ಹಾಕಿದ್ದಾರೆ. ಜೊತೆಗೆ ರಾಜನಾಗಿ ಬಿಜ್ಜಳನ ವಾಸ್ತವ ಜ್ಞಾನವನ್ನು ತೋರಿಸಿದ್ದಾರೆ. ಮುಂದೆ ರಾಜ್ಯ ಆಳವ ಮೊದಲು ಒದಿಕಿ ಕೊಡಾಕ ಕಲೀಬೇಕು'[೨೦] ಎಂದು ಹೊಸದೊಂದು ಸಿದ್ಧಾಂತವನ್ನು ಕೊಡುತ್ತಾನೆ.

'ಮಹಾಚೈತ್ರ'ದಲ್ಲಿ ಪ್ರಭುತ್ವದ ಕ್ರೌರ್ಯ ಮೆರೆಯುತ್ತದೆ. ಬಿಜ್ಜಳ ವ್ಯವಸ್ಥೆಯ ಕ್ರೌರ್ಯಗಳನ್ನು ಎತ್ತಿಹಿಡಿಯುತ್ತಾನೆ. 'ರಾಜಗುರುಗಳು, ಪಟ್ಟಣಶೆಟ್ಟರು, ಮುಖ್ಯ ಅರ್ಚಕರನ್ನು ಸಂಬೋಧಿಸಿ ಮಾತಾಡುತ್ತಾ "....... ನಿಮ್ಮ ಸಲಹೆಗಳನ್ನು ಉದಾಸೀನ ಮಾಡಿ, ಬಸವನೆನ್ನುವ ರಾಜದ್ರೋಹಿಯನ್ನು, ಧರ್ಮಬಾಹಿರನನ್ನು, ಪ್ರೋತ್ಸಾಹಿಸಿ, ಪೋಷಿಸಿದೆವು. ತತ್ಪರಿಣಾಮವಾಗಿ ರಾಜಧರ್ಮವಿಮುಖರಾದೆವು". ಎಂಬಲ್ಲಿ ಶಿವಪ್ರಕಾಶರ ಬಿಜ್ಜಳ ಬೇರೆ ನಾಟಕಕಾರ ಬಿಜ್ಜಳರಿಗಿಂದ ವಿಭಿನ್ನನಾಗಿ ಬಸವಕ್ರಾಂತಿಯ ಸಂಪೂರ್ಣ ವಿರೋಧಿಯಾಗಿ ಬಿಜ್ಜಳನ ಕ್ರೌರ್ಯ 'ಶಿಶಿರ'ದ ಸಂಕೇತವಾಗಿ ಮೂಡಿಬಂದಿದೆ. ರಾಜತಂತ್ರದಲ್ಲಿ ಬಿಜ್ಜಳ ಬನವಾಸಿಯ ಕಸಪಯ್ಯನನ್ನು ಸಂಪೂರ್ಣ ನಂಬುವುದರ ಮೂಲಕ ಸೋಲುತ್ತಾನೆ. ಸೋವಿದೇವನ ಚಿಂತನೆಯೇ ನಿಜವಾಗಿ ಕರ್ಣದೇವ, ಕಸಪಯ್ಯರು ಒಂದು ಮಲೆಪರ ಸೇನೆ ಜೊತೆ ಮುತ್ತಿಗೆ ಹಾಕುತ್ತಾರೆ. ಬಿಜ್ಜಳನ ಕ್ರೌರ್ಯವನ್ನು ಹತ್ತಿಕ್ಕಲು ಸಿದ್ಧರಾದ ಶರಣರು ಬಿಜ್ಜಳನ ಯಜ್ಞಶಾಲೆಯನ್ನೇ ಕೇಂದ್ರವಾಗಿರಿಸಿಕೊಂಡು ದಕ್ಷಬ್ರಹ್ಮನ ಯಜ್ಞವನ್ನು ನಾಶ ಮಾಡಿದ ವಿರಭದ್ರನ ರೌದ್ರಸ್ವರೂಪವನ್ನು ತೋರಿ ಬಿಜ್ಜಳನನ್ನು ಕೊಲ್ಲುವುದು. ಈ ಅಂತ್ಯವನ್ನು ಬರ್ಬರ ಶಿಶಿರದ ಕೊನೆಗೊಳ್ಳುವಿಕೆಯನ್ನು ಸಂಕೇತಿಸುವುದರಿಂದ ಕ್ರೌರ್ಯದ ಸ್ವರೂಪವನ್ನು ತಿಳಿಸಿರುವುದು ಶಿವಪ್ರಕಾಶರ ಕವಿತ್ವದ ಪ್ರತಿಭೆಯ ಕುರುಹಾಗಿದೆ.

ಬಸವಣ್ಣನ ಜನಪ್ರಿಯತೆ ತನ್ನನ್ನೂ ಮೀರಿಸಿದ್ದು ಸಹಜವಾಗಿ ಒಬ್ಬ ರಾಜನಿಗೆ ಕಿಚ್ಚುಂಟಾಗುವಂತೆ ಶಿವರಾತ್ರಿ ನಾಟಕದಲ್ಲಿ ಬಿಜ್ಜಳನ ಪಾತ್ರ ಮೂಡಿಬಂದಿದೆ. ಬಸವಣ್ಣ ತನ್ನ ಮನೆಗೆ ಬಂದಾಗ ಸಾವಂತ್ರಿ ಧನ್ಯಳಾದುದನ್ನು ನೋಡಿ ಬಿಜ್ಜಳ "....ಕಲ್ಯಾಣದ ಒಬ್ಬರಲ್ಲೂ ಸ್ವಾಮಿ ಭಕ್ತಿ ಇಲ್ಲ ಇದ್ದದ್ದೆಲ್ಲಾ ಬಸವಭಕ್ತಿನೇ!"[೨೧] ಎಂದು ಅಸೂಯೆ ವ್ಯಕ್ತಪಡಿಸುತ್ತಾನೆ. "ಆ ನನ್ನ ಹಾಟ್ಯಾ ರಾಜಾ ಇಂದು ಯಾರ್ಯಾರನ್ನ ಕೊಂದನೋ ಏನ್ ಕಥಿನೋ" ಎಂದು ತುಂಗವ್ವ ಉದ್ಗರಿಸಿದರೆ "ಇವರವ್ವನ ಈ ರಾಜಾನ ಮಂದಿಲನ ಕಂಡರ ನನಗ ಆಗ ಬರಾಣಿಲ್ಲ ನೋಡು" ಎಂದು ಕಲ್ಲಪ್ಪ ತಿರಸ್ಕರಿಸುವುದು ಬಿಜ್ಜಳನ ಮಾತಿಗೆ ಪುಷ್ಟಿ ನೀಡುವುದರ ಜೊತೆಗೆ ಪ್ರಭುತ್ವದ "ಕ್ರೌರ್ಯವನ್ನು ಸಾಮಾನ್ಯ ಜನ ತಮ್ಮಲ್ಲಿ ಅಂತರ್ಗತವಾಗಿರುವ ಸಹಜನ್ಯಾಯದ ನೆಲೆಯಲ್ಲಿ ವಿಮರ್ಶಿಸುವುದನ್ನು ಕಾಣಬಹುದಾಗಿದೆ. ಬಸವಣ್ಣ ಸಾಮಾನ್ಯ ಜನರಿಗೂ ಧರ್ಮ, ದೇವರು, ಕೈಗೆಟುಕು-ವಂತಾಗಬೇಕೆಂಬ ಹೊಸ ಬದಲಾವಣೆ ಬಗ್ಗೆ ಮಾತಾಡಿದರೆ, ಬಿಜ್ಜಳ "....ಅವರಿಗೆ ಹೊಸ ಧರ್ಮ ದೇವರನ್ನು ಕೊಟ್ಟು ನೇರ ಕೈಲಾಸಕ್ಕೆ ಕರೆದೊಯ್ಯುತ್ತೀರೋ?"[೨೨] ಎಂದು ವ್ಯಂಗ್ಯದ ಮಾತಾಡುವ ಮೂಲಕ ವ್ಯವಸ್ಥೆಯ ಬದಲಾವಣೆಗೆ ವಿರೋಧ ವ್ಯಕ್ತಪಡಿಸುವ ರಾಜಕೀಯದ ಸಹಜತೆಯ ಪ್ರತೀಕವಾಗುತ್ತಾನೆ. ಈ ಬದಲಾವಣೆಗೆ ಸ್ಪಂದಿಸದ ಹಳೆಯ ವ್ಯವಸ್ಥೆಯನ್ನೂ ಸಂಪೂರ್ಣ ಒಪ್ಪದ ದ್ವಂದ್ವ ನಿಲುವಿನಿಂದ ಬಂದ ಬಿಜ್ಜಳನನ್ನು ನಮ್ಮ ನಾಟಕಕಾರರು ಎರಡು ತಿರಸ್ಕಾರಗಳ ನಡುವೆ ನಿಲ್ಲಿಸಿರುವುದು ಬಿಜ್ಜಳ ರಾಜನಾಗಿ ಸೋತಿದ್ದರ ಸಂಕೇತವಾಗಿದೆ.

ಬಸವಣ್ಣನಿಲ್ಲದಿದ್ದಾಗ ತಾನಿಲ್ಲದಿದ್ದಾಗ, ಭಂಡಾರದ ಪರೀಕ್ಷೆ ಮಾಡಿಸಲು ಹೋದ ತನ್ನ ಮಗನ ಮೇಲೆ ಆಕ್ರೋಶಗೊಂಡ ಬಿಜ್ಜಳ ಬಸವಣ್ಣನಿಗೆ ತನ್ನ ಮಗನನ್ನು 'ಯುವರಾಜ'ನೆಂದು ಸಂಬೋಧಿಸುವಂತೆ ಹೇಳುತ್ತಾನೆ. ಬಸವಣ್ಣ ರಾಜ್ಯಭಾರ ಹುಟ್ಟಿನಿಂದ ಬರುವಂತಹದ್ದಲ್ಲ ಎಂದು ಹೇಳಲು ಬಿಜ್ಜಳ ಹೇಳುವ "....ಮಗ ಅಂದರೇನು ತಿಳೀತೈತ ನಿನಗೆ? ಅಲ್ಲೋ ಒಂದು ಲಕ್ಷದ ತೊಂಭತ್ತಾರು ಸಾವಿರ ಶರಣರು ನಿನ್ನ ಹೆಸರಲ್ಲೆ ದೀಪ ಹಚ್ಚಿ ಈ ಕಲ್ಯಾಣನಗರದಾಗ ಬದಕ್ಯಾರಂತ, ಅದರಾಗ ಅರ್ಧಕ್ಕರ್ಧ ಮಂದಿಗೆ ನಿನಗೊಬ್ಬ ಮಗ ಅದಾನಂತ ಗೊತ್ತಿದ್ದರೂ ಅವನ ಹೆಸರೇನು ಅಂತ ಸೈತ ಗೊತ್ತಿಲ್ಲ. ಎಂಥಾ ಅಪ್ಪ ನೀನು? ಎಂಥಾ ತಬ್ಬಲಿ ಬಾಳೇವು ಆ ಕೂಸಿನದು! ವ್ಯವಹಾರ ಕಲಕೋ."[೨೩] ಎಂಬ ಮಾತಲ್ಲಿ ಬಿಜ್ಜಳ ಒಬ್ಬ ಉತ್ತಮ ಸಂಸಾರಾನುರಾಗಿಯಾಗಿ ಕಂಡುಬರುತ್ತಾನೆ. ಸಾಮನ್ಯ ತಂದೆಯ ಮನಃಸ್ಥಿತಿಯನ್ನು

ಹೊಂದಿದವ ಬಿಜ್ಜಳ. ಇಂಥ ಸಂಬಂಧಗಳನ್ನು ತೊರೆಯದೆ ಬಸವಣ್ಣನನ್ನು ಮೆಚ್ಚಿಕೊಂಡವನು ಆತ.

ಎಚ್.ಎಸ್.ಶಿವಪ್ರಕಾಶರೂ ತಮ್ಮ ಮಹಾಚೈತ್ರ ನಾಟಕದಲ್ಲಿ ಬಿಜ್ಜಳ ತನ್ನ ತಂಗಿ– ಲಕ್ಕಣದಂಡೇಶನ 'ಶಿವತತ್ತ್ವ ಚಿಂತಾಮಣಿ'ಯಲ್ಲಿ ಬಿಜ್ಜಳನ ತಂಗಿ 'ನೀಲಾಂಬಿಕೆ'ಯನ್ನು ಬಸವಣ್ಣ ವಿವಾಹವಾಗಿದ್ದಾನೆಂದು ಹೇಳಿದ್ದು ಇದನ್ನು ಶಿವ ಪ್ರಕಾಶರು ಆಕರವಾಗಿ ಪಡೆದಿದ್ದಾರೆ – ನೀಲಾಂಬಿಕೆಯನ್ನು ತನ್ನ ಅರಮನೆಗೆ ಕರೆಸಿ ಯೌವನಾವಸ್ಥೆಯಲ್ಲೆ ವೈದವ್ಯಕ್ಕೆ ಬಲಿಯಾದ ಬಗ್ಗೆ ದುಃಖವ್ಯಕ್ತಪಡಿಸುತ್ತಾ ಒಬ್ಬ ನಿಜವಾದ ಅಣ್ಣನಾಗಿ ಕಂಡುಬರುತ್ತಾನೆ. ಬಾಲ್ಯದಲ್ಲಿನ ತಮ್ಮ ಆಟಗಳನ್ನು ನೆನಪಿಸಿಕೊಡುತ್ತಾ ಅವಳನ್ನು ಸಂತೋಷಿಸಲು ಪ್ರಯತ್ನಿಸುವುದು ಅವನೊಳಗಿನ ಪ್ರೀತಿಯನ್ನು ಬಿಂಬಿಸುತ್ತದೆ. ಬಿಜ್ಜಳನೇ ಬಸವಣ್ಣನನ್ನು ಅಧಿಕಾರದಿಂದ ಕೆಳಗಿಳಿಸಿದ ಸುದ್ದಿಯಿಂದ ಆಶ್ಚರ್ಯಚಕಿತನಾದ ನಾಗಶೆಟ್ಟಿ ಹೇಳುವ "ಬಸವಣ್ಣನ ಒಬ್ಬನೇ ಮಗ ಸತ್ತಿದ್ದ ಪ್ರಭುಗಳು ಸ್ವಂತ ಮಗನೇ ಸತ್ತ ಹಾಗೆ ಶೋಕಿಸುತ್ತಿದ್ದರು"[೨೪] ಎಂಬ ಮಾತಿನಿಂದ ಬಿಜ್ಜಳನ ಲೌಕಿಕ ಬದುಕಿನ ಹೃದಯವಂತಿಕೆ ಬಿಂಬಿತವಾಗುತ್ತದೆ. ಹೀಗೆ ಬಿಜ್ಜಳ ಒಬ್ಬ ಒಳ್ಳೆಯ ಅಣ್ಣ, ಅಪ್ಪನಾಗಿ ಲೌಕಿಕ ಬದುಕನ್ನು ಪ್ರೀತಿಸುವ ಪಾತ್ರವಾಗಿ ಚಿತ್ರಣಗೊಂಡಿದ್ದಾನೆ. ಉತ್ತರಾಧಿಕಾರತ್ವದ ಸಮಸ್ಯೆ ಎದುರಾದಾಗ ತನ್ನ ಸೋದರ ಕರ್ಣದೇವನಿಗೆ ಬನವಾಸಿಯ ಮಂಡಲಾಧಿಪತಿಯಾಗಿ ನೇಮಿಸಿ ಮತ್ತೋರ್ವ ಸ್ಪರ್ಧಿ ಸೋವಿದೇವನಿಗೆ ಮಸಣಯ್ಯನವರ ಜೊತೆ ಸಹಕರಿಸಿ ಶಾಂತಿಪಾಲನೆ ಮಾಡುವ ಜವಾಬ್ದಾರಿ ವಹಿಸಿ ಸಮಸ್ಯೆ ಬಗೆಹರಿಸಿ ರಾಜ ತಂತ್ರನಿಪುಣನಾಗಿ ಕಂಡುಬರುತ್ತಾನೆ; ಮಹಾಚೈತ್ರ ನಾಟಕದಲ್ಲಿ.

ಸಂಕ್ರಾಂತಿ ನಾಟಕದಲ್ಲಿ 'ಉಷಾ'ಳ ಅತ್ಯಾಚಾರ ಪ್ರಕರಣದ ಬಗೆಗೆ ಬಿಜ್ಜಳ ಉಷಾ ಜೊತೆಗಾತಿಯರನ್ನು ವಿಚಾರಿಸುತ್ತಿರಲು ಅವರು ಅಳತೊಡಗುತ್ತಾರೆ. ಬಸವಣ್ಣ 'ದೊರೆಗಳೆದುರು ಸ್ತ್ರೀಯರು ಅತ್ತಿದ್ದನ್ನು ನೋಡಿದ್ದು ಇದೇ ಮೊದಲು' ಎನ್ನಲು 'ನನ್ನೆದುರು ಸ್ತ್ರೀಯರು ನಕ್ಕು ನಲಿದಾಡುತ್ತಾರೆ ಅಂತಲೂ ತಮಗೆ ಗೊತ್ತಿದೆ' ಎಂದು ಹಾಸ್ಯಚಟಾಕಿ ಹಾರಿಸುವುದರ ಹಿನ್ನಲೆಯಲ್ಲಿ ತನ್ನ ರಸಿಕತೆಯನ್ನು ಬಹಿರಂಗಪಡಿಸುತ್ತಾನೆ. ಇದಕ್ಕೂ ಮೊದಲು ಶಾಸ್ತ್ರಿ ರಾಜನಿಗೆ ಶರಣರುದ್ರನ ವಿರುದ್ಧ ದೂರು ಕೊಡಲು ಉಮಾ, ರಮ, ಸುಮಾರೊಂದಿಗೆ ಬಂದಿರುತ್ತಾನೆ. ವಿಚಾರಿಸಲು "...... ತರುಣಿಯರೆ ಏಳಿ, ಕೊಂಚ ಹೀಗೆ ಬನ್ನಿ (ಅವರು ಮೆಲ್ಲಗೆ ಸುತ್ತುವಂತೆ ಸೂಚಿಸುವನು) ನೀವು ಕುಂತಾಗ ಇಷ್ಟು ಚನ್ನಾಗಿದ್ದೀರಿ ಅನ್ನಿಸಿರಲಿಲ್ಲ! ವೇದ ಪುರಾಣದ

[illegible]

ಸಂತೋಷದಲ್ಲಿ ಬೆಳೆದವರು ತಾನೇ? ಕಾಳಿದಾಸನ ವರ್ಣನೆಗೆ ಅನುಸಾರ ರೂಪುಗೊಂಡವರು ತಾನೇ?"[೨೫] ಎಂದು ಗುಣಗಾನಿಸುವಲ್ಲಿ ತನ್ನೊಳಗಿದ್ದ ಒಬ್ಬ ರಸಿಕನನ್ನು ಬಹಿರಂಗಪಡಿಸಿಕೊಂಡಿದ್ದಾನೆ.

ಮಹಾಚೈತ್ರ ನಾಟಕದಲ್ಲಿ ಬಸವಣ್ಣನ ನಿರ್ಗಮನದಿಂದ ನೊಂದಿದ್ದ ತನ್ನ ತಂಗಿ ನೀಲಾಂಬಿಕೆಯನ್ನು ಕರೆಸಿಕೊಂಡು ತಮ್ಮ ಬಾಲ್ಯದ ದಿನಗಳನ್ನು ನೆನೆದು ಭಾವುಕನಾಗುವುದನ್ನು ನೋಡುತ್ತೇವೆ. ಪ್ರಕೃತಿಯ ನಡುವಿನ ಆ ಸಂತಸದ ದಿನಗಳನ್ನು ನೆನೆಯುವ ಬಿಜ್ಜಳ ನಮಗೆ ಹೊಸ ರೀತಿಯಲ್ಲಿ ಕಂಡುಬರುತ್ತಾನೆ.

ತಲೆದಂಡ ನಾಟಕದಲ್ಲಿ ರಂಭಾವತಿ ತಮ್ಮ ಹಳೆಯ ದಿನಗಳನ್ನು ನೆನೆದು ನಗುತ್ತಾ "ನಮ್ಮ ಲಗ್ನ ಆದ ಹೊಸತರಾಗ ನೀವು ಮಾತಾಡುತ್ತಿದ್ದೀರಲ್ಲ –ಹಗಲಂತಿಲ್ಲ, ರಾತ್ರಿ ಅಂತಿಲ್ಲ ಅದರ ನೆನಪಾತು ನಗುಬಂತು"[೨೬] ಎಂಬಲ್ಲಿ ಕೂಡ ಬಿಜ್ಜಳನ ರಸಿಕತೆಯನ್ನು ಬಹಿರಂಗಪಡಿಸುತ್ತಾಳೆ.

ಶಿವರಾತ್ರಿ ನಾಟಕದಲ್ಲೂ ಕೂಡ ಪ್ರತಿಲೋಮ ವಿವಾಹ ನಡೆದು ಕಲ್ಯಾಣದಲ್ಲಿ ಕ್ರಾಂತಿ ನಡೆಯುತ್ತಿರುವ ಸಂದರ್ಭದಲ್ಲೂ ಬಿಜ್ಜಳ ಮನರಂಜನೆಗೆಂದು ವೇಶ್ಯೆ ಸಾವಂತ್ರಿಯ ಮನೆಯಲ್ಲಿದ್ದ ಚೆಲುವೆ ಕಾಮಕ್ಷಿಯನ್ನರಸಿ ಬರುವುದು ಅವರನ ರಸಿಕತೆಗೆ ದ್ಯೋತಕವಾಗಿದೆ.

ಅರಮನೆಯ ರತ್ನದಸರದ ಅಪಹರಣದ ಬಗ್ಗೆ ದಾಮೋದರನನ್ನು ವಿಚಾರಣೆಗೊಳಪಡಿಸಿದಾಗ ಆತ ತನೂ ಕಾಮಾಕ್ಷಿಯನ್ನು ಬಯಸಿದ್ದು ಕಾರಣವೆಂದು ಹೇಳಿದಾಗ ಈಗಾಗಲೇ ಮುಗ್ದಸಂಗಯ್ಯನಿಂದ ಬೇಸರಗೊಂಡಿದ್ದ ಬಿಜ್ಜಳ ನೀನೂ ನನ್ನ ಪ್ರತಿಸ್ಪರ್ಧಿಯೋ! ಎಂದು ಹೇಳುವಲ್ಲಿ ಅವನ ರಸಿಕತೆಯನ್ನು ಮನಗಾಣಬಹುದು.

ಒಟ್ಟಾರೆ 'ಬಿಜ್ಜಳ' ಎಂಬ ವ್ಯಕ್ತಿ ಹಲವು ವ್ಯಕ್ತಿತ್ವಗಳಿಂದ ಕೂಡಿದ್ದು, ಇಲ್ಲಿ ನಾಟಕಕಾರರ ಮನೋವೈಜ್ಞಾನಿಕ ಜ್ಞಾನದ ಹಿನ್ನೆಲೆಯನ್ನೂ ಗಮನಿಸಬಹುದು. "ಯಾವುದೇ ಒಬ್ಬ ವ್ಯಕ್ತಿ ಹಲವು ವ್ಯಕ್ತಿತ್ವಗಳ ಸಂಗಮ. ಸಂದರ್ಭಾನುಸಾರ ಅವು ಪ್ರಕಟವಾಗುತ್ತವೆ" ಎಂಬ ಮನೋವೈಜ್ಞಾನಿಕ ತತ್ವವನ್ನು ಬಿಜ್ಜಳನ ಪಾತ್ರದ ಮೂಲಕ ಓದುಗರಿಗೆ ಕಾಣಿಸಿಕೊಡುವಲ್ಲಿ ನಾಟಕಕಾರರು ಯಶಸ್ವಿಯಾಗಿದ್ದಾರೆ.

ಕೊನೆಟಿಪ್ಪಣಿಗಳು

೧. ಅನಕೃ: ಅನಕೃ ಅವರ ಸಮಗ್ರ ವೀರಶೈವ ಸಾಹಿತ್ಯ, ಸಾಗರ್ ಪ್ರಕಾಶನ, ೨೦೦೮, ಪು. ೨೩೯.

೨. ಪಿ.ಲಂಕೇಶ್: ಸಂಕ್ರಾಂತಿ, ಪು. ೪೨.

೩. ಅದೇ, ಪು. ೪೯

೪. ಅದೇ, ಪು. ೬೩

೫. ಅದೇ, ಪು. ೬೪

೬. ಅದೇ, ಪು. ೭೧

೭. ಎಚ್.ಎಸ್.ಶಿವಪ್ರಕಾಶ್: ಮಹಾಚೈತ್ರ, ಪು. ೨೪

೮. ಗಿರೀಶ್‌ಕಾರ್ನಾಡ್: ತಳೆದಂಡ, ಪು. ೧೪.

೯. ಅದೇ, ಪು. ೫೫

೧೦. ಅದೇ, ಪು. ೫೮

೧೧. ಗಿರೀಶ್‌ಕಾರ್ನಾಡ್: ಸಾಹಿತ್ಯವಿಮರ್ಶೆ, ೧೯೯೪, ಪು.೧೪೫.

೧೨. ಚಂದ್ರಶೇಖರ ಕಂಬಾರ, ಶಿವರಾತ್ರಿ, ಪು. ೬೧.

೧೩. ಅದೇ, ಪು. ೮೭

೧೪. ಪಿ.ಲಂಕೇಶ್, ಸಂಕ್ರಾಂತಿ, ಪು. ೪೦.

೧೫. ಅದೇ, ಪು. ೪೮.

೧೬. ಅದೇ, ಪು. ೬೫.

೧೭. ಸಿದ್ದಲಿಂಗಯ್ಯ, ಏಕಲವ್ಯ, ಪು. ೧೫೫.

೧೮. ಗಿರೀಶ್‌ಕಾರ್ನಾಡ್, ತಲೆದಂಡ, ಪು. ೧೪.

೧೯. ಅದೇ, ಪು. ೧೯. ೨೦.

೨೦. ಅದೇ, ಪು. ೧೫.

೨೧. ಚಂದ್ರಶೇಖರಕಂಬಾರ, ಶಿವರಾತ್ರಿ, ಪು. ೬೦.

೨೨. ಅದೇ, ಪು. ೨೪.

೨೩. ಗಿರೀಶ್‌ಕಾರ್ನಾಡ್, ತಲೆದಂಡ, ಪು. ೨೪.

೨೪. ಎಚ್.ಎಸ್. ಶಿವಪ್ರಕಾಶ್, ಮಹಾಚೈತ್ರ, ಪು. ೭.

೨೫. ಪಿ.ಲಂಕೇಶ್, ಸಂಕ್ರಾಂತಿ, ಪು. ೪೯.

೨೬. ಗಿರೀಶ್ ಕಾರ್ನಾಡ್, ತಲೆದಂಡ, ಪು. ೧೮.

೩(೨) ಬಸವಣ್ಣನ ಪಾತ್ರ: ತೌಲನಿಕ ವಿವೇಚನೆ

ಬಸವಣ್ಣ ಕನ್ನಡನಾಡು ಕಂಡಂಥ ಅಭೂತಪೂರ್ವ ದಾರ್ಶನಿಕ. ಸಮಾಜವಾದಿ, ಆರ್ಥಿಕತಜ್ಞ, ವಿಚಾರವಾದಿ, ಧಾರ್ಮಿಕವಾಗಿ ಅಂದಿನ ಸಮಾಜದ ಪ್ರತಿಷ್ಠಿತ ಸ್ತರದಿಂದ ಬಂದವರು. ಮತ್ತು ಸಾಮಾಜಿಕವಾಗಿಯೂ ಅಂದಿನ ಆಳುವ ವರ್ಗದ ಪ್ರತಿಷ್ಠಿತ ಸ್ಥಾನದಲ್ಲಿದ್ದವರು. ಅಂದರೆ ಬ್ರಾಹ್ಮಣ್ಯ ಮತ್ತು ರಾಜಶಾಹಿ ಎರಡೂ ಲಕ್ಷಣಗಳಿಂದ ಮೈಗೂಡಿದ ವ್ಯಕ್ತಿ. ಸಾಮಾನ್ಯವಾಗಿ ಪುರೋಹಿತಶಾಹಿ ಹಾಗೂ ರಾಜಶಾಹಿ ಇವು ಸದಾ ಚಾರಿತ್ರಿಕವಾಗಿ ಜನಸಮಾನ್ಯರ ಸ್ತರದಿಂದ ಮೇಲಿನ ನೆಲೆಗೆ ಸೇರಿದವಗಳಾಗಿದ್ದು ಆಳಿಸಿಕೊಳ್ಳುವ ವರ್ಗದವರನ್ನು ಹೆದರಿಸಿ ಸುಲಿಗೆ ಮಾಡಿ ಹತೋಟಿಯಲ್ಲಿಟ್ಟುಕೊಂಡವುಗಳು. ಅದರೆ ಈ ಎರಡೂ ಮೇಲ್‌ಸ್ತರಗಳ ಭಾಗವಾಗಿದ್ದ ಬಸವಣ್ಣನವರು ಕೆಳಗಿನ ಸ್ತರದ ಜನಸಾಮಾನ್ಯರೊಂದಿಗೆ ತಮ್ಮನ್ನು ಸಮೀಕರಿಸಿಕೊಂಡು ಹೊಸತೊಂದು ಸಾಮಾಜಿಕ ಧಾರ್ಮಿಕ ಆಂದೋಲನದ ಪ್ರವರ್ತಕರಾದದ್ದು ಅಭೂತಪೂರ್ವವಾದ ಸಂಗತಿಯೇ ಆಗಿದೆ.

ಬಸವಣ್ಣನವರು ಐಕ್ಯವಾದ ಅರ್ಧಶತಮಾನದ ಅಂತರದಲ್ಲಿ ಬಾಳಿದ ಹರಿಹರ ಬರೆದ 'ಬಸವರಾಜದೇವರ ರಗಳೆ' ಬಸವಣ್ಣನವರ ಆಂದೋಲನಕ್ಕೆ ಬರೆದ ಸಾಹಿತ್ಯಕ ವ್ಯಾಖ್ಯಾನದಂತಿದೆ. ಆದರೆ ಕವಿಯ ಶೈವಮನಸ್ಸು ಕಾರಣವಾಗಿ ನೂರಕ್ಕೆ ನೂರು ನೆರವೇರಲಿಲ್ಲವೆಂಬ ವಾದವಿದ್ದರೂ ಈ ಕೃತಿಯಲ್ಲಿ ಎರಡು ಯುಗಧರ್ಮಗಳ ಹೋರಾಟವೆಂಬಂತೆ ಹಳೆಯ ಮತ್ತು ಹೊಸ ಮೌಲ್ಯಗಳ ಸಂಘರ್ಷಣೆ ಉದ್ದಕ್ಕೂ ಸಾಗಿದುದು. ಹೊಸ ಮೌಲ್ಯ ಕಾಲೂರುತ್ತಿದ್ದುದು ಕಂಡುಬರುತ್ತದೆ.

ಹರಿಹರನಿಂದ ಪ್ರಾರಂಭವಾಗಿ ಇಂದಿನವರೆಗೂ ಬಸವೇಶ್ವರರ ನಾಯಕತ್ವದಲ್ಲಿ ನಡೆದ ೧೨ನೇ ಶತಮಾನ ಶರಣಚಳವಳಿಯನ್ನು ವಸ್ತುವಾಗುಳ್ಳ ಅನೇಕ ಕಾವ್ಯ, ಕಥೆ, ಕಾದಂಬರಿ, ನಾಟಕಗಳು ಸಾಕಷ್ಟು ಬಂದಿರುವುದೇ ಆ ಚಳವಳಿಯ ಮಹತ್ವವನ್ನು ಸಾರುತ್ತಿದೆ.

"ಬಸವಣ್ಣನವರ ವ್ಯಕ್ತಿತ್ವ ಬಹುಮುಖವಾದದು. ಒಂದು ಕಡೆ ರಾಜಕೀಯದಲ್ಲಿ ಅತ್ಯುನ್ನತ ಅಧಿಕಾರ, ಇನ್ನೊಂದು ಕಡೆ ಆಧ್ಯಾತ್ಮಿಕ ಮಹಾಸಾಧಕ, ಭಕ್ತಿಭಂಡಾರಿ, ಇದಲ್ಲದೆ ಸಮಾಜದಲ್ಲಿ ಬೇರುಬಿಟ್ಟ ವಿಷಮತೆಯನ್ನು ಕಂಡು ಕೆರಳುವ ಕ್ರಾಂತಿಕಾರ; ಜನರ ದುಃಖವನ್ನು ಕಂಡು ಕಂಬನಿ ಮಿಡಿಯುವ ಲೋಕಸಂಸಾರಿ, ಸ್ವಯಂಪೂರ್ಣಸಮಾಜದ ಕನಸನ್ನು ಕಂಡ ಕಾಯಕನಿಷ್ಠೆ, ಸಮಾಜಸುಧಾರಕ, ಈ

ಬಹುಮುಖವಾದ ಅನುಭವಗಳನ್ನು ವಚನಗಳ ರೂಪದಲ್ಲಿ ಹೊರಹೊಮ್ಮಿಸಿದ ವರಕವಿ"[೧] –ಈ ಬಹುಮುಖ ವ್ಯಕ್ತಿತ್ವವನ್ನು ಈ ಐವರು ನಾಟಕಕಾರರು ಹೇಗೆ ಚಿತ್ರಿಸಿದ್ದಾರೆಂಬುದನ್ನು ನೊಡುವುದು ಈ ಅಧ್ಯಾಯದ ಉದ್ದೇಶವಾಗಿದೆ.

ಬಸವಣ್ಣನವರ ವೈಚಾರಿಕ ನಿಲವುಗಳು ಅಂದಿನ ಕಾಲದ ಜನಸಮಾನ್ಯರ ಮನಸ್ಸಿನ ಪ್ರಭಾವ ಪ್ರಭುತ್ವದೊಂದಿಗಿನ ಬಸವಣ್ಣನ ಬಾಂಧವ್ಯ, ಅರಮನೆಯ ಕೊಂಡೆಯರ ಮೇಲಾದ ಬಸವಣ್ಣನ ಪ್ರಸಿದ್ಧತೆಯ ಪರಿಣಾಮ, ಪ್ರತಿಲೋಮವಿವಾಹದ ಬಗ್ಗೆ ಬಸವಣ್ಣನ ನಿಲುವು, ಮೌಢ್ಯಾಚರಣೆಯ ಬಗ್ಗೆ ಬಸವಣ್ಣನ ಧೋರಣೆ, ಭಂಡಾರದ ಬಗೆಗಿನ ಬಸವಣ್ಣನ ಆದರ್ಶ ತತ್ತ್ವ, ಪವಾಡಪುರುಷನಾಗಿ ಬಸವಣ್ಣ– ಈ ವಿವಿಧ ನೆಲೆಗಳಲ್ಲಿ ಬಸವಣ್ಣನ ಪಾತ್ರ ಚಿತ್ರಣವನ್ನು ಈ ಐದೂ ನಾಟಕಗಳ ಮೂಲಕ ವಿವೇಚಿಸಬಹುದು.

ಬಸವಣ್ಣನವರ 'ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ' ಎಂಬ ನೈತಿಕ ಮೌಲ್ಯದ ಸಾರವಾದ ಈ ವಚನದ ವಿಮರ್ಶೆಯೇ ಜನಸಮಾನ್ಯರ ಪಾತ್ರಗಳ ಮೂಲಕ ನಡೆದಿದೆ. ಪಿ.ಲಂಕೇಶರ 'ಸಂಕ್ರಾಂತಿ' ನಾಟಕದಲ್ಲಿ ಕೆಂಚ ಹೇಳುವ – "ಹಂದಿ ಬಂತು, ಗದ್ದೆ ಹೊಗತು ಅಂತ ಇಟ್ಕೊ– ಏನಪ್ಪಾ ಮಾಡ್ತಿ ಆವಾಗ? ಬಂದು ಗಢರ್ ಅಂದ್ರ ಎನ್ ಮಾಡ್ತಿ ಅಂತೇನಿ? ಎಲಾ ಹಂದ್ಯಪ್ಪ ಬಸವಣ್ಣ ಕೊಲಬ್ಯಾಡ ಅಂದಾನ ಅಂತೀಯ? ನನ್ನ ಬೇಕಾದ್ರೆ ಕೊಲ್ಲು ಅಂತೀಯಾ? ಹೇಳ್ರಲೇ" [೨] ಎಂಬಲ್ಲಿ ನಾಟಕಕಾರರು ಬಸವಣ್ಣನ ತತ್ತ್ವಗಳನ್ನು ಜನಸಾಮಾನ್ಯರು ತಮ್ಮ ನಿತ್ಯಜೀವನದಲ್ಲಿ ಆಚರಣೆಗೆ ತರುವಲ್ಲಿ ಎದುರಾಗಬಹುದಾದ ಸಮಸ್ಯೆಯನ್ನು ಬಿಂಬಿಸಿದ್ದಾರೆ. ಅಲ್ಲದೆ ಅದೇ ನಾಟಕದಲ್ಲಿನ ಶರಣ ರುದ್ರನ ತಂದೆ ಉಜ್ಜ ಹೇಳುವ "ಹೆಂಡ ಬಿಡು, ಕಂಡಬಿಡು, ಹೆಂಗಸು ಬಿಡು– ಏನೇನಲ ಬಿಡೋದು?" [೩] ಇಷ್ಟೊಂದು ಬೇಡಗಳ ನಡುವೆ ಬದುಕುವುದರ ಸಾಮಾನ್ಯರ ಕಷ್ಟವನ್ನು ನೊಡಬಹುದು ಇಲ್ಲಿ. ಇನ್ನು ಸಾಮನ್ಯ ಜನರಿಗೆ ಬಸವಣ್ಣನವರ 'ಗುರು', ಲಿಂಗ, ಜಂಗಮ' ಪರಿಕಲ್ಪನೆಗಳ ಜ್ಞಾನವಿರಲಿಲ್ಲ. ಕಂಬಾರರ 'ಶಿವರಾತ್ರಿ' ನಾಟಕದಲ್ಲಿ ಬರುವ ಕಲ್ಲಪ್ಪ ಹೇಳುವ "ಮಕ್ಕಟ ಅಂದರ ಒಂದೆರಡು ತರಬಾರದೇನವಾ ನಾವೂ ಕುಣಿಸಿಕೊಂತ ಕುಂದರತಿದ್ದಿವಿ"[೪] ಎಂಬಲ್ಲಿ ಲಿಂಗದ ಪರಿಕಲ್ಪನೆಯೇ ಸಾಮಾನ್ಯ ಜನರ ಜ್ಞಾನ ಮಿತಿಗೆ ಅರ್ಥವಾಗಿರಲಿಲ್ಲ ಎಂಬುದನ್ನು ನಾಟಕಕಾರರು ಈ ಮೂಲಕ ತೋರಿಸಿದ್ದಾರೆ. ಆದರೆ ಬಸವಣ್ಣನ ತತ್ತ್ವಗಳು ಸಾಮಾನ್ಯ ಜನರ ಜೀವನದಲ್ಲಿ ಹಾಸುಹೊಕ್ಕಾಗಿದ್ದವು. 'ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಮಾತ್ರ ಪಡೆಯುವುದು ಬಸವನ್ಣನವರ ತತ್ತ್ವ'[೫] ಶಿವರಾತ್ರಿ

[illegible]

[illegible]

[illegible]

ನಾಟಕದಲ್ಲೇ ಬರುವ ಅರಮನೆಯ 'ರತ್ನದ ಸರವ ಕಳುವಿನ ಪ್ರಸಂಗ'ದಲ್ಲಿ ಸೂಳೆ ಸಾವಂತ್ರಿ ಮುಗ್ದ ಸಂಗಯ್ಯನಿಂದ ಪಡೆದ ರತ್ನದ ಸರವನ್ನು ಕಾಮಾಕ್ಷಿಗೆ ನೀಡಲು ಕಾಮಾಕ್ಷಿ ಹೇಳುವ "ಅಮ್ಮಾ ಈ ಸರದ ಬೆಲೆ ನನ್ನ ಬೆಲೆಗಿಂತ ಹೆಚ್ಚು ನನಗಿದು ಬೇಡ"[೬] ಎನ್ನುವಲ್ಲಿ ಈ ಸರವನ್ನು ಕದ್ದಂಥ ದಾಮೋದರನು ಕಾಶವ್ವನ ಮನೆಯಲ್ಲಿಟ್ಟಾಗ 'ಹೆಗ್ಗಣದ ವಾಸನೆ' ಎಂದು ಹೇಳುವುದು ಹಾಗೂ ಆ ಸರವನ್ನು ಎಸೆಯಲು ಹೋಗಿ ದಾಮೋದರ ಬಂದುದರಿಂದ ಅವನಿಗೆ ಕೊಡುವುದು – ಇಲ್ಲೆಲ್ಲಾ ಬಸವಣ್ಣನ ತತ್ತ್ವಗಳು ಜನಮಾನಸದಲ್ಲಿ ಬೆರೆತುಹೋಗಿದ್ದುವು ಎಂಬುದನ್ನು ಈ ನಾಟಕಕಾರರು ಬಿಂಬಿಸಿದ್ದಾರೆ. ಬಸವಣ್ಣ – ಪ್ರಭುತ್ವದೊಂದಿಗಿನ ಸಂಬಂಧವನ್ನು ನೋಡಿದಾಗ ಬಸವಣ್ಣನಿಗೂ ಬಿಜ್ಜಳನಿಗೂ ವೈಯಕ್ತಿಕವಾಗಿ ಅನೇಕ ಬೇಧಗಳಿದ್ದುವು. "ಅವರಿಬ್ಬರೂ ಬೇರೆ ಬೇರೆ ಪಂಥಗಳಿಗೆ ಸೇರಿದವರು. ಬಸವಣ್ಣನ ಪ್ರತಿಯೊಂದು ಕೆಲಸವನ್ನು ಬಿಜ್ಜಳ ಸಹಾನುಭೂತಿಯಿಂದ ನೋಡಲು ಸಾಧ್ಯವಾಗುತ್ತಿರಲಿಲ್ಲ. ಅವರ ಸಾಮಾನ್ಯ ಜೀವನ ಸ್ಥಾನಮರ್ಯಾದೆಯನ್ನು ಪರಿಗಣಿಸಿ ಸಾಮ್ಯವಾದ ಇತಿಮಿತಿ ಇಲ್ಲದ ದಾನಧರ್ಮ, ಅರಸನಿಗೆ ಕೊಂಚ ವ್ಯತಿರೇಕವಾಗಿ ಕಂಡಿರಬಹುದು. ಆದರೆ ಇದನ್ನೇ ಬೆಳೆಸಿ ತಮ್ಮ ಮಧುರ ಬಾಂಧವ್ಯ ಕೆಡಲು ಅವಕಾಶ ಕೊಡಲಿಲ್ಲ.[೭] ವ್ಯಕ್ತಿಯಾಗಿ, ಸುಧಾರಣಾವಾದಿಯಾಗಿ, ಭಂಡಾರಿಯಾಗಿ, ಬಿಜ್ಜಳ ಬಸವಣ್ಣನನ್ನು ಒಪ್ಪಿಕೊಂಡಿದ್ದು ಸರಿ. ಆದರೆ ತಾನೊಬ್ಬ ರಾಜನಾಗಿ ಪ್ರಭುತ್ವದ ಕೇಂದ್ರವಾಗಿ ಸಾಧ್ಯವಾಗಲಿಲ್ಲ. ಬಸವಣ್ಣ ಬಿಜ್ಜಳರ ಸಂಬಂಧ ಭೋಜ–ಕಾಳಿದಾಸರ ಸಂಬಂಧವನ್ನು ಜ್ಞಾಪಿಸುತ್ತದೆ. ಚಾಡಿಮಾತಿನಿಂದ ಕಾಳಿದಾಸನನ್ನು ಅರಮನೆಯಿಂದ ಭೋಜರಾಜ ಹೊರ–ಕಳುಹಿಸಿದಂತೆಯೇ ಇಲ್ಲೂ ಬಿಜ್ಜಳ ಚಾಡಿಮಾತುಗಳಿಂದಲೇ ಬಸವಣ್ಣನನ್ನು ಭಂಡಾರಿ ಹುದ್ದೆಯಿಂದ ಇಳಿಸಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಸಂಕ್ರಾಂತಿ ನಾಟಕದಲ್ಲಿ ಬಸವಣ್ಣ ಮಂತ್ರಿಸ್ಥಾನ ತೊರೆಯಲು ಪ್ರಮುಖ ಕಾರಣವಾದ ಭಂಡಾರದ ಹಣವನ್ನು ದೋಚಿದ ಆರೋಪದ ಬಗ್ಗೆ ಬಿಜ್ಜಳ ಹೇಳುತ್ತಾ, "ನಿಮ್ಮ ಶತೃಗಳೆಲ್ಲಾ ನನ್ನಲ್ಲಿ ಬಂದು ನಿಮ್ಮ ಮೇಲೆ ತಮ್ಮ ಇಪ್ಪತ್ತಾರನೇ ಚಾಡಿ ಹೇಳಿದರು"[೮] ಎಂದು ಹೇಳುವಲ್ಲಿ ಬಸವಣ್ಣನ ಶತೃಗಳ ಸಂಖ್ಯೆಯೂ ಹೆಚ್ಚಾಗಿದ್ದುದನ್ನು ಬಿಜ್ಜಳನ ಮೇಲೆ ಪದೇ ಪದೇ ಒತ್ತಡ ಹಾಕುತ್ತಿದ್ದುದನ್ನು ಮನಗಾಣಬಹುದು.

ಬಸವಣ್ಣ–ಬಿಜ್ಜಳರ ಸಂಬಂಧ ಉತ್ತಮ ಸ್ನೇಹ ಸಂಬಂಧದಂತಿತ್ತು. 'ಮಹಾಚೈತ್ರ' ನಾಟಕದಲ್ಲಿ ಬಸವಣ್ಣ ಕಲ್ಯಾಣ ತೊರೆದು ಹೋಗಿದ್ದು, ಬಿಜ್ಜಳನೇ ಮಹಾಭಂಡಾರಿ ಹುದ್ದೆಯಿಂದ ತೆಗೆದುಹಾಕಿದರೆಂಬ ವಿಷಯ ಕೇಳಿ ನಾಗಶೆಟ್ಟಿ

"....ಬಸವಣ್ಣೋರ ಒಬ್ಬನೇ ಮಗ ಸತ್ತಿದ್ದಾಗ ಪ್ರಭುಗಳು ಸ್ವಂತ ಮಗನೇ ಸತ್ತ ಹಾಗೆ ಶೋಕಿಸುತ್ತಿದ್ದರು."[೯] ಎಂಬ ಪ್ರತಿಕ್ರಿಯೆಯಲ್ಲಿ ನೋವಿನಲ್ಲೂ ಪರಸ್ಪರ ಹೇಗೆ ಸ್ಪಂದಿಸುತ್ತಿದ್ದರೆಂಬ ಅರ್ಥವಾಗುತ್ತದೆ.

ಶಿವರಾತ್ರಿ ನಾಟಕದಲ್ಲಿ ಬಸವಣ್ಣ – ಬಿಜ್ಜಳರನ್ನು ವೇಶ್ಯೆ ಸಾವಂತ್ರಿಯ ಮನೆಯಲ್ಲಿ ಮುಖಾಮುಖಿಯಾಗಿಸಿರುವುದು ವಿಶೇಷವಾಗಿದೆ. ಪ್ರತಿಲೋಮ ವಿವಾಹವಾದ ಮದುಮಗ ಶೀಲವಂತನಿಗೆ ರಕ್ಷಣೆ ಕೊಡುವಂತೆ ಬಸವಣ್ಣ ಬಿಜ್ಜಳನಿಗೆ ಕೇಳಿದಾಗ ಬಸವಣ್ಣನಿಗೆ ಮಾತು ಕೊಟ್ಟು ದ್ವಾರಪಲಕನನ್ನು ಕರೆಸಿ ".... ಈ ಕ್ಷಣವೇ ಹೋಗಿ ಕೊತವಾಲನಿಗೆ ಹೇಳು, ಶೀಲವಂತ ಎಲ್ಲಿದ್ದರಲ್ಲಿ ಅವನಿಗೆ ಬಿಗಿ ಭದ್ರತೆ ಕೊಡಬೇಕು ತಿಳಿಯಿತೇ?"[೧೦] ಎಂದು ತಕ್ಷಣವೇ ಆದೇಶಿಸುವ ಔದಾರ್ಯತೆ ತೋರುವಲ್ಲಿ ಇವರ ನಡುವಣ ಉತ್ತಮ ಸಂಬಂಧಕ್ಕೆ ಸಾಕ್ಷಿಯಾಗಿ ನಿರೂಪಿತಗೊಂಡಿದೆ. ಧರ್ಮಬಾಹಿರ ರೆಂದು ಸಮಾಜದಿಂದ ನಿರಾಕರಣೆಗೊಳಗಾಗಿರುವವರಿಗೆ ಹೊಸ ಧರ್ಮ, ದೇವರನ್ನು ಕೊಟ್ಟು ನೇರ ಕೈಲಾಸಕ್ಕೆ ಕರೆದೊಯ್ಯುತ್ತಿರೋ? ಎಂಬ ಬಿಜ್ಜಳನ ಪ್ರಶ್ನೆಗೆ ಬಸವಣ್ಣ "ಅದನ್ನು ನಿಮ್ಮ ವ್ಯವಸ್ಥೆಯೂ ಮಾಡಲಾರದು ಪ್ರಭು, ತಮ್ಮ ರಾಜ್ಯದಲ್ಲಿ ಧರ್ಮವಿದೆ ಕೆಲವೇ ಪ್ರತಿಷ್ಠಿತರಿಗೆ. ಅದನ್ನವರು ಬಡಜನಗಳ ಮೇಲೆ ಹೇರುತ್ತಿದ್ದಾರೆ."[೧೧] ಎಂದು ನೇರವಾಗಿ ಪ್ರಶ್ನಿಸುವ ವ್ಯವಸ್ಥೆಯನ್ನು ಪ್ರತಿಭಟಿಸುವುದನ್ನು ನೋಡಬಹುದು.

'ತಲೆದಂಡ' ನಾಟಕದಲ್ಲಿ ಬಿಜ್ಜಳನಿಗೆ ಸಂಸ್ಕೃತದಲ್ಲಿ ಮಂಚ್ಯಣಕ್ರಮಿತ ರಚಿಸಿರೋ ಬಿರುದಾವಳಿಗಳ ಬಗ್ಗೆ ಬಸವಣ್ಣನನ್ನು ಕೇಳಿದಾಗ ಬಸವಣ್ಣ "ಒಂದು ಹೊಸ ಶಾಸನ ಅದರೊಳಗೆ ಮೆರಸಲಿಕ್ಕೆಂತ ಒಂದು ಹೊಸ ಯುದ್ಧ, ಐನೂರು ಹೊಸ ವೀರಗಲ್ಲು, ಸಾವಿರ ಹಸಿ ರಂಡೆ ಮುಂಡೆಯರ ಹಲುಬು! ಮತ್ತು ಪರಾಕ್ರಮದ ವೆಚ್ಚಕ್ಕಂತ ಹೊಸ ತೆರಿಗೆ , ಬಿಟ್ಟಿ, ಕೊಟ್ಟಣ, ಗೋಳು"[೧೨] ಎಂದು ರಾಜ್ಯಸ್ಥಿತಿಗೆ ರಾಜರ ಬಿರುದಾವಳಿ, ಶಾಸನಗಳಿಂದಾಗುವ ನಷ್ಟದ ಬಗ್ಗೆ ಹೇಳುವುದು ಮಂಚ್ಯಣಕ್ರಮಿತ ನಾವು 'ಮಹಾರಾಜರ ಪ್ರಜೆಗಳು' ಎಂದಾಗ "ನಾವು ಮಹಾರಾಜರ ಅಧಿಕಾರಿಗಳು ಮಹಾರಾಜರ ಪ್ರಜೆಗಳ ಗೋಳನ್ನು ಮಹಾರಾಜರ ಕಿವಿಯಲ್ಲಿ ಹಾಕೋದು ನಮ್ಮ ಕರ್ತವ್ಯ"[೧೩] ಎಂದು ಪ್ರಭುಗಳಾದವರಿಗೆ ಪ್ರಜೆಗಳ ಮೇಲಿರಬೇಕಾದ ಕಾಳಜಿಯನ್ನು ಅರ್ಥಮಾಡಿಸುತ್ತಾರೆ. ಬಿಜ್ಜಳ ನಾಲ್ಕೈದು ವರ್ಷಗಳಿಂದ ಅರಮನೆಗೆ ಬಂದಿಲ್ಲದಿರು–ವುದರ ಬಗ್ಗೆ ಬಸವಣ್ಣನನ್ನು ಪ್ರಶ್ನಿಸಿದಾಗ "ನಾ ಭಂಡಾರದಲ್ಲಿ ದುಡಿಯೋದು ಬಿಜ್ಜಳ ಮಹಾರಾಜರ ಅನುಕೂಲತೆಗಾಗಿ ಅಲ್ಲ, ಆ ಸಂಪತ್ತು ರಾಜವಂಶದ ಸೊತ್ತಲ್ಲ, ಜನರ

ಸೊತ್ತು, ಪ್ರಜೆಗಳ ಪಾಲಕ ಅಂತ ರಾಜನಿಗೆ ಅಲ್ಲಿ ಅಧಿಕಾರ ಅದ" [೧೪], ಎಂಬ ಬಸವಣ್ಣನ ಧೋರಣೆ ಇಂದಿಗೂ ಅನುಕರಣೀಯವಾಗಿದೆ. ಸೋವಿದೇವ ತಾನಿಲ್ಲದಾಗ ಭಂಡಾರ ತೆಗೆಸಿದ್ದರ ಬಗ್ಗೆ ನೇರವಾಗಿ ಪ್ರಶ್ನಿಸಿ ರಾಜನ ಮನೆಯವರಿಗೆ ಭಂಡಾರದಲ್ಲಿ ಪ್ರವೇಶವಿಲ್ಲ ಎಂದು ನಿಷ್ಠುರವಾಗಿ ಹೇಳಬಲ್ಲವನು. "ಬಸವಣ್ಣನ ಮನೆಯಲ್ಲಿ ನಡೆಯುವ ದಾಸೋಹಕ್ಕೆ ವ್ಯಾಪಾರಸ್ಥರ ಬೆಂಬಲವಿದೆ, ಈ ಆರ್ಥಿಕ ಬೆಂಬಲವನ್ನು ಬಸವಣ್ಣ ನಿರಾಕರಿಸಿಲ್ಲ, ಶರಣಸಾಮ್ರಾಜ್ಯವಾದ ಕಲ್ಯಾಣವು ಒಂದು ಕ್ಷೇಮಕರ ಸ್ಥಳವಾದುದರಿಂದ ವ್ಯಾಪಾರಸ್ಥರ ಸ್ವರ್ಗವಾಗಿದೆ. ಈ ಕಾರಣಕ್ಕಾಗಿಯೇ ವ್ಯಾಪಾರಸ್ಥರಿಗೆ, ಬಿಜ್ಜಳನಿಗೆ ಬಸವಣ್ಣ ಬೇಕಾದ ವ್ಯಕ್ತಿಯಾಗಿದ್ದಾನೆ." [೧೫] ಕೊನೆಯಲ್ಲಿ ಬಿಜ್ಜಳನನ್ನು ಬೆಟ್ಟಿಯಾಗುತ್ತಾನೆ. ಬಸವಣ್ಣನನ ಬರುವಿಕೆಯಯನ್ನು ಬಿಜ್ಜಳ ನಿರೀಕ್ಷಿಸುವುದು, ಎಲ್ಲೋ ಒಂದು ಕಡೆ ಬಂದೇ ಬರುವನೆಂಬ ಆಶಾವಾದ, ಅವರಿಬ್ಬರ ಸ್ನೇಹವನ್ನು ತಿಳಿಸುತ್ತದೆ. "ಒಬ್ಬ ಶ್ರೇಷ್ಠ ಕ್ರಾಂತಿವಾದಿಯಲ್ಲಿರಬೇಕಾದ ಎಲ್ಲಾ ಗುಣಗಳನ್ನು ಗಿರೀಶರು ಬಸವಣ್ಣನಲ್ಲಿ ಕಂಡಿದ್ದಾರೆ."[೧೬] ಪ್ರಭುತ್ವವನ್ನು ನೇರವಾಗಿ ಪ್ರಶ್ನಿಸಿ ಜನಸಾಮಾನ್ಯರ ಹಿತವನ್ನು ಕಾಪಾಡುವುದೇ ಪ್ರಭುತ್ವದ ಹೊಣೆಗಾರಿಕೆ ಎಂದು ಸಾರಿದ್ದು ಇಂದಿಗೂ ರಾಜಕಾರಿಣಿಗೆ ನೀಡಬೇಕಾದ ಸಲಹಾಚಿಕಿತ್ಸೆಯಾಗಿದೆ.

'ಸಂಕ್ರಾಂತಿ' ನಾಟಕದಲ್ಲಂತೂ ಪಿ.ಲಂಕೇಶರು ಬಸವಣ್ಣನವರ ಮೂಲಕ ಅಂದಿನ ಪ್ರಭುತ್ವ ಮತ್ತು ಇಂದಿನ ರಾಜಕಾರಣಿಗಳಿಗೂ ವಾಸ್ತವದ ಬಗ್ಗೆ ಉತ್ತಮ ಸಲಹೆ ಕೊಡಿಸಿದ್ದಾರೆ. ಬಿಜ್ಜಳ ಬಸವಣ್ಣನೊಂದಿಗೆ ರುದ್ರನ ಅತ್ಯಾಚಾರ ಪ್ರಕರಣದ ಬಗ್ಗೆ ಮಾತನಾಡುವಾಗ ಜನರನ್ನು ಹತೋಟಿಯಲ್ಲಿಡಲು ತಪ್ಪನ್ನು ಹುಡುಕುವುದು ತಮ್ಮ ಕರ್ತವ್ಯವೆಂದು ಹೇಳಲು ಬಸವಣ್ಣ. 'ಅರಮನೆಯ ಪಲ್ಲಂಗದ ಮೇಲೆ ಒರಗಿ ಸುಂದರ ಕಂಠಗಳ ಧ್ವನಿ ಕೇಳುವವರಿಗೆ ಬೀದಿಯ ಗೋಳು ತಟ್ಟುವುದು ಕಷ್ಟ. ತಮ್ಮ ಕಿರೀಟದ ಒಂದು ವಜ್ರ ಈ ದೇಶದ ಅರ್ಧ ಹೊಟ್ಟೆಗಳಿಗೆ ಅನ್ನ ಕೊಡಬಲ್ಲದು. ಜನ ತಮ್ಮ ಅಂತಃಪುರದ ಹೆಂಗಸರ ಮೂಗುತಿಗಳ ಸೌಂದರ್ಯ ಬಣ್ಣಿಸುತ್ತಾರೆ. ತಮ್ಮ ಹೆಬ್ಬಾಗಿಲ ಕಂಬಗಳನ್ನು ನೆನೆದು ಹಿಗ್ಗುತ್ತಾರೆ. ಆದರೆ ನನಗೆ ಚಳಿಗಾಲದಲ್ಲಿ ಅಂಗೈ ಅಗಲ ಬಟ್ಟೆಯಿಲ್ಲದೆ ನಡುಗುವ ಹಸುಳೆಗಳನ್ನು ನೋಡಿ ಭಯವಾಗುತ್ತದೆ, ತಮ್ಮ ಕನಸುಗಳು ಮೈಪಡೆಯಬೇಕಾದ್ದು ಅಲ್ಲಿ; ಎಲ್ಲರನ್ನೂ ಮೂಕರನ್ನಾಗಿ ಇಡುವುದರಲ್ಲಲ್ಲ" [೧೭] ಎಂದು ಪ್ರಭುವಾದವನ ವೈಭವದ ಬಗ್ಗೆ ಪ್ರಜೆಗಳು ತಮ್ಮ ನೋವನ್ನು ಮರೆತು ಹೆಮ್ಮೆಪಡುತ್ತಾರೆ. ಪ್ರಭುವಾದವನು ತಮ್ಮ ಪ್ರಜೆಗಳ ನೋವಿಗೆ ಸ್ಪಂದಿಸುವುದರಲ್ಲಿ ಬದ್ಧತೆಯನ್ನು ತೋರಬೇಕು. ತನ್ನ ಅನವಶ್ಯಕ ಐಶಾರಾಮಿ ಬದುಕಿಗೆ ಕಡಿವಾಣ ಹಾಕಿ ಅದನ್ನು

ಬಡವರಿಗಾಗಿ ವಿನಿಯೋಗಿಸಬೇಕು ಎಂಬುದು ಬಸವಣ್ಣನ ವಾದ. ಇಂದಿನ ನಮ್ಮ ರಾಜಕಾರಣಿಗಳು ರಸ್ತೆಯಲ್ಲಿ ಬಂದರೆ ಸಂಚಾರ ವ್ಯವಸ್ಥೆಯೇ ಅಸ್ತವ್ಯಸ್ತವಾಗಿ, ತಮ್ಮನ್ನು ನೋಡಿ ಹೆಮ್ಮೆ ಪಡುವ ಜನರಿಗೆ ತೊಂದರೆಯಾಗುವುದನ್ನು ಗಮನಕ್ಕೆ ತಂದುಕೊಳ್ಳದೇ ತಮ್ಮ ಪ್ರತಿಷ್ಠೆಯನ್ನು ರಸ್ತೆಯಲ್ಲೂ ಮೆರೆಯುತ್ತಾರೆ. ಇಂಧನದ ಕೊರತೆಯಾಗಿರುವ ಈ ಕಾಲದಲ್ಲಿ ಒಬ್ಬ ಮಂತ್ರಿ ಬರಲು ಹತ್ತಿಪ್ಪತ್ತು ವಾಹನಗಳು ಹಿಂದೆಮುಂದೆ ಬರುವುದರ ಅವಶ್ಯಕತೆಯೇನು? ಪ್ರಜೆಗಳ ಸೇವೆಗಾಗಿ ಬಳಕೆ ಮಾಡಲು ನೀಡಿದ ವಾಹನಗಳನ್ನು ತಮ್ಮ ಖಾಸಗಿ ಬದುಕಿಗೂ ಉಪಯೋಗಿಸುವ ಅಧಿಕಾರಿಗಳಿಗೆ ಕಡಿವಾಣ ಹಾಕುವವರು ಯಾರು? ಎಂಬಂಥ ಪ್ರಶ್ನೆಗಳು ಅಂದಿನ ಬಸವಣ್ಣನಿಂದ ಇಂದಿನ ಆಳುವ ವರ್ಗದವರಿಗೆ ಬಂದಿರುವುದನ್ನು ಗಮನಿಸಬೇಕು. ಇಂತಹ ಮನಸ್ಥಿತಿ ಆಳುವವರಿಗೆ ಬರಬೇಕಾದರೆ ಬಸವಣ್ಣನ ಪಾತ್ರದಿಂದಲೇ ತಲೆದಂಡ ನಾಟಕದಲ್ಲಿ ಹೇಳಿಸಿರುವಂತೆ "ರಾಜ್ಯಭಾರ ಒಂದು ಕಾಯಕ, ಅದು ಹುಟ್ಟಾ ಬರತಕ್ಕಂಥಾ ಹಕ್ಕಲ್ಲ, ಆಸ್ತಿ ಅಲ್ಲ, ಅದನ್ನು ಮಾಡೋ ಅಧಿಕಾರ ಗಳಿಸಿಕೋಬೇಕು. ಆ ಮ್ಯಾಲ ಅದನ್ನು ಶ್ರದ್ಧೆಯಿಂದ ಮಾಡಬೇಕು."[೧೮] ಆದರೆ ಅರ್ಹತೆ ಇಲ್ಲದೆ ಅಧಿಕಾರ ಪಡೆಯೋ ಅಧಿಕಾರಿಗಳು ಸಾಮಾನ್ಯಜನರ ಸೇವಕರು ತಾವು ಎಂಬ ವಿವೇಕವನ್ನೇ ಹೊಂದದೆ ತಮ್ಮ ಐಶಾರಾಮಿಬದುಕಿಗೆ ಒತ್ತುಕೊಡುವುದನ್ನೇ ಬಸವಣ್ಣ ಅಂದು ಪ್ರಶ್ನಿಸಿದ್ದು, ಇಂದಿಗೂ ಪ್ರಶ್ನೆಯಾಗೇ ಇರುವುದನ್ನು ಕಾಣುತ್ತೇವೆ.

ಬಿಜ್ಜಳನ ಪ್ರಭುತ್ವದಲ್ಲಿ ಬಸವಣ್ಣ ಮಂತ್ರಿಯಾಗಿ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸಿದರು. "ಅಹಿಂಸೆ, ಸರ್ವಧರ್ಮಸಮಾನ ಮನೋಭಾವ, ಪ್ರಜಾಪ್ರಭುತ್ವ- ಇವೆಲ್ಲ ಬಸವಣ್ಣನ ತತ್ತ್ವಗಳಾಗಿರೋ ಹಾಗೇ ಗಾಂಧೀಜಿ ತತ್ತ್ವಗಳೂ ಆಗಿದ್ದುವು"[೧೯] ರಾಜಕೀಯವಾಗಿ ಅಂದಿನ ಬಸವಣ್ಣನ ತತ್ತ್ವಗಳು ಗಾಂಧೀಜಿಗೂ ಮಾದರಿಯಾಗಿ ಕಂಡದ್ದು ವಿಶೇಷ. ಇಂದಿಗೂ ಪ್ರಸ್ತುವಾಗಿರುವುದರಲ್ಲಿ ಅವರ ಮಹತ್ವವಿದೆ.

ನಾನೆ ಬಿಜ್ಜಳ ನಾಟಕದಲ್ಲಿ ಬರುವ ಪೂಜಾರಿ ಕಾವನಯ್ಯ ಹೇಳುವ "ರಾಜನ ಭಂಡಾರಿಯಾಗಿ ಇಡೀ ಬೊಕ್ಕಸವನ್ನು ಹಸಿದವರಿಗೆ ಸೂರೆಮಾಡಿದ, ಇದರಿಂದ ಬಸವಣ್ಣನ ಜನಬಲ ರಾಜಬಲಕ್ಕೂ ಮಿಗಿಲಾಗಿದೆ. ಮೊದಮೊದಲು ರಾಜನ ಪರಮಸ್ನೇಹಿತನಾಗಿದ್ದವನು ಈಗೀಗ ವೈರಿಯಾಗತೊಡಗಿದ್ದಾನೆ. ಎಂಬಲ್ಲಿ ಕೂಡ ಜಡಭರತರು ಬಿಜ್ಜಳನಿಗೆ ತಾನೊಬ್ಬ ರಾಜನಾಗಿ ಬಸವಣ್ಣನನ್ನು ಸೈರಿಸಲಾಗದೆ ಗೊಂದಲಕ್ಕೊಳಗಾಗುವುದನ್ನು ಬಿಂಬಿಸಿದ್ದಾರೆ. 'ಸಂಕ್ರಾಂತಿ' ನಾಟಕದಲ್ಲಿ ಲಂಕೇಶರು ಬಿಜ್ಜಳನಿಂದಲೇ ಹೇಳಿಸುವ "ರಾಜ್ಯಕ್ಕೆ ನಾನೋ ದೊರೆ ಅಥವಾ ನೀವೋ ಎಂಬ ಪ್ರಶ್ನೆ

[illegible]

ಮತ್ತೆ ಮತ್ತೆ ಏಳುತ್ತದೆ."[೨೦] ಮಾತಿನಲ್ಲಿ ಕೂಡ ಬಸವಣ್ಣನ ಜನಬಲ ರಾಜನ ಕಿಚ್ಚಿಗೆ ಕಾರಣವಾಗಿದ್ದನ್ನೇ ಸಮರ್ಥಿಸಿದ್ದಾರೆ.

ಬಸವಣ್ಣನ ಕಿರಿದಂತರರದ ಕಾಲದ ಹರಿಹರನಿಂದಲೇ ಪವಾಡಪುರುಷನಾಗಿ ಚಿತ್ರಿತರಾದ ಇವರನ್ನು ಈ ಐವರು ನಾಟಕಕಾರರು ಪವಾಡದ ವಿಷಯದ ಹಿನ್ನೆಲೆಯಲ್ಲಿ ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ನೋಡುವುದು ಔಚಿತ್ಯವಾಗಿದೆ. ಬಸವಣ್ಣ ತಾನು ಪವಾಡ ಪುರುಷ ಎಂಬಂರ್ಥದ ಪ್ರಜೆಗಳ ಪ್ರೀತಿ–ನಂಬಿಕೆಗಳ ಕುರಿತು ಸಂಕೋಚಪಡುವನು. ಧರ್ಮದ ವಿಷಯದಲ್ಲೂ ಇಂಥದೇ ಆರೋಗ್ಯಕರ ಎಚ್ಚರ ಬಸವಣ್ಣನಿಗಿದೆ. ಆತ ಒಮ್ಮೆ ಅವನ ಉಗ್ರ ಅನುಯಾಗಯಿಯಾದ ಜಗದೇವನ ತಂದೆ ತೀರಿಕೊಂಡಾಗ ಅಲ್ಲಿಗೆ ಹೋಗುತ್ತಾನೆ. ಜಗದೇವ ತನ್ನ ಬ್ರಾಹ್ಮಣ್ಯದ ವಿಧಿ–ವಿಧಾನಗಳಲ್ಲಿ ತೊಡಗಿರುತ್ತಾನೆ. ಆತನಿಗೆ ಬಸವಣ್ಣನನ್ನು ನೋಡಿ ಮುಜುಗರವಾಗುತ್ತದೆ. ತನ್ನನ್ನು ಈ ಸ್ಥಿತಿಯಲ್ಲಿ ನೋಡಿ ಸಿಟ್ಟು ಬಂದಿರಬೇಕೆಂದು ಭಾವಿಸುತ್ತಾನೆ. ಆಗ ಬಸವಣ್ಣ ನನಗೇನು ಅನಿಸತದೆ ಅದು ಮುಖ್ಯವಲ್ಲ, ನಿನ್ನನ್ನು ನೀನು ಅರಿಯಬೇಕು ಎಂಬರ್ಥದ ಮಾತಾಡುತ್ತಾನೆ. ತಲೆದಂಡದಲ್ಲಿನ ಬಸವಣ್ಣನ ಪವಾಡದ ವಿಷಯದಲ್ಲಿನ ಸಂಕೋಚ ನೋಡುವುದಾದರೆ; ಸೋವಿದೇವ ತಾನಿಲ್ಲದಾಗ ಭಂಡಾರವನ್ನು ಪ್ರವೇಶಿಸಿ ಪರೀಕ್ಷೆ ಮಾಡಿಸಿದ್ದರ ಬಗ್ಗೆ ವಿಚಾರಿಸಲು ಅರಮನೆಗೆ ಬಂದು ವಿಚಾರಿಸುತ್ತಿರಲು, ಹೊರಗೆ ನೆರೆದಿದ್ದವರನ್ನು ಒಳಕರೆಸಿದಾಗ ಬಂದ ಹೆಂಗಸು "ಲಗ್ನ ಆಗಿ ನಾಕು ವರ್ಸಾ ಆತು, ಹುಟ್ಟಿದ ಕೂಸೆಲ್ಲಾ ಹೋಕ್ಕಾವು, ಒಂದರೇ ಉಳಿಸಿ ಕೊಡೋ ಬಸವಣ್ಣ" ಎಂದು ಕೇಳಿದಾಗ ಬಸವಣ್ಣ ಗಾಬರಿಯಾದಾಗ ನಿನಗೆ ಗೊತ್ತಿಲ್ಲದಿರುವುದು ಏನಿದ್ಯೋ ಬಸವಣ್ಣ, ಪವಾಡ ಮಾಡಿದವ ನೀನು. "ನೀ ಮಾಮನಿ ವೆಚ್ಚಕ್ಕಂತ ಬೊಕ್ಕಸದಾಗಿಂದ ರೊಕ್ಕ ಇಸಗೊಂಡಿದ್ದೀಯಂತ.... ಐವತ್ತು ಸಾವಿರ ಹೊನ್ನು, ಅದನ್ನು ಶಿವ ಮತ್ತ ತುಂಬಿ ಕೊಟ್ಟನಂತ, ಸಣ್ಣ ಧಣೇರು ಲೆಕ್ಕ ಎಣಿಸಿದರೆ ಒಂದು ದುಗ್ಗಾಣಿ ಕಮ್ಮಿಯಿದ್ದಿದ್ದಿಲ್ಲಂತ!"[೨೧] ಎಂದು ಭಾವುಕಳಾಗಿ ಮಾತನಾಡಿದಾಗ ಸಂಕೋಚಗೊಂಡ ಬಸವಣ್ಣ ನಾ ಬೊಕ್ಕಸದಾಗಿಂದ ಹೊನ್ನು ಕದೀತೀನಿ ಅಂತ ನೀವೆಲ್ಲಾ ನಂಬುತ್ತೀರಾ? ಎಂದು ಕೇಳಿದಾಗಲೂ ಮುದುಕ "ಹಾಂಗಲ್ಲೋ, ಪ್ರಸಾದಕ್ಕ, ದಾಸೋಹಕ್ಕ, ಶರಣರ ಸಲುವಾಗಿ ಎನ್ನಲು ಬಸವಣ್ಣನಿಗೆ ಈ ಜನ ತನ್ನನ್ನು ಪವಾಡಪುರುಷನನ್ನಾಗಿ ಮಾಡಲು ಕಳ್ಳ ಅನ್ನಲೂ ಸಿದ್ದರಿದ್ದಾರಲ್ಲಾ? ಎಂದುಕೊಳ್ಳುವುದರ ಜೊತೆಗೆ ಬಿಜ್ಜಳ ಕೂಡ ಅದನ್ನು ಸಮರ್ಥಿಸುತ್ತನೆ. ಪವಾಡಪುರುಷನಾಗಿ ತನ್ನನ್ನು ನೋಡುವುದಕ್ಕೆ ಬಸವಣ್ಣ ವಿರೋಧವನ್ನು

ತೋರುವುದನ್ನು ಕಾರ್ನಾಡರು ರೂಪಿಸಿರುವುದು ವಿಶೇಷವಾಗಿದೆ. ಬಸವಣ್ಣನ ಕಾಯಕ ನಿಷ್ಠೆಯನ್ನು ಎಲ್ಲರಿಗೂ ಬೋಧಿಸಿದ್ದು, ಅಸಂಗ್ರಹ ತತ್ತ್ವವನ್ನು ಎಲ್ಲರೂ ಅನುಸರಿಸಿದ್ದರಿಂದ ತಮ್ಮ ಆದಾಯದಲ್ಲಿ ತಮಗೆ ಸಾಕಾಗಿ ಮಿಕ್ಕಿದ್ದನ್ನು ದಾಸೋಹಕ್ಕೆ ನಿಡುವ ನಿಯಮವನ್ನು ಪಾಲಿಸುತ್ತಿದ್ದರಿಂದ ಭಂಡಾರದ ಹಣ ಹೆಚ್ಚಿತ್ತೇ ಹೊರತು ಶಿವ ಬಸವಣ್ಣನ ಕಳ್ಳತನಕ್ಕೆ ಸಹಕಾರ ನೀಡಿದ್ದಲ್ಲವೆಂಬುದು ಸಾಮಾನ್ಯಜ್ಞಾನದಿಂದ ದೂರವಾಗಿ ಬಸವಣ್ಣನನ್ನು ಪವಾಡಪುರುಷನನ್ನಾಗಿ ರೂಪಿಸಿದ್ದು ಇತಿಹಾಸ ವಿರೋಧವಾದುದು.

'ಶಿವರಾತ್ರಿ' ನಾಟಕದಲ್ಲಿ ವೇಶ್ಯೆ ಸಾವಂತ್ರಿಯ ಮನೆಯಲ್ಲಿ ಮುಗ್ದ ಸಂಗಯ್ಯ ಲಿಂಗಪೂಜೆ ಮಾಡಿಕೊಳ್ಳುತ್ತಿರಲು, ಬಿಜ್ಜಳ ಕಾಮಾಕ್ಷಿಗಾಗಿ ಬರುವುದು, ಬಸವಣ್ಣನೂ ಮುಗ್ದ ಸಂಗಯ್ಯನನ್ನು ಹುಡುಕಿಕೊಂಡು ಅಲ್ಲಿಗೆ ಬಂದು ಬಿಜ್ಜಳನನ್ನು ಸಂಧಿಸಿದಾಗ ಈಗಾಗಲೇ ಸಾವಂತ್ರಿ ತಮ್ಮ ವೃತ್ತಿಯ ಧರ್ಮದ ಬಗ್ಗೆ ಹೇಳಿದ್ದುದನ್ನು ನೆನೆದು ಬಿಜ್ಜಳ "ಮಹಾರಾಜ ಮತ್ತವನ ಅರಮನೆ ಕೂಡ ಇವರ ದೃಷ್ಟಿಯಲ್ಲಿ ಯಕಶ್ಚಿತ್ ಅನಿಸುವ ಪವಾಡ ಮಾಡಿದ್ದೀಯಲ್ಲ" ಎಂದು ಅಚ್ಚರಿ ಪಡುವುದು ಹಾಗೂ ಒಂದು ಕಡೆ ಲಿಂಗಪೂಜೆಯಲ್ಲಿ ನಿರತರಾದ ಮುಗ್ಧಸಂಗಯ್ಯ ದೇವರು ಇನ್ನೊಂದೆಡೆ ಮಹಾತ್ಮಾ ಬಸವಣ್ಣನವರು! ಮಧ್ಯೆ ಬಡಪಾಯಿ ಬಿಜ್ಜಳ ಇದಕ್ಕಿಂತ ಇನ್ನೊಂದು ಪವಾಡ ಇದೆಯೇ? ಎಂಬಲ್ಲಿ ನಾಟಕಕಾರರು ಸಾಮಾನ್ಯರಿಂದ ಅಸಾಧ್ಯವಾದದ್ದನ್ನು ಸಾಧಿಸಿದ್ದೇ ಬಸವಣ್ಣನ ಪವಾಡ ಸದೃಶಸಾಧನೆ ಎಂದು ವಾಸ್ತವದ ಹಿನ್ನೆಲೆಯಲ್ಲಿ ಪವಾಡವನ್ನು ವಿವೇಚಿಸಿದ್ದಾರೆ. ಇಲ್ಲಿಯೂ ಬಸವಣ್ಣ ಈ ಪವಾಡಗಳ ವಿಷಯದಲ್ಲಿ ಬೇಸರವನ್ನು ವ್ಯಕ್ತಪಡಿಸುತ್ತಾರೆ. "ಇಂಥ ಪವಾಡ ಮಾಡಿ ಮಾಡಿ ನಾನೂ ನಗೆ ಮಾರಿ ತಂದೆಯಾಗಿದ್ದೇನೆ ಎಲ್ಲಿ ಯಾವಾಗ ಯಾವ ಪವಾಡ ಮಾಡ್ತಿನೋ ತಿಳಿದಾಂಗ ಆಗಿದೆ ದಿನಾ ನನ್ನ ಹೆಸರಿಗೆ ಪವಾಡಗಳ ಕಟ್ಟುತ್ತಾರೆ" [೧೮] ಎಂದು ಈ ಜನರ ಭಾವುಕತೆಗೆ ತಾನು ನಗೆಪಾಟಲಾಗಿರುವುದಕ್ಕೆ ಬೇಸರವಾಗಿರುವಂತೆ ನಾಟಕಕಾರರು ವಿಶ್ಲೇಷಿಸಿದ್ದಾರೆ. 'ನಾನೇ ಬಿಜ್ಜಳ' ನಾಟಕದಲ್ಲಿ ಮಾತ್ರ ಹರಿಹರನ ಬಸವರಾಜದೇವರ ರಗಳೆಯನ್ನು ಅನುಸರಿಸಿಯೇ ನಾಟಕದೊಳಗೊಂದು ನಾಟಕ ನಡೆಯುವಾಗ ಬಿಜ್ಜಳ ಪಾತ್ರಧಾರಿ ಬಸವಣ್ಣನನ್ನು ಕೆಳಜಾತಿಯವರ ಮನೆಯಲ್ಲಿ ಊಟಮಾಡುವುದನ್ನು ಪ್ರಶ್ನಿಸಿದಾಗ "ಎಲೆ ಬುದ್ಧಿಯಿಲ್ಲದ ಭೂಪ ಎರಗಿವಿಯಮರುಳೆ ನಾನೇನು ನಾರಣಕ್ರಮಿತರ ಕೇರಿಯಂ ಪೊಕ್ಕೆನೆ, ಮುಕುಂದಭಟ್ಟರ ಮನೆಯೊಳುಂಡೆನೆ, ಸೌದಿಪೆದ್ದಿಗಳ ಸಾರಿ ನಿಂದೆನೆ ದಾಮೋದರ ಭಟ್ಟರ ಪ್ರೇಮದಿಂ ಸೋಂಕಿದೆನೇ? ಎಂದು ಚಾಡಿ ಕೇಳಿದವರು ಹೇಳಿದವರನ್ನು ತರಾಟೆಗೆ ತೆಗೆದುಕೊಳ್ಳವುದು ಬಸವಣ್ಣನ "ಭಕ್ತರೊಂದು ಕುಲ–

[illegible]

ಭವಿಯೊಂದು ಕುಲ" ತತ್ತ್ವಕ್ಕೆ ಪೂರಕವಾಗಿದೆ. ಬಿಜ್ಜಳ ಬಸವಣ್ಣನ ಮಾತಿನಿಂದ ಬೇಸರಗೊಂಡು 'ವಿಪ್ರರ ಮೈಯೊಳು ನೆತ್ತರ್ ಭಕ್ತರ ಮೈಯೊಳೆ ಪಾಲ್ ಸುರಿವುದೇ?" ಎಂದು ಪ್ರಶ್ನಿಸಿ ಬಸವಣ್ಣನನ ಈ ಹಿಂದಿನ ಭಂಡಾರದ ಪವಾಡವನ್ನು ನೆನೆದು ತಡೆಯುವುದು, ಪವಾಡಪುರುಷನಾಗಿಯೇ ಕಂಡರಿಸಿರುವುದು ಕಂಡುಬಂದಿದ್ದು ಇದಕ್ಕೆ ಹರಿಹರನ ಪ್ರಭಾವವೇ ಕಾರಣವಾಗಿದೆ. ಇನ್ನು ಸಂಕ್ರಾಂತಿ ಮತ್ತು ಮಹಾಚೈತ್ರ ನಾಟಕಗಳಲ್ಲಿ ಪವಾಡದ ಶಬ್ದವನ್ನೇ ಬಳಸಿಲ್ಲ ಆದರೆ ಬಸವಣ್ಣನವರ ಜನಬಲ ರಾಜಬಲವನ್ನೂ ಮೀರಿದ್ದು ವಾಸ್ತವದ ನೆಲೆಯಲ್ಲಿ ಪವಾಡವೇ ಎಮಬುದನ್ನು ಕಾಣಬಹುದು; ಮಾಟ, ಮಂತ್ರದ ಪವಾಡದ ದೃಷ್ಟಿಯಿಂದಲ್ಲ ಎಂಬುದು ಈ ನಾಟಕಗಳಿಂದ ಧ್ವನಿತವಾಗುತ್ತದೆ.

ಬಸವಣ್ಣನನ್ನು ವೈಚಾರಿಕ ಹಿನ್ನೆಲೆಯಲ್ಲಿ ನೋಡದಿದ್ದರೆ ಅವರನ್ನು ಅರ್ಥಮಾಡಿಕೊಳ್ಳುವುದು ಅಪೂರ್ಣವಾಗುತ್ತದೆ. ೧೨ನೇ ಶತಮಾನದಲ್ಲೇ ವೈಚಾರಿಕತೆಯ ಗಾಳಿ ಕರ್ನಾಟಕದಲ್ಲಿ ಬಸವಣ್ಣನ ಮೂಲಕ ಬೀಸಿದ್ದು ಇತಿಹಾಸ, ಅಂದಿನ ಸಮಾಜದ ಅಸಮಾನತೆಯ ಸಂಕೇತಗಳಾಗಿದ್ದ ದೇವರು, ದೇವಾಲಯಗಳ ಬಗ್ಗೆ ಬಸವಣ್ಣನವರು ವಿರೋಧ ವ್ಯಕ್ತಪಡಿಸಿದ್ದುದನ್ನು ಅವರ ವಚನಗಳಲ್ಲೇ – 'ದೇಹವೇ ದೇವಾಲಯ', 'ಕಲ್ಲನಾಗರ ಕಂಡರೆ ಹಾಲನೆರೆಯುವರಯ್ಯಾ' – ಕಾಣುತ್ತೇವೆ. 'ಸಂಕ್ರಾಂತಿ' ನಾಟಕದಲ್ಲಿ ಶಾಸ್ತ್ರಿಯೊಬ್ಬ ಶರಣರುದ್ರನ ಅತ್ಯಾಚಾರ ಸಂಗತಿಯ ಬಗ್ಗೆ ಬಿಜ್ಜಳನಿಗೆ ಚಾಡಿ ಹೇಳಲು ಬಂದು ಬಸವಣ್ಣ ಭಂಡಾರ ವಹಿಸಿಕೊಂಡ ಮೇಲೆ ದೇವಾಲಯಗಳಿಗೆ ಹೊಸ ಕಳೆ ಬಂದಿದೆ ಎಂದು ವ್ಯಂಗ್ಯವಾಗಿ ಹೇಳುತ್ತಾ "ತ್ರಿಪುರಾಂತಕ ದೇವಾಲಯದಲ್ಲಿ ಹದ್ದು ಕಾಗೆಗಳು ಗೂಡು ಕಟ್ಟಿಕೊಂಡಿವೆ, ಬ್ರಹ್ಮದೇವಾಲಯದ ಛಾವಣಿ ಛಿದ್ರವಾಗಿದೆ, ನಾರಸಿಂಹನ ಕಟ್ಟಡ ಶಿಥಿಲಗೊಂಡು ಮುಂದಿನ ಮಳೆಗಾಲದಲ್ಲಿ ನೆಲಸಮವಾಗಲಿದೆ. ಮಲಯವತಿ ದೇವಾಲಯದಲ್ಲಿ ಕಳುವಾದ ಒಡವೆ ಸಿಕ್ಕಲ್ಲ, ಅಲ್ಲಿಯ ಅರ್ಚಕನ ಮೇಲೆ ತಪ್ಪು ಹೊರಿಸಲಾಗಿದೆ."[೨೨] ಎಂಬ ಚಾಡಿ ಹೇಳುವುದರಿಂದ ಬಸವಣ್ಣನ ದೇವಾಲಯ ನಿರಾಕರಣೆಯ ವಿಚಾರವನ್ನು ನಾಟಕಕಾರರು ಈ ರೀತಿ ಅಭಿವ್ಯಕ್ತಿಸಿದ್ದಾರೆ. ಇನ್ನೂ ಇದೇ ನಾಟಕದಲ್ಲಿ ಬಸವಣ್ಣ ಬಿಜ್ಜಳನಿಗೆ ಪ್ರಜೆಗಳ ಮೇಲೆ ದೊರೆಗಿರಬೇಕಾದ ಕಾಳಜಿಯ ಬಗೆಗೆ ಹೇಳುತ್ತಾ "ಚನ್ನಕೇಶವನ ಮುತ್ತಿನ ಹಾರ ಅನೇಕರ ಕಂಬನಿ ಒರೆಸಬಲ್ಲದು, ಇದನ್ನು ಹಲವೊಮ್ಮೆ ಹೇಳಿದ್ದೇನೆ. ಮತ್ತೆ ಹೇಳುತ್ತಿದ್ದೇನೆ. ಈ ರಾಜ್ಯದ ಪ್ರತಿಯೊಂದು ವಿಗ್ರಹವೂ ಬಡಜನರ ಮೂಕ ವೇದನೆಯ ಘನರೂಪವಾಗಿದೆ."[೨೩] ಎಂದು ಅಂದೇ ಬಸವಣ್ಣನವರು

[illegible]

ಹೇಳಿದ್ದು ಈ ನಾಟಕದಲ್ಲಿ ಪ್ರಕಟವಾಗಿದ್ದು, ಇಂದೂ ಈ ಮೌಢ್ಯಾಚರಣೆಗಳು ಭರವಿಲ್ಲದಂತೆ ಸಾಗುತ್ತಿರುವುದು ವಿಪರ್ಯಾಸವಾಗಿದ್ದು ಬಸವಣ್ಣ ಪ್ರಸ್ತುವಾಗುತ್ತಾರೆ. ಮಹಾಮಜ್ಜನ, ಹೋಮ, ಹವನಾದಿಗಳಿಗಾಗಿ ತುಂಬಾ ಬೆಲೆಬಾಳುವ ವಸ್ತುಗಳನ್ನು ಅನವಶ್ಯಕವಾಗಿ ಅರ್ಪಿಸಿ ಹಾಳುಮಾಡುವ ನಮ್ಮ ಜನಕ್ಕೆ 'ಉಣದ ಜಂಗಮಕ್ಕೆ ಹಿಡಿ ಎಂಬರಯ್ಯ ಉಣುವ ಜಂಗಮ ಬಂದರೆ ನಡೆ ನಡೆ ಎಂಬರಯ್ಯ" ಎಂದು ವ್ಯಂಗ್ಯವಾಡಿರುವುದರಿಂದ ಯಾವತ್ತಿಗೂ ಪ್ರಸ್ತುತವಾಗುತ್ತಾರೆ. 'ನನಗೆ ಮಾತ್ರ ಈ ಎಲ್ಲದರ ಹಿಂದಣ ಮೌಢ್ಯ ದುರಂತವಾಗಿ ಕಾಣುತ್ತದೆ.' ಎಂದು ನಾಟಕಕಾರರು ಹೇಳುತ್ತಿರುವುದು ಸಮಂಜಸವಾಗಿದೆ.

ಮಹಾಚೈತ್ರ ನಾಟಕದಲ್ಲಿ ಬಸವಣ್ಣನವರ ನಿರ್ಗಮನದ ನಂತರ ಕ್ರಮಿತರೊಬ್ಬರ ಚಿಂತನೆ "ವೈದಿಕ ವಿದಿಗಳು ಯಜ್ಞ, ಯಾಗ, ಹೋಮಗಳು ಸುಗಮವಾಗಿ ಸಕಾಲಕ್ಕೆ ಮಳೆಯ ವೃಷ್ಟಿಯಾಗಿ ಬೆಳೆ ಸಮೃದ್ಧವಾಗಿ, ವ್ಯಾಪಾರ ವಾಣಿಜ್ಯಗಳು ವೃದ್ಧಿಸಲು, ಮಠ, ಮಂದಿರ, ಅಗ್ರಹಾರಗಳ ಪಾವಿತ್ರ್ಯತೆಯನ್ನು ಪುನರುತ್ಥಾನಗೊಳಿಸಬೇಕು. ಪ್ರಜಾಜೀವನದ ತಲಶಿಲೆಯಾದ ವರ್ಣಾಶ್ರಮ, ಧರ್ಮವನ್ನು ರಕ್ಷಿಸಲೇಬೇಕು"[೨೪] ಎಂಬ ಮಾತಿನಿಂದ ಬಸವಣ್ಣನ ಕಾಲದಲ್ಲಿ ಈ ವೈದಿಕ ಮಂತ್ರ, ಹೋಮ, ಹವನ, ಯಾಗಗಳಿಗೆ ನಿಯಂತ್ರಣ ಹೇರಲಾಗಿದ್ದುದನ್ನು ಬಿಂಬಿಸಲಾಗಿದೆ. ವರ್ಣಾಶ್ರಮ ಪದ್ಧತಿಯನ್ನು ತೊಡೆಯುವ ಪ್ರಯತ್ನದಲ್ಲಿ ಮುಂದುವರಿದಿದ್ದನ್ನು ಸೂಚಿಸಲಾಗಿದೆ. ರಾಜನ ಕಡೆಯವರು ಬೊಮ್ಮಯ್ಯನಿಗೆ ಹೊಡೆದಿದ್ದು, ಮಾರಯ್ಯನಿಗೆ ಬಾಸುಂಡೆ ತೋರಿಸಿ "ಒನ್ನನ್ಸಲ ಅನ್ನುಸ್ತದೆ.... ಕಾಳವ್ವಂಗೆ ಕುರಿಕೋಳಿ ಕೊಡದ್ಬಿಟ್ವಿ ಅಂತ ಇದೆಲ್ಲ ಗ್ರಹಚಾರ ಬಂತೇನೋ"[೨೫] ಎಂದು ಬೊಮ್ಮಯ್ಯ ಹೇಳುವಲ್ಲಿ ಇವತ್ತಿಗೂ ಕೆಲ ಅಧಿಕಾರಿಗಳು ಕುರಿ, ಕೋಳಿ ಬಲಿಯನ್ನು ಕಾನೂನುರೀತ್ಯಾ ತಡೆದರೂ ನಿಲ್ಲದಿರುವುದನ್ನು ಕಾಣುತ್ತೇವೆ. ಆದರೆ ಅಂದು ಬಸವಣ್ಣನವರು ಜನರು ಮಾರವ್ವ, ಕಾಳವ್ವರಿಗೆ ಬಲಿ ಕೊಡುವುದನ್ನು ತಪ್ಪಿಸಿ ಅಹಿಂಸೆಯ ಪಾಠವನ್ನು ಪ್ರೀತಿಯಿಂದ ಕಲಿಸಿ ಪಾಲಿಸುವಂತೆ ಮಾಡಿದ್ದು ಪ್ರಸ್ತುತಕ್ಕೆ ಅನುಕರಣೀಯವಾಗಿದೆ. ಆದರೆ ಚಂದ್ರ ಶೆಟ್ಟಿ ಮತ್ತು ನಾಗಶೆಟ್ಟಿ ಬಸವಣ್ಣ ಕಲ್ಯಾಣದಿಂದ ಬಿಟ್ಟು ಹೋದನಂತರದ ಸ್ಥಿತಿಯ ಚಿತ್ರಣವನ್ನು ಕೊಡುತ್ತಾ "ತ್ರಿಪುರಾಂತಕ ದೇವಸ್ಥಾನದಲ್ಲಿ ಪ್ರತಿನಿತ್ಯ ದೀಪಾಲಂಕಾರ, ಈವಾಗ ಅದು ಕತ್ತಲಿನ ಆಗರ"[೨೬] ಎಂಬಲ್ಲಿ ಹಾಗೂ ಸಂಕ್ರಾಂತಿ ನಾಟಕದಲ್ಲಿ ಬರುವ ಬಿಜ್ಜಳನಿಗೆ ಶಾಸ್ತ್ರಿಯೊಬ್ಬ ಬಸವಣ್ಣನ ವಿರುದ್ಧ ದೂರು ಹೇಳುವ ಸಂದರ್ಭ "ತ್ರಿಪುರಾಂತಕ ದೇವಾಲಯದಲ್ಲಿ ಹದ್ದು ಕಾಗೆಗಳು ಗುಡು ಕಟ್ಟಿಕೊಂಡಿವೆ" ಎಂದು ಬಸವಣ್ಣನ ಕಾಲದಲ್ಲಿ ತ್ರಿಪುರಾಂತಕ

ದೇವಾಲಯದ ದುಃಸ್ಥಿತಿಯ ಚಿತ್ರಣ ಕೊಡುವುದು ತದ್ವಿರುದ್ಧವಾಗಿರುವುದನ್ನು ನೊಡಬಹುದು. ಇಲ್ಲಿ ಲೇಖಕರು ತಮ್ಮದೇ ಆದ ದೃಷ್ಟಿಕೋನದಿಂದ ನೋಡಿದ್ದು, ಶಿವ ಪ್ರಕಾಶರು ತಮ್ಮ ನಾಟಕದಲ್ಲಿ ಬಸವಣ್ಣ ನಿರ್ಗಮಿತ ಕಲ್ಯಾಣ ಅಂಧಕಾರದಲ್ಲಿ ಮುಳುಗಿತು ಎಂಬುದನ್ನು ಸೂಚಿಸಿದ್ದಾರೆ. ಲಂಕೇಶರು ತಮ್ಮ ನಾಟಕದಲ್ಲಿ ಬಸವಣ್ಣನವರ ದೇವಸ್ಥಾನ ವಿರೋಧಿ ತತ್ತ್ವವನ್ನು ಪ್ರತಿಪಾದಿಸಿದ್ದಾರೆ.

ಶರಣ ಕ್ರಾಂತಿಯ ಪ್ರಮುಖ ಆಂದೋಲನ ವರ್ಣಾಶ್ರಮ ಪದ್ಧತಿಯನ್ನು ಅಂತ್ಯಗೊಳಿಸಿ, ಸಾಮಾನ್ಯ ಜನರನ್ನು ಆ ಸಂಕೋಲೆಯಿಂದ ಬಿಡುಗಡೆಗೊಳಿಸಲು ಮಾಡಿದ ಒಂದು ಕ್ರಾಂತಿಕಾರಕ ಯೋಜನೆ ಪ್ರತಿಲೋಮವಿವಾಹ, ಬಸವಣ್ಣನವರ ನೇತೃತ್ವದಲ್ಲಿ ನಡೆದ ಶರಣಕ್ರಾಂತಿಯ ಪ್ರತಿಲೋಮ ವಿವಾಹದಲ್ಲಿ ಬಸವಣ್ಣನ ಪಾತ್ರವನ್ನು ನೊಡಬಹುದಾದರೆ;

ಸಂಕ್ರಾಂತಿ ನಾಟಕದಲ್ಲಿ ಪಿ.ಲಂಕೇಶರು ಹರಳಯ್ಯ ಮತ್ತು ಮಧುವರಸನ ಪಾತ್ರಗಳನ್ನು ತರದೆ, ಬಸವಣ್ಣನ ಪ್ರಭಾವಕ್ಕೊಳಗಾಗಿ ಶರಣನಾದ 'ರುದ್ರ' ಮತ್ತು ಬ್ರಾಹ್ಮಣ ಪಂಡಿತರ ಮಗಳು 'ಉಷಾ'ರ ಪ್ರೇಮಪ್ರಕರಣವನ್ನು ತಂದಿದ್ದು, ಇದೂ ಪ್ರತಿಲೋಮ ಪ್ರೇಮವಾಗಿದ್ದು, ಬಸವಣ್ಣನ ದೃಷ್ಟಿಯಲ್ಲಿ ಪ್ರೇಮವಾದರೆ ಬಸವ ವಿರೋಧಿಗಳು ಮತ್ತು ಬಿಜ್ಜಳ ದೃಷ್ಟಿಯಲ್ಲಿ ಅತ್ಯಾಚಾರ ಪ್ರಕರಣವಾಗುತ್ತದೆ. ರುದ್ರನನ್ನು ಪ್ರೇಮಿಸಿದ್ದ ಉಷಾ ಕೂಡ ತಾನು ಪ್ರೀತಿಸಿದ್ದು 'ರುದ್ರ'ನನ್ನು 'ಶರಣರುದ್ರ'ನ್ನಲ್ಲವೆಂದೂ ಇದು ಅತ್ಯಾಚಾರವೆಂದೂ ಪ್ರತಿಪಾದಿಸುವುದು ವಿಶೇಷವಾಗಿದ್ದು, ಬಸವಣ್ಣ ಇಲ್ಲಿ ಸೋಲೊಪ್ಪಬೇಕಾಗುತ್ತದೆ.

ಇನ್ನು ಶಿವಪ್ರಕಾಶರು ಪ್ರತಿಲೋಮ ವಿವಾಹದಿಂದಾಗಿ ಕಲ್ಯಾಣಕ್ರಾಂತಿಯಾಗಿ ಬಸವಣ್ಣನನ್ನು ಭಂಡಾರಿ ಪಟ್ಟದಿಂದ ಕೆಳಗಿಳಿಸಿರುವಂತೆ, ಬಸವಣ್ಣ ಕ್ರಾಂತಿಯಿಂದ ನೊಂದು ಕಲ್ಯಾಣತೊರೆದು ಹೋದಾಗಿನಿಂದ ತಮ್ಮ ಮಹಾಚೈತ್ರ ನಾಟಕವನ್ನು ಪ್ರಾರಂಭಿಸುತ್ತಾರೆ. ಚಂದ್ರಶೆಟ್ಟಿಗೆ ನಾಗಶೆಟ್ಟಿ ಕಲ್ಯಾಣ ಅಂಧಕಾರದಲ್ಲಿ ಮುಳುಗಿದೆಯಲ್ಲಾ ಯಾಕೆ ದೀಪ ಉರಿತಿಲ್ಲಾ? ಎಂದು ಕೇಳಿದಾಗ ಚಮದ್ರಶೆಟ್ಟಿ ಬಸವಣ್ಣ ಕಲ್ಯಾಣ ತೊರೆದುದಾಗಿ ಪ್ರಭುಗಳು ಅವರನ್ನು ಮಹಾಭಂಡಾರಿ ಪದವಿಯಿಂದ ತೆಗೆದುದಾಗಿ ಇದಕ್ಕೆ ಮಾದಿಗರ ಹರಳಯ್ಯನ ಮಗ ಶೀಲವಂತ, ವಿಪ್ರ ಮಧುವರಸರ ಮಗಳು ಮಾಧವಿ ಇವರ ಪ್ರತಿಲೋಮವಿವಾಹವೇ ಕಾರಣ ಎಂದು ಹೇಳಿ ವರ್ಣಸಂಕರಕ್ಕೂ ಬಸವಣ್ಣನ ಕಲ್ಯಾಣ ನಿರ್ಗಮನಕ್ಕೂ ಸಂಬಂಧ ಮಾಡಿದ್ದಾರೆ. ಈ ಕಾರ್ಯವನ್ನು

ಮಾಡಿಸಿದವರು ಬಸವಣ್ಣನವರು. ಅಷ್ಟೇ ಅಲ್ಲದೆ ಅದೇ ಸರಿ ಅಂತ ವಾದ ಮಾಡಿದರು ಎಂದು ಹೇಳುವಲ್ಲಿ ಪ್ರತಿಲೋಮವಿವಾಹ ಬಸವಣ್ಣನ ಮುಂದಾಳತ್ವದಲ್ಲೇ, ಅವರ ಇಚ್ಚೆಯಿಂದಲೇ ನಡೆದಿರುವಂತೆ ಬಿಂಬಿತವಾಗಿದೆ, ಮುಂದೆ ಮಾಚಿದೇವ ಚನ್ನಬಸವಣ್ಣ ಸಮಾಲೋಚನೆಯಲ್ಲಿ ತೊಡಗಿದ್ದಾಗ ಮಾಚಿದೇವ ತಾವು ಮಹಾಮನೆಯನ್ನು ಕಟ್ಟಿ, ಒಂದು ಕಿರುದಾರಿ ಹುಡುಕಿದೆವು. ಆ ದಾರಿ ಹಿಡಿದು ಮುಂದೆ ಬಂದಾಗ ನಾವು ಈ ಜಾತಿ ಬಿಟ್ಟು ಮದುವೆ ಮನೆಗೆ ತಲುಪಿದೆವು" ಎಂದು ಹೇಳುವಲ್ಲಿ ಬೇಸರಭಾವವೇ ಇರುವುದನ್ನು ಕಾಣುತ್ತೇವೆ. ಇದಕ್ಕೆ ಸಮರ್ಥನೆಯಂತೆ ಚನ್ನಬಸವಣ್ಣ "ಅದೇ ನಾವೆಲ್ಲಾ ಮಾಡಿದ ತಪ್ಪು, ಏನೇ ಹೇಳಿ ನಾವು ಆತುರಪಟ್ಟೆವು, ಕಾಲ ಪಕ್ವವಾಗಿರಲಿಲ್ಲ, ಬಸವಣ್ಣನವರು ಮೊದಲೇ ಭಾವುಕರು, ಇವೆಲ್ಲಾ ಆಗಿಹೋದವು"[೨೮] ಎನ್ನುವುದು. ಇಲ್ಲಿ ಬಸವಣ್ಣನೇ ದುಡುಕಿ ಮುಂದೆ ನಿಂತು ಮಾಡಿಸಿದ ಮದುವೆಯಿದು ಎಂದು ಸಾಮಾನ್ಯಜನರಾದಿಯಾಗಿ ಬಸವಣ್ಣನ ಆಪ್ತರೂ ಅದನ್ನೇ ತಿಳಿದುಕೊಂಡಿರುವಂತೆ ನಾಟಕಕಾರರು ರೂಪಿಸಿದ್ದಾರೆ. ಆದರೆ ನಡೆದಿದ್ದೇ ಬೇರೆ ಎಂಬುದನ್ನು ತಲೆದಂಡ ನಾಟಕದಲ್ಲಿ ಸಮಂಜಸತೆಯನ್ನು ನೀಡಿದ್ದಾರೆ ಲೇಖಕರು. ಮಧುವರಸ–ಲಲಿತಾಂಭಾ, ಹರಳಯ್ಯ–ಕಲ್ಯಾಣಿ, ತಮ್ಮ ಮಕ್ಕಳಾದ ಶೀಲವಂತ–ಕಲಾವತಿಯರೊಡಗೂಡಿ ಬಸವಣ್ಣ ಬಳಿ ಆಶೀರ್ವಾದಕ್ಕೆ ಬಂದಾಗ ವಿಷಯ ಕೇಳಿದ ಬಸವಣ್ಣ ಆಶ್ಚರ್ಯಚಕಿತರಾಗುವುದು. ಇವರ ಅರಿವಿಗೇ ಬಾರದೆ ಇದು ನೆರವೇರಿದುದರ ಸಂಕೇತವಾಗಿದೆ. "ಒಂದು ದಿವಸ ಈ ವರ್ಣಾಶ್ರಮ ದರ್ಮ ಈ ಜಾತಿ ವ್ಯವಸ್ಥೆ ಇವೆಲ್ಲ ಅಳಿದುಹೋಗುತಾವ, ಪ್ರತಿಯೊಬ್ಬ ಮನುಷ್ಯ ಆಗತಾನ ಅದು ತಪ್ಪಿದ್ದಲ್ಲ ಆದರೆ ಆ ಯುಗ ಮೂಡಲಿಕ್ಕೆ ಬಾಳದುಡೀಬೇಕು. ಇನ್ನೂ ಬಾಳ ದೂರ ಹೋಗಬೇಕು"[೨೯] ಎಂದು ಬಸವಣ್ಣ ಹೇಳುವಲ್ಲಿ ಈ ಪ್ರತಿಲೋಮ ವಿವಾಹ ಬಸವಣ್ಣನವರ ಗಮನಕ್ಕೆ ಬಾರದೆ ನಿಗದಿಗೊಳಿಸಿಕೊಂಡಿದ್ದು, ಅದರಿಂದಾಗಬಹುದಾದ ಅನಾಹುತ ಮತ್ತು ಆ ಕಾಲದ ಅಪಕ್ವತೆಯ ಪರಿಜ್ಞಾನ ಇದ್ದರೂ, ಅವರನ್ನೂ ಮೀರಿ ಮುಂದೆ ಹೋಗಿದ್ದು ಮನವರಿಕೆಯಾಗುತ್ತದೆ. ಒಬ್ಬ ಶರಣ, ಕಕ್ಕಯ್ಯನಿಗೆ ಬಸವಣ್ಣ ಆಶೀರ್ವಾದ ಕೊಡಲಿಲ್ಲಂತ... ಎಂದು ಕೇಳಿದಾಗ ಹರಳಯ್ಯ ಕೊಟ್ಟರೆಂದು ಹೇಳುತ್ತಾನೆ. ಆದರೆ ಬಸವಣ್ಣ ತಡವಾಗಿ ಕೊಟ್ಟೆ. ಒಮ್ಮೆಲೆ ಕೈಯೇಳಲಿಲ್ಲ" ಎಂದು ಹೇಳಿ ತಮ್ಮ ಮೊದಲಿನ ಅಸಮಾಧಾವನ್ನು ಆಶೀರ್ವಾದ ಕೊಡಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದ್ದನ್ನು ನಾಟಕಕಾರರು ಬಿಂಬಿಸಿದ್ದಾರೆ. ಬಸವಣ್ಣನಿಗೆ ಈ ಘಟನೆ ಆಗಬೇಕು ಎಂಬುದರಲ್ಲಿ ಗೊಂದಲವಿಲ್ಲ. ಅವರಿಗೆ ಈ ಬಯಕೆಯಿತ್ತು, ಅವರೇ ಹೇಳುವ 'ನಾವು

ಬಯಸಿದ್ದು, ಹೀಂಗ ಇದ್ದಕ್ಕಿಂದಾಂಗ ನನಸಾಗತದ ಅನಿಸಿದ್ದಿಲ್ಲ' ಎಂಬ ಮಾತಿನಿಂದ ಧ್ವನಿವಾಗುತ್ತದೆ, ಬಸವಣ್ಣನ ಅಂಜಿಕೆಗೆ ಕಾರಣ ಸಮಂಜಸವಾಗಿದ್ದು ಅವರ ವ್ಯವಹಾರಜ್ಞಾನಕ್ಕೆ ಪೂರಕವಾಗಿದೆ. ಅವರೇ ಹೇಳುವ 'ಇದು ಬರೇ ಲಗ್ನ ಅಲ್ಲ, ಇದು ಕ್ರಾಂತಿ, ಕ್ರಾಂತಿಯಾಗೋ ಮುನ್ನ ಅದಕ್ಕಾಗಿ ತಕ್ಕ ಸಿದ್ಧತೆ ಆಗಬೇಕು. ಸಾವಿರಾರು ವರ್ಷದಿಂದ ಬೇರೂರಿ ಬೆಳೆದು ನಿಂತ ವ್ಯವಸ್ಥೆಯನ್ನು ನಿರ್ಮೂಲನಗೊಳಿಸಲಿಕ್ಕೆ ನಮ್ಮ ದುಡಿಮೆ ಸಾಲದು, ಸಿದ್ಧತೆ ಸಾಲದು, ನಾವು ಅವಸರ ಮಾಡಬಾರದು ಅಂತ ನನಗನಿಸುತದ ಎಂಬ ಮಾತಲ್ಲಿ ಬಿಂಬಿತವಾಗಿದೆ."[೩೧] ಆ ಮದುವೆ ತನ್ನ ಆದರ್ಶದ ಮೇಲೆ ಆಗುತ್ತಾ ಇದೆ. ಅಂತಲೂ ಗೊತ್ತು, ಆ ಮದುವೆಯಾಗುವುದರಿಂದ ಅಪಾಯವಿದೆ ಅಂತಲೂ ಗೊತ್ತು ಮದುವೆಯಾಗ ಹೊರಟವರಿಗೆ ಇದು ಗೊತ್ತಿಲ್ಲ. ಬಸವಣ್ಣ ತಾನು ಉಂಟುಮಾಡಿದ ಅಲೆ ತನ್ನನ್ನೇ ಮಿರಿ ಮುಳುಗಿಸಿ ಹೋಗುವ ಸಾಧ್ಯತೆಯಿದೆ ಎಂದು ಕಂಡುಕೊಳ್ಳಬಲ್ಲವ. ಆತ ವ್ಯವಹಾರಸ್ಥನೂ ಹೌದು, ಸಂಸಾರಸ್ಥನೂ ಹೌದು, ಶರಣನೂ ಹೌದು, ಎಂಬುದು ಬಿಂಬಿತವಾಗಿರುವುದನ್ನು ನೋಡಬಹುದು. ಹೀಗೆ ಬಸವಣ್ಣ ತನ್ನ ಗಮನಕ್ಕೆ ಬಾರದೇ ಮೊದಲೇ ನಿಗಧಿಯಾದ ವಿವಾಹಕ್ಕೆ ಅನುಮತಿ ಕೊಡದಿರಲಾಗಿಲಿಲ್ಲ. ಅದೂ ಅಲ್ಲದೆ ಅವರು ಇಬ್ಬರೂ ಈಗ ಶರಣರಾಗಿರುವುದರಿಂದ ಇದು ಅಂತರ್‌ಜಾತಿ ವಿವಾಹವಲ್ಲವೆಂದು ಹೇಳಿ ಆಗುವ ಅನಾಹುತವನ್ನು ತಪ್ಪಿಸಲೂ ಪ್ರಯತ್ನಿಸುವುದನ್ನು ನೋಡಬಹುದು. ಇನ್ನು ಶಿವರಾತ್ರಿ ನಾಟಕದಲ್ಲಿ ಈ ವಿವಾಹ ಘಟನೆ ಈಗಾಗಲೇ ನಡೆದುಹೋಗಿದೆ. ಅದು ಸೂತ್ರಧಾರ ಮತ್ತು ನಟ ಪಾತ್ರಗಳ ಮೂಲಕ ವ್ಯಕ್ತವಾಗುತ್ತದೆ. ಇಲ್ಲಿ ನಟ ಹರಳಯ್ಯ-ಮಧುವರಸರ ಶರಣಸಂಬಂಧ ಬಸವಣ್ಣನಿಗೆ ಒಪ್ಪಿಗೆಯಾದರೂ ಬಿಜ್ಜಳನಿಗೆ ಆಗಲಿಲ್ಲ. ಹಾಗಾಗಿಯೇ "ಹರಳಯ್ಯ-ಮಧುವರಸರನ್ನು ನಿನ್ನೆಯಷ್ಟೇ ಶೂಲಕ್ಕೇರಿಸಿದ್ದಾಗಿದೆ". "ಹರಳಯ್ಯ-ಮದುವರಸರ ನಡುವೆ ನಿಗಧಿಯಾದ ಸಂಬಂದ ಬಸವಣ್ಣನಿಗೆ ಒಪ್ಪಿಗೆಯಾಯಿತು" ಎನ್ನುವಾಗ ವಿವಾಹ ನಿಗಧಿಪಡಿಸುವಲ್ಲಿ ಬಸವಣ್ಣನ ಪಾತ್ರವಿರಲಿಲ್ಲವೆಂಬುದು ತಿಳಿದುಬರುತ್ತದೆ.

ವರ್ಣವ್ಯವಸ್ಥೆಯನ್ನು ನಿರ್ಮೂಲನ ಮಾಡುವಲ್ಲಿ ತಂದ ಬದಲಾವಣೆಗಳನ್ನು ನೋಡುವುದಾದರೆ 'ಮಹಾಚೈತ್ರ' ನಾಟಕದಲ್ಲಿ ಬಸವಣ್ಣನ ನಿರ್ಗಮನದ ನಂತರ ಬಸವಣ್ಣನ ಕಾಲದಲ್ಲಿನ ಸ್ಥಿತಿಗತಿಯ ಬಗ್ಗೆ ಕ್ರಮಿತ ಮುಕುಂದಭಟ್ಟರು ಮಂಗಳಗುಪ್ತರು ಹೇಳುವ "ಭಕ್ತಿಯ ನೆಪದಲ್ಲಿ ಮಹಾಮನೆಯನ್ನು ಕಟ್ಟಿ ನಗರದ ಅಂತ್ಯಯೋಜನಿಜರನ್ನು ಕೊಬ್ಬಿಸಿಬಿಟ್ಟ, ಹಿರಿಯರು ಅಧಿಕಾರಿಗಳೂ ಕಂಡಾಗ ವಂದಿಸೋದನ್ನ ಕೀಳುಜಾತಿ-

ಯವರು ನಿಲ್ಲಿಸಿ ಎಷ್ಟೋ ವರ್ಷ ಆದುವು. ಇನ್ನೂ ನಾಲ್ಕು ದಿವಸ ಅವನು ಇಲ್ಲೇನಾದ್ರೂ ಇದ್ದಿದ್ರೆ ವಣಿಕರು, ಅಗ್ರಹಾರದೊರು ಆಯಗಾರರಿಗೆ ಕರಕೋಡೋ ಹಾಗೆ ಮಾಡ್ತಿದ್ದ" ಎಂಬ ಮಾತುಗಳಿಂದ ಬಸವಣ್ಣ ಕಾರ್ಯಾಚರಣೆಗೆ ತಂದಿದ್ದ ಈ ಹೊಸ ಬದಲಾವಣೆಯೇ ವರ್ಣವ್ಯವಸ್ಥೆಯ ವಿರುದ್ಧ ಸಮಸಮಾಜ ಕಟ್ಟಲು ಮುಂದಾದದ್ದು ತಿಳಿಯುತ್ತದೆ.

ತಲೆದಂಡ ನಾಟಕದಲ್ಲಿ ಬಿಜ್ಜಳ ಬಸವಣ್ಣನ ಬಗ್ಗೆ ತನ್ನ ಪತ್ನಿ ರಂಭಾವತಿಯೊಂದಿಗೆ ಮಾತಾಡುತ್ತ ತಾನು ಕಳಚೂರ್ಯ ಭುಜಬಲ ಚಕ್ರವರ್ತಿ. ಆದರ ನನ್ನ ಜಾತಿ ಯಾವುದು ಕಲಚೂರ್ಯ, ಕಟ್ಟಚ್ಚೂರಿ ಅಂದರೆ ಕ್ಷೌರಿಕ! ನನ್ನ ಜಾತಿ ಕ್ಷೌರಿಕನದು.... ಜಾತಿ ಅಂದರ ಮೈ ತೊಗಲಿದ್ದಾಂಗ ಅದನ್ನು ಸುಲಿದು ಕಿತ್ತು ಒಕ್ಕೊಟ್ಟರೂ ಹೊಸ ತೊಗಲು ಬಂದ ಗಳಿಗ್ಗೆ ಎಲ್ಲರ ಕಣ್ಣಿಗೆ ಬೀಳೋದು ಅದಾ... ಅದ ಹಳೆ ಜಾತಿ. ನನ್ನ ಈ ಅರವತ್ತೆರಡು ವರ್ಷದ ಆಯಸ್ಸಿನ್ಯಾಗ ಜಾತಿಯ ಹಂಗಿಲ್ಲದ ನನ್ನನ್ನ ಕಣ್ಣಾಗ ಕಣ್ಣಿಟ್ಟು ನೊಡಿದವ ಅಂದರ ಬಸವಣ್ಣ.... ಜಾತಿಪದ್ಧತಿಯನ್ನು ಈ ನಾಡಿನಿಂದ ಸವರಿ ಬಿಡತೀನಿ ಅನ್ನದಾನ, ವರ್ಣಾಶ್ರಮ ಧರ್ಮ ಬೇರುಸಹಿತ ಕಿತ್ತು ಹಾಕತೀನಿ ಅನ್ನತಾನ. ಎಂಥಾ ಕನಸದು ಎಂಥಾ ಎದಿಗಾರಿಕಿ!" [೩೨] ಎಂದು ಎದೆ ತುಂಬಿ ಪ್ರಶಂಸಿಸುವಲ್ಲಿ ಬಸವಣ್ಣನ ಧ್ಯೇಯ ಹಾಗೂ ಅದರೊಳಗೆ ವೈಯಕ್ತಿಕವಾಗಿ ತನ್ನನ್ನು ತಾನು ತೊಡಗಿಸಿಕೊಂಡಿರುವುದು ಕಂಡುಬರುತ್ತದೆ.

ಶಿವರಾತ್ರಿ ನಾಟಕದಲ್ಲಿ ಬಸವಣ್ಣನು ಬಿಜ್ಜಳನ ರಾಜ್ಯದ ಪದ್ಧತಿಯ ಕುರಿತು ಪ್ರತಿಕ್ರಿಯಿಸುತ್ತ 'ನಿಮ್ಮ ಪದ್ಧತಿಯದೇವರು ಕೆಲವರನ್ನು ಮುಟ್ಟುತ್ತದೆ. ಕೆಲವರನ್ನು ದೂರ ಇಡುತ್ತದೆ. ನನ್ನ ಪ್ರಕಾರ ಅದು ದೇವರಲ್ಲ, ನನ್ನ ದೇವರೇ ಆಗಿದ್ದರೆ ಇಬ್ಬರನ್ನೂ ಮುಟ್ಟಬೇಕು, ಇಲ್ಲಾ ಇಬ್ಬರನ್ನೂ ದೂರ ಇಡಬೇಕು, ಅಂಥ ದೇವರು ನನಗೆ ಬೇಕು. ಇಲ್ಲದಿದ್ದರೆ ಆ ದೇವರೇ ನನಗೆ ಬೇಡ.' ಎಂಬ ವರ್ಣಾಶ್ರಮ ವ್ಯವಸ್ಥೆಗೆ ಪೂರಕವಾಗಿದ್ದ ದೇವರನ್ನೇ ನಿರಾಕರಿಸಿದ ಬಸವಣ್ಣ ಹೊಸ ಆಂದೋಲನದ ಹರಿಕಾರನಾಗುವುದನ್ನು ನೊಡಬಹುದು. ಇದಕ್ಕೇ ಪೂರಕವಾಗಿ 'ನಾನೇಬಿಜ್ಜಳ' ನಾಟಕದಲ್ಲಿ ಪೂಜಾರಿಕಾವನಯ್ಯ ಹೇಳುವ 'ಪುರಾತನ ದರ್ಮ-ಬಂಧನವನ್ನು' ಹರಿದೊಗೆಯಲು ತರುಣರನ್ನು ಹುರಿದುಂಬಿಸುತ್ತಾನೆ' ಎಂಬಲ್ಲಿಯೂ ಬಸವಣ್ಣ ವರ್ಣಾಶ್ರಮ ವ್ಯವಸ್ಥೆಯ ಸಂಕೋಲೆಯಿಂದ ಸಮಾಜವನ್ನು ಕಾಪಾಡಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಿದ್ದು ವ್ಯಕ್ತವಾಗುತ್ತದೆ.

[illegible]

ಕಾರ್ನಾಡರ 'ತಲೆದಂಡ'ದಲ್ಲಿ ಬಸವಣ್ಣನವರು ಭಂಡಾರಕ್ಕೆ ಸೋವಿದೇವನ ಪ್ರವೇಶದ ಬಗ್ಗೆ ಸಮಾಲೋಚಿಸಲು ಬಂದಾಗ ಮೊದಲು ಬೆಟ್ಟಿಯಾಗುವುದು ಗುಡ್ಡೆವ್ವ ಎಂಬ ಮುದುಕಿಯನ್ನು ಆಗ ಅವನಾಡುವ ಮಾತುಗಳು ಯಾವುದೋ ದೊಡ್ಡ ಸಿದ್ಧಾಂತ, ತತ್ವವಲ್ಲ ಅಥವಾ ಅದರಲ್ಲೇ ದೊಡ್ಡ ತತ್ತ್ವ ಅಡಗಿದೆ. 'ಗುಡ್ಡೆವ್ವ ನಿನ್ನ ಸೊಸೆ ಇನ್ನೂ ಸಣ್ಣಾಕಿ, ಅಂದಾಗ ನೀನೂ ಸ್ವಲ್ಪ ಸಂಬಾಳಿಸಿಕೋಬೇಕಬೇ"[೩೩] ಸಾರ್ವಜನಿಕ ಜೀವನದಲ್ಲಿ ದೊಡ್ಡ ವ್ಯಕ್ತಿಯಾದಂತೆ ದೈನಂದಿನ ಜೀವನದಲ್ಲಿಯೂ ಪ್ರೀತಿವಿಶ್ವಾಸದಿಂದ ಕೂಡಿದವನಂತೆ ಚಿತ್ರಿಸಲಾಗಿದೆ. ಗುಡ್ಡೆವ್ವನ ಮನೆಯಲ್ಲಿ ನಡೆದ ಒಂದು ಸಾಮಾನ್ಯ ಸಂಗತಿಗಳೂ ಬಸವಣ್ಣನ ಆಸಕ್ತಿ ವಿಷಯಗಳೇ. ಹೀಗಿದ್ದರೂ ಬಸವಣ್ಣನ ಕ್ರಾಂತಿಗೆ ಸೋಲೊದಗುತ್ತದೆ. "ಕ್ರಾಂತಿಯನ್ನು ಪ್ರಾರಂಭಿಸಿದಷ್ಟು ಸುಲಭವಾಗಿ ಅದನ್ನು ನಿಯಂತ್ರಿಸಲಾಗುವುದಿಲ್ಲ ಎನ್ನುವುದನ್ನು ಬಸವಣ್ಣ ಅರಿತಂತೆ ಗಾಂಧೀಜಿಯವರೂ ಅರಿತಿದ್ದರು. ಬಸವಣ್ಣನ ಪಾತ್ರವನ್ನು ಕಲ್ಪಿಸಿಕೊಳ್ಳುವಾಗ ಗಿರೀಶರೆದುರು ಗಾಂಧೀಜಿ ಯವರಿದ್ದುದು ಸ್ಪಷ್ಟವಾಗಿದೆ[೩೪].

ಹೀಗೆ ಬಸವಣ್ಣನವರ ಪಾತ್ರ ಐದೂ ನಾಟಕಗಳಲ್ಲಿ ಬಹುಮುಖ ವ್ಯಕ್ತಿತ್ವದ ನೆಲೆಯಲ್ಲಿ ಚಿತ್ರಣಗೊಂಡಿದ್ದು, ಇಂದಿನ ಯುಗಕ್ಕೂ ಬಸವಣ್ಣನ ತತ್ತ್ವಾದರ್ಶಗಳು ಪ್ರಸ್ತುವಾಗುವವು. ೧೨ನೇ ಶತಮಾನದ ಒಬ್ಬ ವ್ಯಕ್ತಿಯ ತತ್ತ್ವಾದರ್ಶಗಳು ೨೧ನೇ ಶತಮಾನಕ್ಕೂ ಪ್ರಸ್ತುತವಾಗುತ್ತವೆ ಎಂದರೆ ಆತ ಎಂಥ ವಾಸ್ತವಜ್ಞಾನದ ಪ್ರಾಯೋಗಿಕ ವ್ಯಕ್ತಿ ಎಂಬುದನ್ನು ಮನದಟ್ಟು ಮಾಡುತ್ತದೆ. ೧೨ನೇ ಶತಮಾನದಲ್ಲೇ ಇಂಥದೊಂದು ಸಮಸಮಾಜದ ಕನಸುಕಂಡು ಕ್ರಾಂತಿಯೊಂದಕ್ಕೆ ನಾಂದಿಹಾಡಿದ್ದು ಕರ್ನಾಟಕದ ಹೆಮ್ಮೆಯ ವಿಷಯವಾಗಿದ್ದು, ಇಂದಿಗೂ ಅವರ ಆ ಸಮಸಮಾಜದ ಕನಸು ನನಸಾಗದಿರುವುದು. ಅಂತಹ ನಾಯಕ ಇಂದು ಕಾಣದಿರುವುದು ಅಷ್ಟೇ ವಿಷಾದದ ಸಂಗತಿಯಾಗಿದೆ ಎಂಬುದನ್ನು ಒಪ್ಪಲೇಬೇಕಾದ ಅನಿವಾರ್ಯತೆಯಲ್ಲಿ ನಾವಿದ್ದೇವೆ.

ಕೊನೆಟಿಪ್ಪಣಿಗಳು

೧. ಡಾ. ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಶರಣ ಕಥಾಮೃತ, ಪು. ೧೯.
೨. ಪಿ.ಲಂಕೇಶ್, ಸಂಕ್ರಾಂತಿ, ಪು. ೧೮.
೩. ಅದೆ, ಪು. ೧೧.
೪. ಗಿರೀಶ್ ಕಾರ್ನಾಡ್, ಶಿವರಾತ್ರಿ, ಪು. ೨೩.
೫. ಡಾ. ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಶರಣ ಕಥಾಮೃತ, ಪು. ೩೬.
೬. ಗಿರೀಶ್ ಕಾರ್ನಾಡ್, ಶಿವರಾತ್ರಿ, ಪು. ೨೩.
೭. ಅನಕೃ, ಅನಕೃ ಸಮಗ್ರ ವೀರಶೈವ ಸಾಹಿತ್ಯ, ಪು. ೧೮.
೮. ಪಿ.ಲಂಕೇಶ್, ಸಂಕ್ರಾಂತಿ, ಪು. ೬೧.
೯. ಎಚ್.ಎಸ್.ಶಿವಪ್ರಕಾಶ್, ಮಹಾಚೈತ್ರ, ಪು. ೦೭.
೧೦. ಚಂದ್ರಶೇಖರ ಕಂಬಾರ, ಶಿವರಾತ್ರಿ, ಪು. ೬೨.
೧೧. ಅದೇ, ಪು. ೬೫.
೧೨. ಗಿರೀಶ್ ಕಾರ್ನಾಡ್, ತಲೆದಂಡ, ಪು. ೨೧.
೧೩. ಅದೇ, ಪು. ೨೧.
೧೪. ಅದೇ, ಪು. ೨೨
೧೫. ಡಾ. ರಾಜು ಹೆಗಡೆ, ಗಿರೀಶ್ ಕಾರ್ನಾಡರ ಸಮಗ್ರ ನಾಟಕಗಳ ಸಮೀಕ್ಷೆ, ಪು. ೧೫೬.
೧೬. ಅದೇ, ಪು. ೧೫೭.
೧೭. ಪಿ.ಲಂಕೇಶ್, ಸಂಕ್ರಾಂತಿ, ಪು. ೫೯–೬೦.
೧೮. ಗಿರೀಶ್ ಕಾರ್ನಾಡ್, ತಲೆದಂಡ, ಪು. ೨೩.
೧೯. ಡಾ. ರಾಜು ಹೆಗಡೆ, ಗಿರೀಶ್ ಕಾರ್ನಾಡರ ಸಮಗ್ರ ನಾಟಕಗಳ ಸಮೀಕ್ಷೆ, ಪು. ೧೩೨.
೨೦. ಪಿ.ಲಂಕೇಶ್, ಸಂಕ್ರಾಂತಿ, ಪು. ೬೨.
೨೧. ಗಿರೀಶ್ ಕಾರ್ನಾಡ್, ತಲೆದಂಡ, ಪು. ೨೬.
೨೨. ಪಿ.ಲಂಕೇಶ್, ಸಂಕ್ರಾಂತಿ, ಪು. ೪೭.
೨೩. ಅದೇ, ಪು. ೫೯
೨೪. ಎಚ್.ಎಸ್.ಶಿವಪ್ರಕಾಶ್, ಮಹಾಚೈತ್ರ, ಪು. ೨೧.
೨೫. ಅದೇ, ಪು. ೩೬
೨೬. ಅದೇ, ಪು. ೪೫.
೨೭. ಪಿ.ಲಂಕೇಶ್, ಸಂಕ್ರಾಂತಿ, ಪು. ೪೭.

೨೮. ಎಚ್.ಎಸ್.ಶಿವಪ್ರಕಾಶ್, ಮಹಾಚೈತ್ರ, ಪು. ೪೫.

೨೯. ಗಿರೀಶ್ ಕಾರ್ನಾಡ್, ತಲೆದಂಡ, ಪು. ೪೫.

೩೦. ಅದೇ, ಪು. ೪೬.

೩೧. ಯು.ಆರ್.ಅನಂತಮೂರ್ತಿ, ಸಾಹಿತ್ಯ ವಿಮರ್ಶೆ, ಪು. ೪೯.

೩೨. ಗಿರೀಶ್ ಕಾರ್ನಾಡ್, ತಲೆದಂಡ, ಪು. ೧೬-೧೭.

೩(೩) ಇತರ ಪಾತ್ರಗಳ: ತೌಲನಿಕ ವಿವೇಚನೆ

೧೨ನೇ ಶತಮಾನದಲ್ಲಿ ಬಸವಣ್ಣನ ನೇತೃತ್ವದಲ್ಲಿ ನಡೆದ ಶರಣಚಳವಳಿಯಲ್ಲಿ ಜನರ ಭಾಗವಹಿಸುವಿಕೆ, ಶರಣ ಚಳವಳಿಯ ಬಗೆಗಿನ ಸಾಮಾನ್ಯ ಜನರ ಪರಿಜ್ಞಾನ, ಬಸವಣ್ಣನವರ ಜನಪ್ರಿಯತೆ ಸಹಿಸದವರ ಚಟುವಟಿಕೆ, ಸಾಮಾನ್ಯ ಜನರ ಮೇಲಾದ ಬಸವಣ್ಣನನ ಪ್ರಭಾವ ಇತ್ಯಾದಿಗಳ ಹಿನ್ನೆಲೆಯಲ್ಲಿ ಈ ಐದೂ ನಾಟಕಗಳಲ್ಲಿ ನಾಟಕಕಾರರು ರೂಪಿಸಿರುವ ವಿವಿಧ ಪಾತ್ರಗಳನ್ನು ಅಧ್ಯಯಿಸಬಹುದಾಗಿದೆ.

೩.೩.೧. ಉಷಾ–ರುದ್ರ ಪ್ರೇಮಪ್ರಕರಣ: ಸಂಕ್ರಾಂತಿ ನಾಟಕದಲ್ಲಿ ಲಂಕೇಶರು ಬಸವಣ್ಣ ಮತ್ತು ಬಿಜ್ಜಳ ಪಾತ್ರಗಳ ಹೊರತಾಗಿ ಬೇರೆಲ್ಲಾ ಪಾತ್ರಗಳನ್ನು ತಾವೇ ರೂಪಿಸಿಕೊಂಡು ಶರಣಚಳವಳಿಯ ಪ್ರಭಾವವನ್ನು ತನ್ಮೂಲಕ ಅವತ್ತಿನ ಚಿತ್ರಣವನ್ನು ತಮ್ಮ ಕಾಲಕ್ಕೆ ಹೊಂದಿಸಿ ಚಿತ್ರಿಸಿದ್ದಾರೆ. ಇಲ್ಲಿ ಬರುವ 'ಉಷಾ–ರುದ್ರ'ರ ಪ್ರೇಮಪ್ರಕರಣದಲ್ಲಿ ಈ ಎರಡು ಪಾತ್ರಗಳನ್ನು ಮೂಲದ ಹರಳಯ್ಯ ಮಧುವರಸರ ಮಕ್ಕಳಾದ ಶೀಲವಂತ–ಕಲಾವತಿಯರ ಪಾತ್ರಗಳ ಬದಲಾಗಿ ರೂಪಿಸಿದ್ದಾರೆ. ಆಸ್ಥಾನ ಪಂಡಿತ ಬ್ರಾಹ್ಮಣನ ಮಗಳಾದ ಉಷಾ, ಶೂದ್ರನಾದ ಉಜ್ಜನ ಮಗ ರುದ್ರನನ್ನು ಪ್ರೀತಿಸುತ್ತಿದ್ದುದೇ ಅವರಿಬ್ಬರ ಸಂಭಾಷಣೆಯಿಂದ ಓದುಗರಿಗೆ ಅರ್ಥವಾಗುತ್ತಾ ಹೋಗುತ್ತದೆ. ಉಷಾಳನ್ನು ಆಕೆಯ ಸ್ನೇಹಿತೆಯರಾದ ಉಮಾ, ರಮಾ, ರುದ್ರನ ಹೆಸರು ಹೇಳದೆ ರೇಗಿಸುತ್ತಿರಲು, ಉಷಾ–ಉಮಾಳೊಂದಿಗೆ ಕಿತ್ತಾಡುತ್ತಿರುವಾಗ ರುದ್ರನ ಪ್ರವೇಶವಾಗುತ್ತದೆ. ಉಷಾ ಹೊರತು ಮಿಕ್ಕವರು ಓಡುತ್ತಾರೆ. ಉಷಾ ಹುಸಿಮುನಿಸಿನಿಂದ ಅವನ ಬಳಿ ಬರುತ್ತಾಳೆ. ಆಗ ಅವರಿಬ್ಬರ ನಡುವೆ ನಡೆಯುವ ಸಂಭಾಷಣೆ

"ಉಷಾ :ನಿನ್ನನ್ನೇನು ಕರೆಸಲಿಲ್ಲ ಇಲ್ಲಿಗೆ

ರುದ್ರ: ನೀನು ಕರೆದೆ ಅಂತ ನಾನು ಹೇಳ್ಳಿಲ್ಲ. ಅಲಿ, ಅತ್ತಾ ಕಡೆ ಹುಲ್ಲು ಹತ್ತೇತಿ–ಕೊಡವಲಾ?

ಉಷಾ: ಕೊಡವುತಿಯಾ? ಹ್ಲೂ?

ರುದ್ರ: ಕೈ ಚೊಕ್ಕ ಇಲ್ಲ [ಎಂದು ಹಿಂಜರಿದಾಗ ಉಷಾ ನಗುವಳು]

ರುದ್ರ: ಉಷಾ..... ನಾಳ್ಯಲ್ಲ ನಾಳಿದ್ದು..... ಸಂಕ್ರಾಂತಿ

ಉಷಾ : (ನಕ್ಕು) ಏನದು ಉಸಾ..... ಉಸ್..... ಉಸ್..... ಉಸಾ.....

ರುದ್ರ: ನಿನ್ನ ಹೆಸರು – ಉಸಾ......"[೧]

[illegible]

ಇಲ್ಲಿ ಅವರಿಬ್ಬರ ಪ್ರಣಯಭಾವದ ಒಳನೋಟ. ಪರಸ್ಪರ ಪ್ರೇಮದ ಸಂಗತಿಯನ್ನು ನಾಟಕಕಾರರು ಪ್ರತಿಬಿಂಬಿಸಿದ್ದಾರೆ.

ಆದರೆ ಈ ಪ್ರತಿಲೋಮ ಪ್ರೇಮ ಇದೇ ರೀತಿ ಮುಂದುವರಿಯದೆ ಅತ್ಯಾಚಾರ ಪ್ರಕರಣವಾಗಿ ಬದಲಾಗುವುದು ವರ್ತಮಾನದ ವ್ಯಂಗ್ಯವಾಗಿ ಕಂಡುಬರುತ್ತದೆ.

ಬಿಜ್ಜಳನು ಉಷಾ-ರುದ್ರರ ಪ್ರೇಮ ಪ್ರಕರಣದ ಬಗ್ಗೆ ನ್ಯಾಯ ವಿಚಾರಣೆ ನಡೆಸುವಾಗ, ಬಿಜ್ಜಳ ಉಷಾಳಿಗೆ ತನ್ನ ಸಂಪೂರ್ಣ ರಕ್ಷಣೆ ಇರುವುದಾಗಿ ರುದ್ರನದು ಪ್ರೇಮವೋ? ಬಲಾತ್ಕಾರವೋ? ಎಂದು ಕೇಳಲು ಉಷಾ, 'ಬಲಾತ್ಕಾರ' ಎಂದು ನೇರ ಉತ್ತರ ಕೊಡುತ್ತಾಳೆ. ಅಷ್ಟೇ ನೇರವಾಗಿ ಬಿಜ್ಜಳ ರುದ್ರನ ಮರಣದಂಡನೆ ಘೋಷಿಸುತ್ತಾನೆ. ಆದರೆ ಉಜ್ಜ ವಿರೋಧಿಸುತ್ತಾನೆ. ರುದ್ರ ಕೂಡ ಉಷಾ ಹತ್ತಿರ ಹೋಗಿ ತನ್ನ ತಲೆದಂಡ ಯಾಕೆ ಬೇಕಿತ್ತು? ತನ್ನ ಜೊತೆ ನಗ್ತಾ ಮಾತಾಡುತಿದ್ದ ಬಗ್ಗೆ ತನ್ನ ಮೆಚ್ಚಿ ಪದ ಹೇಳುತ್ತಿದ್ದ ಬಗ್ಗೆ ಕೇಳುತ್ತಾನೆ. ಹಿಗಾಗಿ ಬಿಜ್ಜಳ ಪುನಃ ಉಷಾಳನ್ನು ಪ್ರಶ್ನಿಸಲು, ಅವಳು ಇದೆಲ್ಲಾ ನಿಜ ಎಂದು ಒಪ್ಪಿಕೊಂಡು ಬಲಾತ್ಕಾರ ಹೇಗಾಯಿತೆಂದು ವಿಶ್ಲೇಷಿಸುತ್ತಾಳೆ. 'ನನ್ನ ಬಳಿ ಮಾತಾಡುತ್ತಿದ್ದವ ಬೇರೆ ಆತ ಬಂದು ಮೈಮೇಲೆ ಬಿದ್ದ, ಆತ ನನಗೆ ಬೇಕಾದವನಾಗಿದ್ದ ಆದರೆ ನಾನು ಎದ್ದು ನೋಡಿದಾಗ ಆತ ಇರಲಿಲ್ಲ. ಅಲ್ಲಿದ್ದವನು ಶರಣರುದ್ರ. ಇದು ಅತ್ಯಾಚಾರವಲ್ಲದೆ ಮತ್ತೇನು?'[೨] ಆಕೃತಿ ಒಂದೇ ಆದರು, ಪ್ರಕೃತಿ ಬೇರೆಯಾದ್ದರಿಂದ ಅತ್ಯಾಚಾರ ಎಂದು ವಿಶ್ಲೇಷಿಸಿ ಸಮರ್ಥಿಸುತ್ತಾಳೆ. ಇಲ್ಲಿ 'ಉಷಾ-ರುದ್ರರ ಪ್ರೇಮಪ್ರಕರಣದ ಬಗ್ಗೆ ಬಿಜ್ಜಳ ನಡೆಸುವ ವಿಚಾರಣೆ ನಿಷ್ಪಕ್ಷಪಾತವಾದದ್ದಲ್ಲ.'[೩] ಬಸವಣ್ಣ ರುದ್ರನ ತಲೆದಂಡವನ್ನು ಕೊಲೆ ಎಂದೇ ಪರಿಗಣಿಸುವುದು ಕೂಡ ಇದನ್ನೇ ಪುಷ್ಟೀಕರಿಸುತ್ತದೆ.

೩.೩.೨. ಶೀಲವಂತ-ಕಲಾವತಿ ಪ್ರತಿಲೋಮ ವಿವಾಹ ಪ್ರಕರಣ: ಲಂಕೇಶರು ಹೆಸರನ್ನು ಮಾತ್ರ ಬದಲಾಯಿಸಿ, ಉಷಾ ರುದ್ರ ಎಂಬ ಪಾತ್ರ ರೂಪಿಸಿದ್ದು ಇವತ್ತಿಗೂ ನಡೆಯುತ್ತಿರುವ ಅಂತರ್ಜಾತಿ ಪ್ರೇಮಗಳ ವೈಫಲ್ಯಗಳ ಜೊತೆಗೆ ೧೨ನೇ ಶತಮಾನದ ಪ್ರತಿಲೋಮವಿವಾಹದ ಮೇಲೆ ಬೆಳಕು ಬೀರಿದ್ದಾರೆ. 'ತಲೆದಂಡ' 'ಶಿವರಾತ್ರಿ' ನಾಟಕಗಳಲ್ಲಿ ಶೀಲವಂತ-ಕಲಾವತಿ ಪಾತ್ರಗಳನ್ನು ಹಾಗೇ ಎತ್ತಿಕೊಂಡು ವಿಶ್ಲೇಷಿಸಿದ್ದಾರೆ. ಕಾರ್ನಾಡ್‌ರು ಮತ್ತು ಕಂಬಾರರು. ಮಹಾಚೈತ್ರದಲ್ಲಿ ಶೀಲವಂತ-ಮಾಧವಿ ಎಂದು ಹೆಸರಿಸಲಾಗಿದೆ.

'ತಲೆದಂಡ' ನಾಟಕದಲ್ಲಿ ಬಸವಣ್ಣನ ಅರಿವಿಗೇ ಬಂದಿರದೆ ಇವರಿಬ್ಬರ ವಿವಾಹ ನಿಶ್ಚಯವಾಗಿದ್ದು, ಬಸವಣ್ಣನ ಅನುಮತಿ ಪಡೆಯಲು ಬಂದಾಗ ವಿಷಯ ಕೇಳಿ ಆಶ್ಚರ್ಯಚಕಿತರಾಗುವುದನ್ನು ಕಾಣುತ್ತೇವೆ. ಬಸವಣ್ಣ ಹೇಳುವ "ನಾಳೆ ಅವರು ಮನಿ ಮಾಡಿದಲ್ಲಿ, ಒಲಿ ಹೂಡಿದಲ್ಲಿ ಸನಾತನಿಗಳ ಹಗೆ ಅವರನ್ನು ಬೆಂಬತ್ತಿ ಬರತದ, ಹಾವಿನ ಪಡೆ ಬಂದಂಗ. ಆಗ ಅವರಿಗೆ ಯಾರು ಕಾವಲು"[೪] ಎಂಬ ಮಾತಲ್ಲಿ ಬಸವಣ್ಣನವರು ತನ್ನನ್ನು ನಂಬಿದವರ ಮೇಲಿನ ತನ್ನ ಜವಾಬ್ದಾರಿಯನ್ನು ಪ್ರಕಟಿಸುತ್ತಾರೆ. ಯಾವುದೇ ತತ್ತ್ವಕ್ಕಿಂತ ಹೊಸಬಾಳು ಹೂಡಲಿರುವ ಮದುಮಕ್ಕಳ ಮುಂದಿನ ಜೀವನವೇ ಬಸವಣ್ಣನಿಗೆ ಹೆಚ್ಚು ಮುಖ್ಯ".[೫] ಆಗಿದ್ದು ತಿಳಿಯುತ್ತದೆ. ವಿವಾಹವಾಗಿದ್ದರಿಂದ ಕ್ರಾಂತಿಯಾಗಿ ಶರಣರಾದವರಿಗೆ ರಾಜಭಟರು ಹಿಂಸಿಸಿದರು. ಶಿವರಾತ್ರಿ ನಾಟಕದಲ್ಲಿನ ಕಾಶವ್ವನ "ಅಯ್ ಶಿವನ ಶರಣರಿಗ ಏನ್ ಕಾಲ ಬಂತೋ ಶಿವನ್ನ! ಆ ನನ ಹಾಟ್ಯಾ ಬಿಜ್ಜಳ ರಾಜಾ ಹೂಳವರ ಧಿಕ್ಕಿಲ್ಲದಾಂಗ ಸಾಯಲಿ ನೋಡಾ!"[೬] ಎಂಬ ಮಾತಲ್ಲಿ ಶರಣರ ಮೇಲೆ ನಡೆಸಿದ ದಬ್ಬಾಳಿಕೆಯಿಂದ ಬೇಸತ್ತು ನುಡಿದಿರುವಂತಿದೆ. "ತಲೆದಂಡ ನಾಟಕದಲ್ಲಿ ಬಸವಣ್ಣನು ಬಿಜ್ಜಳನ ರಕ್ಷಣೆ ಪಡೆದೇ ವಿವಾಹ ನಡೆಸುವಲ್ಲಿ ಯಶಸ್ವಿಯಾಗುತ್ತಾರೆ. ಕೊನೆಗೆ ಕ್ರಾಂತಿಯಾಗಿ ಬಸವಣ್ಣ ನಿರ್ಗಮಿಸುತ್ತಾನೆ. ಬಿಜ್ಜಳನ ತಲೆದಂಡವಾಗುತ್ತದೆ. 'ಶಿವರಾತ್ರಿ ನಾಟಕ' ಪ್ರಾರಂಭವಾಗುವುದೇ ಪ್ರತಿಲೋಮ ವಿವಾಹವಾದ ಮದುಮಕ್ಕಳ ತಂದೆ ಹರಳಯ್ಯ, ಮಧುವರಸರಿಗೆ ಎಳೆ ಹೂಟೆ ಹೊರಿಸಿ ಗಲ್ಲಿಗೇರಿಸಿದ ನಂತರ ನಗರದಲ್ಲಿ ಶರಣರ ಬೇಟೆ ನಡೆಯುತ್ತದೆ ಮಹಾಚೈತ್ರ ನಾಟಕದಲ್ಲಿ ಈ ಪ್ರತಿಲೋಮ ವಿವಾಹದ ಪರಿಣಾಮವನ್ನು ಕೊಡುತ್ತಾ ಚಂದ್ರಶೆಟ್ಟಿ ಪಾತ್ರದ ಮೂಲಕ ಚಿತ್ರಣ ಕೊಡುತ್ತಾರೆ. "ಇಡೀ ನಗರಾನೇ ರಕ್ತದಲ್ಲಿ ಅದ್ದಿ ಹೋಗೋ ಹಾಗಿತ್ತು. ಸಿಟ್ಟಿಗೆದ್ದ ಮಠ, ಅಗ್ರಹಾರದ ಕಡೆಯೋರು ಕೆಳಜಾತಿ ಕೇರಿಯವರ ಮೇಲೆ ಹಲ್ಲೆ ಮಾಡಿದರು, ಆಯಗಾರರೂ ತಿರುಗಿಬಿದ್ದರು. ತ್ರಿಪುರಾಂತಕ ದೇವಾಲಯದ ತಾಳೆಯೋಲೆಗಳಿಗೆ ಬೆಂಕಿಬಿತ್ತು"[೭] ಇಲ್ಲಿ ರಕ್ತದೋಕುಳಿಯಾಗಿದ್ದನ್ನು ಕಾಣುತ್ತೇವೆ. 'ಶಿವರಾತ್ರಿ' ನಾಟಕದಲ್ಲಿ ಬಿಜ್ಜಳ-ಬಸವಣ್ಣ ವೇಶ್ಯೆಯ ಮನೆಯಲ್ಲಿ ಮುಖಾಮುಖಿಯಾಗುತ್ತಾರೆ. ಇಷ್ಟೆಲ್ಲಾ ಕ್ರಾಂತಿಯಾದರೂ ಮದುಮಕ್ಕಳ ಭವಿಷ್ಯದ ಕಾಳಜಿಯನ್ನು 'ತಲೆದಂಡ'ದಲ್ಲಿ ಪ್ರಕಟಿಸಿದ್ದ ಬಸವಣ್ಣ, ಇಲ್ಲಿ ಬಿಜ್ಜಳನಲ್ಲಿ 'ಶೀಲವಂತ'ನಿಗೆ ರಕ್ಷಣೆ ಕೊಡಿಸುವಂತೆ ಮೊರೆಯಿಡುವುದು ಅರ್ಥಪೂರ್ಣವಾಗಿದೆ. ಆದರೆ ಈ ದೃಶ್ಯದಲ್ಲೇ ಶೀಲವಂತ ಅಡಗಿಕೊಂಡಿದ್ದ

[illegible]

ಗುಡಿಸಲಿಗೆ ಬೆಂಕಿ ಇಟ್ಟ ಪರಿಣಾಮ ಆತ ಸತ್ತ ವಿಚಾರ ಬರುವ ಮೂಲಕ ಶರಣಚಳವಳಿಯ ಸಂಪೂರ್ಣ ಸೋಲು ಬಿಂಬಿತವಾಗಿದೆ.

ಹೀಗೆ ಈ ಪ್ರಕರಣದಲ್ಲಿ ಶೀಲವಂತ, ಕಲಾವತಿ (ಮಾಧವಿ) ಮಧುವರಸ, ಹರಳಯ್ಯ ಪಾತ್ರಗಳನ್ನು ರೂಪಿಸಿದ್ದಾರೆ.

೩.೩.೩. ಸಾಮಾನ್ಯ ಜನರ ಮೇಲೆ ಶರಣ ಚಳವಳಿಯ ಪ್ರಭಾವ

'ಸಂಕ್ರಾಂತಿ' ನಾಟಕದಲ್ಲಿ ಬರುವ 'ಉಜ್ಜ', 'ಕೆಂಚ'ನ ಪಾತ್ರಗಳ ಮೂಲಕ ಬಸವಣ್ಣನವರ ಚಳವಳಿಯ ನಿಬಂಧನೆಗಳು ಸಾಮಾನ್ಯರ ಬದುಕಿನಲ್ಲಿ ಅನ್ವಯಿಸಿಕೊಳ್ಳಲ್ಪಡಲು ಹೇಗೆ ಅಸಾಧ್ಯವೆಂಬುದನ್ನು ಬಿಂಬಿಸಿದ್ದಾರೆ ನಾಟಕಕಾರರು. 'ಉಜ್ಜ' ಹೇಳುವ "ಹೆಂಡ ಬಿಡು, ಕಂಡ ಬಿಡು, ಹೆಂಗಸು ಬಿಡು– ಏನೇನಲಾ ಬಿಡೋದು? ಛ್ಚ?"[೮] ಹೀಗೆ ಈ ಹೆಂಡ ಕಂಡವೇ ಜೀವನವಾಗಿರುವ ಅವರು ಬಿಡಲಾರದ ಸ್ಥಿತಿಯಲ್ಲಿದ್ದು ಒಂದು ರೀತಿಯಲ್ಲಿ ಬಸವಣ್ಣನ ಬಲವಂತಕ್ಕೆ ಇಕ್ಕಟ್ಟಿನಲ್ಲಿ ಸಿಲುಕಿದಂತಾಗಿದ್ದಾರೆ. "ಉಜ್ಜನ ಸಂಕಟ ನಾಟಕದಲ್ಲೊಂದು ಸಮುದಾಯದ ತಲ್ಲಣಗಳನ್ನು ದಾಖಲಿಸುತ್ತದೆ"[೯] ಮುಂದೆ ಬಸವಣ್ಣ ಉಜ್ಜನಿಂದ ರುದ್ರನ ಮೂಲಕ ಭಾಷೆ ಕೊಡುವಂತೆ ಹೇಳಿ ರುದ್ರನಿಗೆ ಸೂಚಿಸುತ್ತಾನೆ.

ರುದ್ರ : ನಾನು ಉಜ್ಜ

ಉಜ್ಜ : ನಾನು ಉಜ್ಜ

ರುದ್ರ : ನಾನು ಇವತ್ತಿನಿಂದ ಹೊಲೆಯನಲ್ಲ

ಉಜ್ಜ : ನಾನು ಇವತ್ತಿನಿಂದ ಹೊಲೆಯನಲ್ಲ

ರುದ್ರ : ನಾ ಶರಣ ನಾ ಭಕ್ತ

ಉಜ್ಜ : ನಾ ಶರಣ ನಾ ಭಕ್ತ

ರುದ್ರ : ನಾ ಕೊಲ್ಲಾಕಿಲ್ಲ ಕುಡಿಯಾಕಿಲ್ಲ, ತಿನ್ನಾಕ್ಕಿಲ್ಲ

ಉಜ್ಜ : ಮೌನ"[೧೦] ಕೊನೆಯ ಮಾತನ್ನು ರುದ್ರ ಎಷ್ಟು ಬಾರಿ ಪುನರಾವರ್ತಿಸಿದರೂ ಉಜ್ಜ ತುಟಿಬಿಚ್ಚದೆ ತನ್ನ ಮೌನ ತಿರಸ್ಕಾರವನ್ನು ಸೂಚಿಸುತ್ತಾನೆ. ಇಲ್ಲ ಆಗುವುದಿಲ್ಲ ಎಂದು ಹೇಳಲಾಗದ, ಅನುಸರಿಸಲೂ ಆಗದ ಇಕ್ಕಟ್ಟಿನಲ್ಲಿ ಸಿಲುಕಿ

ಸಾಮಾನ್ಯ ಜನರು ಬಸವಭಕ್ತಿಯಿಂದ ಬಲವಂತಕ್ಕೊಳಗಾಗುವುದನ್ನು ಇಲ್ಲಿ ನಾಟಕಕಾರರು ಪರಿಣಮಕಾರಿಯಾಗಿ ಬಿಂಬಿಸಿದ್ದಾರೆ.

ಆದರೆ ಕೆಂಚ ಮಾತ್ರ ಸಂಪೂರ್ಣ ಕುಡಿದು ತನ್ನ ಮನಸ್ಸಿಲ್ಲಿರುವುದನ್ನು ಹೊರಹಾಕುತ್ತಾನೆ. "ಬಸಣ್ಣ ಬರಲಿ ಕಸಣ್ಣ ಬರಲಿ, ನಾ ಮಾತ್ರ ಬಿಡಾಕಿಲ್ಲ" ಹಂದಿ ಬಂದು ಗದ್ದೆ ಹೊಗತು ಅಂತ ಇಟ್ಕೊ-ಏನಪ್ಪಾ ಮಾಡ್ತಿ ಆವಾಗ? ಬಂದು ಗಢರ್ ಅಂದ್ರ ಏನು ಮಾಡ್ತಿ ಅಂತೇನಿ? ಎಲ್ಲಾ ಹಂದ್ಯಪ್ಪ ಬಸವಣ್ಣ ಕೊಲಬ್ಯಾಡ ಅಂದಾನ ಅಂತೀಯ? 'ನನ್ನ ಬೇಕಾದ್ರೆ ಕೊಲ್ಲು' ಅಂತೀಯಾ? [೧೧] ಇಲ್ಲಿ ನಾಟಕಕಾರರು ಕೆಂಚನ ಪಾತ್ರದ ಮೂಲಕ ಶರಣತತ್ತ್ವದ ಅನುಸರಣೆ ಸಾಮಾನ್ಯರಿಗೆ ಎಷ್ಟು ಅಸಾಧ್ಯವಾಗಿತ್ತು ಎಂಬುದನ್ನು ಆತ ಕುಡಿದಾಗ ಹೇಳಿಸುವುದು ಅರ್ಥಪೂರ್ಣವಾಗಿದೆ.

'ಶಿವರಾತ್ರಿ' ನಾಟಕದಲ್ಲಿ ಬರುವ ದಾಮೋದರ' ಕಾಶವ್ವ, ಮುದುಕಪ್ಪ, ಕಲ್ಲಪ್ಪ, ಕಳ್ಳಚಿಕ್ಕಯ್ಯ, ವೇಶ್ಯೆಯರಾದ ಸಾವಂತ್ರಿ, ಕಾಮಾಕ್ಷಿ ಈ ಪಾತ್ರಗಳ ಮೂಲಕ ಜನಸಾಮಾನ್ಯರ ಮೇಲಾವ ಶರಣಚಳವಳಿಯ ಪ್ರಭಾವವನ್ನು ಅಧ್ಯಯಿಸಬಹುದಾಗಿದೆ. ಶರಣಚಳವಳಿಯ 'ಇಷ್ಟಲಿಂಗ' 'ಸ್ಥಾವರ' 'ಜಂಗಮ' 'ಮಹಾಮನೆ' ಇತ್ಯಾದಿ ಪರಿಕಲ್ಪನೆಗಳ ಪರಿಪೂರ್ಣ ಪರಿಜ್ಞಾನವನ್ನು ಬಸವಣ್ಣ ಹಾಗೂ ಅವರು ಹುಟ್ಟುಹಾಕಿದ ಚಳವಳಿಯ ಬಗ್ಗೆ ಗೌರವವಿದ್ದ ಅಂದಿನ ಜನಸಾಮಾನ್ಯರು ಹೊಂದಿರಲಿಲ್ಲ ಎಂಬುದು ಈ ನಾಟಕದಲ್ಲಿ ಬಿಂಬಿತವಾಗಿದೆ. ಒಂದು ಸಂದರ್ಭದಲ್ಲಿ ಕಲ್ಲಪ್ಪ ಎಂಬುವವನು ಮಹಾಮನೆಯನ್ನು ತಾನು ತಿಳಿದಂತೆ ವರ್ಣಿಸುತ್ತಾ, "ಅಣ್ಣಾವರು ಎಲ್ಲರಿಗೂ ಒಂದೊಂದು ಆತ್ಮ ಕೊಡತಾರಂತಲ್ಲ. ಹೌದೇನು"[೧೨] ಎಂದು ಕೇಳುತ್ತಾನೆ. ಅಲ್ಲಿಯೇ ಇದ್ದ ಕಾಶವ್ವ "ಪುಕ್ಕಟ ಕೊಡ್ತಾರವಾ ಅದಕ್ಕೆ ಲಿಂಗಪ್ಪ ಅಂತಾರ"[೧೩] ಎಂದು ಉತ್ತರಿಸುತ್ತಾಳೆ. ಆಗ ಕಲ್ಲಪ್ಪ "ಪುಕ್ಕಟ ಅಂದರ ಒಂದೆರಡು ತರಬಾರದೇನವಾ ಅಕ್ಕಾ" ಎಂದು ಉದ್ಗರಿಸುತ್ತಾನೆ. ಅಂದರೆ ಇಲ್ಲಿ ಸಾಮಾನ್ಯಜನರಾದ ಕಲ್ಲಪ್ಪ, ಕಾಶವ್ವನಂಥವರಿಗೆ ಬಸವಣ್ಣನವರ ಬಗ್ಗೆ ಅತೀವ ಅಭಿಮಾನ, ಅವನ ತತ್ತ್ವಗಳ ಬಗ್ಗೆ ಮಹತ್ತರವಾದ ಕುತೂಹಲವಿದೆ. ಆದರೆ ಇಷ್ಟಲಿಂಗದ ಪರಿಕಲ್ಪನೆಯಾಗಲಿ ಅದರ ಸಾಂಕೇತಿಕತೆಯಾಗಲಿ ಗೊತ್ತಿರಲಿಲ್ಲ. ಆದರೆ ಬಸವಣ್ಣನವರ ಕೆಲವು ಮೂಲಭೂತ ನೈತಿಕ ಮೌಲ್ಯಗಳು – ಕಳಬೇಡ ಕೊಲಬೇಡ, ಹುಸಿಯ ನುಡಿಯಲುಬೇಡಾ...." ಇತ್ಯಾದಿ ಜನಮಾನಸದ ಬದುಕಿನಲ್ಲಿ ಮೈಗೂಡಿಸಿಕೊಂಡಿದ್ದನ್ನು ಅರಮನೆಯ ರತ್ನದ ಸರದ ಅಪಹರಣ ಪ್ರಕರಣ ದರ್ಶಿಸುತ್ತದೆ. ಅರಮನೆಯಲ್ಲಿನ ಅಮೂಲ್ಯವಾದ ರತ್ನದ ಸರವನ್ನು ಅರಮನೆಯ ಪಂಡಿತ ಹರಿಹರನ ಮಗ 'ಧಾಮೋದರ' ತನ್ನ ತಂದೆಯ

[illegible]

ಪ್ರಚೋದನೆಯಿಂದ ಕದ್ದು ತಮ್ಮ ಮನೆಯಲ್ಲಿ ಬಚ್ಚಿಟ್ಟಾಗ, ಕಾಶವ್ವ – ಮುದುಕಪ್ಪ ಇವರಿಗೆ ಅದರಿಂದ ಸತ್ತ ಹೆಗ್ಗಣದ ನಾತ ಹೊಡೆಯುತ್ತದೆ. ಮುದುಕಪ್ಪ ಆ ಸರವನ್ನು ಮನೆಯೊಳಗಿಂದ ತಂದು 'ಇಲ್ಲಿದೆ ನೋಡು ಹೆಗ್ಗಣ' ಎಂದು ಎಸೆಯಲು ಹೋದಾಗ ದಾಮೋದರ ಬರುತ್ತಾನೆ. ಕೊತವಾಲನ ಮ್ಯಾಲ ಬಿಸಾಕೋಣ ಅಂತಿದ್ದೆ. ಸದ್ಯ ನೀನೇ ಬಂದೆ ತಗೊಂಡ್ಹೋಗು ಎಂದು ಅವನ ಮೇಲೆ ಚೆಲ್ಲುತ್ತಾನೆ. ಇದರ ಬೆಲೆಗೊತ್ತಿಲ್ಲದೆ ಹೀಗೆ ಮಾಡಿದರೆಂದು ಎಣಿಸಿದ ದಾಮೋದರ 'ಇದರ ಕಿಮ್ಮತ್ತು ಎಷ್ಟು ಗೊತ್ತೈತೇನು?" ಎಂದು ಕೇಳಲು, ಕಾಶವ್ವ ಕೊಡುವ ಉತ್ತರ: "ಎಷ್ಟಾದರೂ ಇರಲೋ ಎಪ್ಪಾ ನಮಗ ಅದು ಬ್ಯಾಡ, ನಾವದನ್ನೇನೂ ಕಾಯಕಮಾಡಿ ಗಳಿಸಿಲ್ಲ. ನಮಗದರ ಗರ್ಜೂ ಇಲ್ಲ" [೧೪] ಇಲ್ಲಿ ಶರಣಚಳವಳಿಯ 'ಕಾಯಕತತ್ತ್ವ', ಜನಸಾಮಾನ್ಯರ ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿದ್ದುದನ್ನು ಸಮರ್ಥವಾಗಿ ಬಿಂಬಿಸಿದ್ದಾರೆ. ಈ ಸರವನ್ನು ದಾಮೋದರನಿಂದ ಪಡೆದ ಮುಗ್ದಸಂಗಯ್ಯ ಸಾವಂತ್ರಿಗೆ ಕೊಟ್ಟಾಗ ಅವಳು ಅದನ್ನು ಕಾಮಾಕ್ಷಿಗೆ ಕೊಡುತ್ತಾಳೆ: ಅವಳು "ಈ ಸರದ ಬೆಲೆ ನನ್ನ ಬೆಲೆಗಿಂತ ಹೆಚ್ಚು ನನಗಿದು ಬೇಡ"[೧೫] ಎಂದು ಅದರ ಕಿಮ್ಮತ್ತು ಹೆಚ್ಚಾಯಿತೆಂದು ಅವಳು ಸಾವಂತ್ರಿಗೇ ಹಿಂದಿರುಗಿಸುತ್ತಾಳೆ. ಅವಳು ತನಗದು ಕಾಯಕದಿಂದ ಲಭಿಸಿದ್ದಲ್ಲವೆಂದು ಅದನ್ನು ಒಂದು ಮೂಲೆಯಲ್ಲಿ ಬಿಸಾಡುತ್ತಾಳೆ. ಕಾಮಾಕ್ಷಿಗಾಗಿ ಬಂದ ಬಿಜ್ಜಳ ಮಹಾರಾಜ ವಾದಮಾಡಿ ಸೋಲಿಸಲಾಗದ ಸಾವಂತ್ರಿಗೆ "ಸಂಗಯ್ಯ ಕಾಮಾಕ್ಷಿಗೆ ಕೊಟ್ಟ ಬೆಲೆ ಎಷ್ಟೆಂದು ಹೇಳು, ಅದಕ್ಕೆ ತೆರಿಗೆ ನಿರ್ಧರಿಸಬೇಕು"[೧೬] ಎಂದು ಕೇಳಲು ದ್ವಾರಪಾಲಕನನ್ನು ಕರೆದು "ಪಾದರಕ್ಷೆ ಇಡುವ ಕೆಳಗಿನ ಮಾಡದಲ್ಲಿ ಇಟ್ಟೆನಲ್ಲಾ ಆ ಸರ ತಗೊಂಬಾ" ಎಂದು ತರಿಸಿಕೊಡುತ್ತಾಳೆ. 'ನಮ್ಮನ್ನು ಮೀರಿದ್ದು ನಮಗದು ಕಲ್ಲು' ಎಂಬ ಒಂದು ಸಿದ್ಧಾಂತವನ್ನು ಕೊಡುತ್ತಾಳೆ. ಇಲ್ಲಿ ಕಾಶವ್ವ–ಮುದುಕಪ್ಪ ಈ ರತ್ನದ ಸರವನ್ನು ತಮ್ಮ ಕಾಯಕದಿಂದ ಬಂದದ್ದಲ್ಲವೆಂದು ತಿರಸ್ಕರಿಸವುದು, ವೇಶ್ಯೆಯರಾದ ಸಾವಂತ್ರಿ, ಕಾಮಾಕ್ಷಿಯರು ತಮ್ಮ ಬೆಲೆಗಿಂತ ಅಧಿಕ ಬೆಲೆಯದ್ದೆಂದು ತಿರಸ್ಕರಿಸುವುದು, ಶರಣಚಳುವಳಿಯ 'ಕಾಯಕನಿಷ್ಠೆ' ಮತ್ತು 'ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ' ತತ್ತ್ವಗಳು ಜನಸಾಮಾನ್ಯರಿಂದ ವೇಶ್ಯೆಯರವರೆಗೆ ಹಾಸುಹೊಕ್ಕಾಗಿದ್ದುದನ್ನು ಕಂಬಾರರು ಪ್ರತಿಬಿಂಬಿಸಿದ್ದಾರೆ.

೩.೩.೩.೧ ಕಳ್ಳಚಿಕ್ಕಣ್ಣ ಶರಣನಾದ ಪ್ರಸಂಗ

ಇದೇ ರತ್ನದ ಸರದ ಅಪಹರಣ ಪ್ರಕರಣದಲ್ಲೇ ಕಳ್ಳಚಿಕ್ಕಣ್ಣ ಶರಣತತ್ತ್ವದ ಪ್ರಭಾವದಿಂದ ಶರಣನಾದ ಕತೆಯೂ ಬರುತ್ತದೆ. ಸರವನ್ನು ಕದ್ದ ನಂತರ

'ಹರಿಹರ'ನೊಂದಿಗೆ ಮಗ 'ದಾಮೋದರ' ಹೆದರಿಕೊಂಡು ದಲಿತರ ಕೇರಿಗೆ ಬಂದುಬಿಡುತ್ತಾರೆ. ಅಲ್ಲಿಗೂ ರಾಜಭಟರು ಬಂದದ್ದರಿಂದ ಅಲ್ಲೇ ಕುಳಿತಿದ್ದ ಚಿಕ್ಕಣ್ಣನ ಬಳಿ ಹೋಗಿ ಶರಣರಂತೆ ನಾಟಕವಾಡಿ ತಪ್ಪಿಸಿಕೊಳ್ಳುತ್ತಾರೆ. ನಂತರ ಆತನ ಬಗೆಗೆ ವಿಚಾರಿಸಲು ತಾನು 'ಕಳ್ಳಚಿಕ್ಕಯ್ಯ' ಎಂದು ತನ್ನನ್ನು ಪರಿಚಯಿಸಿಕೊಳ್ಳುತ್ತಾನೆ. ತಾನು ಶರಣನಾದ ಬಗ್ಗೆ ಹೇಳುತ್ತಾನೆ. "ನಾನು ಕಾಶ್ಮೀರದವ ಬಸವಣ್ಣನವರನ್ನ ಕೊಲೆ ಮಾಡಬೇಕಂತ ಅಷ್ಟು ದೂರದಿಂದ ಬಂದೆ, ಅಣ್ಣನವರು ಎದುರು ಬಂದಾಗ, ಸಮಯ ಸಂದರ್ಭನೋಡಿ ಕೊಲ್ಲಬೇಕಂತ ಕತ್ತಿಗೊಂದು ಕಲ್ಲುಕಟ್ಟಿಗೊಂಡು ಮಹಾಮನೆಯಲ್ಲಿ ಊಟಕ್ಕೆ ಕುಂತೆ, ಅವರ ಪದ್ಧತಿ ಪ್ರಕಾರ ಊಟಕ್ಕೆ ಮುಂಚೆ ಎಲ್ಲಾರು ಲಿಂಗಪೂಜೆ ಮಾಡಿಕೋಬೇಕು. ನಾನು ನನ್ನ ಕಲ್ಲ ತಗದು ಪೂಜೆ ಮಾಡಬೇಕು ಇಲ್ಲದಿದ್ದರ ಹೊರಗ ಹೋಗಬೇಕು..... ನಾನೂ ಭಂಡತನದಿಂದ ಕತ್ತಿನಾಗಿನ ಕಲ್ಲ ತೆಗೆದು ಅಂಗೈಯಾಗಿಟ್ಟುಕೊಂಡೆ ನೋಡು: ಮಾಲು ಸಮೇತ ಕಳ್ಳ ಸಿಕ್ಕಿ ಬಿದ್ದೆ! ಅಕ್ಕಪಕ್ಕ ಶರಣರು ಎದ್ದು ನಿಂತು ಗಲಾಟೆ ಎಬ್ಬಿಸಿದರು.... ಅಷ್ಟರಾಗ ದೇವರು ಬಂದಾಂಗ ಅಣ್ಣಾವರು ಬಂದು ಸಾಕ್ಷಾತ್ ನಿಜವಾದ ಲಿಂಗ ಕಟ್ಟಿಕೊಂಡರೂ ನಮಗದು ಕಲ್ಲು ಅನ್ನಸ್ತದೆ ನೀವು ಕಟ್ಟಿಕೊಂಡ ಕಲ್ಲಲ್ಲೇ ಲಿಂಗ ಕಾಣ್ತೇರಿ ಅಂದರೆ ಆಹಾ ಎಂಥಾ ಭಕ್ತರು! ಏನು ಭಕ್ತಿ!" ಅಂತ ಅಂದವರ ಉದ್ದಕ ನನ್ನ ಮುಂದ ಉದ್ದಂಡ ಬೀಳೋದೆ? ನಾ ಅವರನ್ನ ಕೊಲ್ಲೋದಿರಲಿ ಅವರ ನನ್ನೊಳಗಿನ ಕಳ್ಳನನ್ನು ಕೊಂದ ಹಾಕಿದರು" [೧೭]

ಹೀಗೆ ಒಬ್ಬ ಕಳ್ಳನನ್ನು ಕೂಡ ನಿಷ್ಕಲ್ಮಷವಾದ ಪ್ರೀತಿ, ಸ್ನೇಹದಿಂದ ಬಸವಣ್ಣ ಹೇಗೆ ಬದಲಾಯಿಸಬಹುದೆಂಬುದನ್ನು ತೋರಿದರು ಇದನ್ನು ಚಿಕ್ಕಣ್ಣನಂಥ ಪಾತ್ರಗಳ ಮೂಲಕ ನಾಟಕಕಾರರು ನಿರೂಪಿಸಿದ್ದಾರೆ. ದಾಮೋದರ ಕೂಡ ಈ ರೀತಿಯ ಬಸವ ಪ್ರಭಾವಿತರಿಂದ ಪ್ರಭಾವಿತನಾಗಿ ತಾನು ಚಂದ್ರಸರವನ್ನು ಕದ್ದ ವಿಷಯವನ್ನು ಬಿಜ್ಜಳನ ಹತ್ತಿರ ನೇರವಾಗಿ ಒಪ್ಪಿಕೊಂಡು, ಬಸವಣ್ಣನ ನಡೆಯನ್ನೂ ಸಮರ್ಥಿಸುತ್ತಾನೆ. ಬಸವಣ್ಣ ದಲಿತರು ಮತ್ತು ಬಡವರಿಗೆ ಸೌಲಭ್ಯಗಳನ್ನು ಕಲ್ಪಿಸಿದಾಗ ಬಿಜ್ಜಳ ತುಂಬಾ ಜನಪ್ರಿಯನಾಗಿದ್ದುದನ್ನೂ, ಆದರೆ ಈಗ ಚಾಡಿ ಮಾತು ನಂಬಿದುದರಿಂದ ಕಲ್ಯಾಣ ನರಕವಾಯಿತೆಂದೂ, ತರುಣ ಬಿಜ್ಜಳನ ಭೂತದಂತಾಗಿದ್ದೀರೆಂದೂ ವಿಶ್ಲೇಷಿಸುತ್ತಾನೆ. ಬಿಜ್ಜಳನ ಆಕ್ರೋಶಕ್ಕೆ ಬಲಿಯಾಗುತ್ತಾನೆ. ಅರಮನೆಯ ಪಂಡಿತರ ಮಗನಾದರೂ ಅವನಲ್ಲಿದ್ದ ನಿಷ್ಕಲ್ಮಷ ಮನಸ್ಸಿನಿಂದ ಬಸವಣ್ಣನನ್ನು ಆದರ್ಶವಾಗಿ ಕಾಣಲು ಸಾಧ್ಯವಾಯ್ತು. ಶರಣತತ್ತ್ವಗಳು ಅವನಲ್ಲಿ ಅಷ್ಟು ಪ್ರಭಾವ ಬೀರುವ ಶಕ್ತಿ ಹೊಂದಿದ್ದವು.

೩.೩.೪. ಬಿಜ್ಜಳನ ಅಂತ್ಯ ಪ್ರಕರಣ:

ಬಿಜ್ಜಳನನ್ನು ಅವನ ಸಹಚರರೇ ಕೊಂದರೆಂಬುದು ಇತಿಹಾಸ. ಇನ್ನೂ ಕೆಲವರು ಇಂದಿರಾಗಾಂಧಿಯ ಸಾವಿಗೆ ಬಿಜ್ಜಳನ ಸಾವನ್ನು ಸಮೀಕ್ಷಿಸಿರುವುದು ಈ ನಿಟ್ಟಿನಲ್ಲಿ ಸರಿಯೆನ್ನಬಹುದು. ಶರಣಕ್ರಾಂತಿಯ ವಿರೋಧದ ಕಾರಣವಾಗಿಯೇ ಬಿಜ್ಜಳನ ಅಂತ್ಯವಾಯಿತೆಂದು ಹೇಳಲಾಗುವುದಿಲ್ಲ. ಅದೊಂದು ನೆಪವಾಯಿತೆಂಬುದು ಅಧ್ಯಯನದಿಂದ ತಿಳಿದುಬರುತ್ತದೆ. "ಬಿಜ್ಜಳನನ್ನು ಪದಚ್ಯುತಿಗೊಳಿಸುವ ಪಿತೂರಿ ನಡೆದಿತ್ತು; ಬಳ್ಳಿಗಾವೆಯಲ್ಲಿದ್ದ 'ಕಸಪಯ್ಯ ದಂಡನಾಯಕ ಮತ್ತು ಬಿಜ್ಜಳನ ತಮ್ಮ ಮಲ್ಲುಗಿ, ನೇತೃತ್ವದಲ್ಲಿ".[೧೮] ತಾನೇ ಬಿಜ್ಜಳನಾಗಿ ವರ್ತಿಸುವ ಸುರೇಶದೇಸಾಯಿ ಕಸಪಯ್ಯ ದಂಡನಾಯಕ ಪಾತ್ರದ ಮೇಲೆ ಆಕ್ರೋಶಿತನಾಗುವುದನ್ನು 'ನಾನೇ ಬಿಜ್ಜಳ' ನಾಟಕದಲ್ಲಿ ನಿರೂಪಿಸಿರುವುದು; 'ಮಹಾಚೈತ್ರ' ನಾಟಕದಲ್ಲಿ ಸೋವಿದೇವ ಹೇಳುವ "ಕರ್ಣದೇವ, ಕಸಪಯ್ಯನವರ ದುರುಳತನವನ್ನು ನೀವು ಅರ್ಥಮಾಡಿಕೊಂಡಿಲ್ಲ" [೧೯] ಎಂಬುವುದರಲ್ಲಿ ಈ ಪಿತೂರಿ ಸ್ಪಷ್ಟವಾಗುತ್ತದೆ. ಇಲ್ಲಿ ಬಿಜ್ಜಳನ ತಮ್ಮ 'ಮಲ್ಲುಗಿ'ಗೆ ಬದಲಾಗಿ 'ಕರ್ಣದೇವ' ಹೆಸರನ್ನು ಬಳಸಲಾಗಿದೆ. ಈ ಹಿಂದೆಯೂ ಇದೇ ನಾಟಕದಲ್ಲಿ ಸೋವಿದೇವನೊಂದಿಗೆ ಪ್ರತಿಸ್ಪರ್ಧಿಯಾಗಿ ಬಿಜ್ಜಳನಲ್ಲಿಗೆ ಬಂದ ಈತ (ಕರ್ಣದೇವ) ತಾನೇ ಉತ್ತರಾಧಿಕಾರಿ ಎಂದು ವಾದಿಸುತ್ತಾನೆ. ಬಿಜ್ಜಳ ಕರ್ಣದೇವನಿಗೆ ಬನವಾಸಿಯ ಮಂಡಲಾಧಿಪತಿಯನ್ನಾಗಿ ನೇಮಿಸಿ ಸಧ್ಯದ ಸಮಸ್ಯೆಯನ್ನು ಬಗೆಹರಿಸಕೊಂಡಿರುತ್ತಾನೆ. ಮುಂದೆ ಮಗನಾದ ಸೋವಿದೇವ ಎಷ್ಟೇ ಎಚ್ಚರಿಸಿದರೂ ಬಿಜ್ಜಳ ಎಚ್ಚತ್ತುಕೊಳ್ಳುವುದಿಲ್ಲ. ಕೊನೆಗೆ ಕರ್ಣದೇವ, ಕಸಪಯ್ಯರ ಆಕ್ರಮಣ ಸೋವಿದೇವನಿಗೆ ಬೇಹುಗಾರನಿಂದ ತಿಳಿಯುತ್ತದೆ. "ಯುವರಾಜರೇ, ಕರ್ಣದೇವ, ಕಸಪಯ್ಯದಿರು ಒಂದು ಮಲೆಪರ ಸೇನೆ ಜೊತೆ ಈ ಕಡೆ ಬರುತ್ತಿದ್ದಾರೆ."[೨೦] ಬಿಜ್ಜಳ ಯಜ್ಞಶಾಲೆಯಲ್ಲಿದ್ದು, ಸೋವಿದೇವನ ಸಿದ್ಧತೆ ಸಾಕಾಗದೇ ಇದೇ ಸಮಯವನ್ನು ಕಾಯುತ್ತಿದ್ದ ಬಹುರೂಪಿ ಚೌಡಯ್ಯ, ಕಲಕೇತಯ್ಯ ನಗೆಯಮಾರಿತಂದೆ – ಇವರು ಸುತ್ತುವರೆದು ಬಹುರೂಪಿಚೌಡಯ್ಯ ವೀರಭದ್ರನಾಗಿ ಬಿಜ್ಜಳನ ಯಜ್ಞಶಾಲೆಯಲ್ಲೇ ಬಿಜ್ಜಳನನ್ನು ಇರಿಯುತ್ತಾನೆ. ಮಹಾಚೈತ್ರದಲ್ಲಿ ಶರಣಗುಂಪಿನಲ್ಲೇ ಇದ್ದವರು ಬಿಜ್ಜಳನನ್ನು ಕೊಲೆಮಾಡಿದರೆಂದು ಬಿಂಬಿಸಲಾಗಿದ್ದು, ಅವರೂ ಬಿಜ್ಜಳನ ಜೊತೆಗಿದ್ದವರೇ ಎಂಬುದನ್ನು ಈ ಕೃತ್ಯವೆಸಗಿರುವುದು ಯಜ್ಞಶಾಲೆಯಂತಹ ಖಾಸಗಿ ಸ್ಥಳದಲ್ಲಿ ನಡೆದದ್ದರಿಂದ ಅರ್ಥೈಸಬಹುದು.

'ಶಿವರಾತ್ರಿ' ಮತ್ತು 'ತಲೆದಂಡ' ನಾಟಕಗಳಲ್ಲಿ ಮಾತ್ರ 'ಜಗದೇವ' ಮತ್ತು 'ಮಲ್ಲಿಬೊಮ್ಮ'ರು ಬಿಜ್ಜಳನನ್ನು ಕೊಲ್ಲುವುದನ್ನು ಕಾಣುತ್ತೇವೆ. "ಶಿವಭಕ್ತಗಣದಲ್ಲಿಯೂ ಕೋಲಾಹಲವೇಳುತ್ತಿತ್ತು. ಪ್ರತೀಕಾರಕ್ಕೆ ಕೆಲವರು ಹಾತೊರೆಯುತ್ತಿದ್ದರು. ಅವರಲ್ಲಿ 'ಜಗದೇವ' ಮಲ್ಲಿಬೊಮ್ಮರೆಂಬಿಬ್ಬರು ಕತ್ತಿ ಮಸೆಯುತ್ತಾ ಶರಣಕುಲಕ್ಕೆ ಆದ ಅಪಮಾನವನ್ನು ತೊಡೆದುಹಾಕಲು ಸಮಯ ಸಾಧಿಸುತ್ತಿದ್ದರು. ಮಡಿವಾಳ ಮಾಚಯ್ಯ ಅವರಿಗೆ ಆಶೀರ್ವಾದವನ್ನೂ ಕೊಟ್ಟಿದ್ದ."[೨೧] 'ತಲೆದಂಡ' ನಾಟಕದಲ್ಲಿ 'ಜಗದೇವ' ಭಂಡಾರಕ್ಕೆ ಬಸವಣ್ಣನಿಲ್ಲದಾಗ ರಾಜಕುಮಾರರ ಸೋವಿದೇವ ಹೋಗಲು ಅದನ್ನು ತಡೆಯಲು ಶರಣ ಕೂಟವನ್ನು ಜಮಾಯಿಸಿರುತ್ತಾನೆ. ಬ್ರಾಹ್ಮಣನಾದ ಅವನ ಮನೆಯಲ್ಲಿ ತಂದೆಗೆ ಆರೋಗ್ಯ ಸರಿಯಿರುವುದಿಲ್ಲ. ಅವನ ತಾಯಿ ಅಂಬಕ್ಕನಿಂದ ಇವನ ತಂದೆಯೂ ರಾಜನನ್ನು ಎದುರು ಹಾಕಿಕೊಂಡಿದ್ದರಿಂದ ಈ ಗತಿ ಬಂದುದಾಗಿ ಹೇಳಿಸಿರುವುದರಿಂದ ತಂದೆಯ ಕಾಲದಿಂದಲೂ ರಾಜನೊಂದಿಗೆ ಒಂದು ರೀತಿಯ ಸಂಬಂಧವಿದ್ದುದಾಗಿ ತಿಳಿದುಬರುತ್ತದೆ. "ಜಗದೇವ ಮತ್ತು ಮಲ್ಲಿಬೊಮ್ಮ ಬಿಜ್ಜಳನ ಪಂಜು ಹಿಡಿಯುವ ಕಾಯಕದಲ್ಲಿದ್ದರು"[೨೨] ಇವರೂ ಅರಮನೆಯ ಕಾಯಕದವರಾಗಿದ್ದು, ಶರಣತತ್ವಗಳಿಂದ ಪ್ರಭಾವಿತರಾಗಿದ್ದವರೆಂದು ಊಹಿಸಬಹುದಾಗಿದೆ. 'ಶಿವರಾತ್ರಿ' ನಾಟಕದಲ್ಲಿ ಬಿಜ್ಜಳನ ಮೇಲೆ ಆಕ್ರಮಣ ಮಾಡಿದ ಅವನ ದ್ವಾರಪಾಲಕನಾದ 'ಮಲ್ಲಿಬೊಮ್ಮಣ್ಣ' ತಮ್ಮನ್ನು ಪರಿಚಯ ಮಾಡಿಕೊಳ್ಳುತ್ತಾನೆ. "ಇವನು ಜಗದೇವ ನಾನು ಮಲ್ಲಿಬೊಮ್ಮಣ್ಣ ಚಾಲುಕ್ಯರ ಕಾಲದಿಂದ ನಿನ್ನ ಹಳೇ ವೈರಿಗಳು"[೨೩] ಎಂದು ಹೇಳುವಲ್ಲಿಯೂ ಹಳೆ ವೈರ ಸಾಧಿಸಿಕೊಳ್ಳಲು ಇಲ್ಲಿ ದ್ವಾರಪಾಲಕರಾಗಿ ಸೇರಿದ್ದರೆಂದೂ ತಿಳಿಯುತ್ತದೆ.

ತಲೆದಂಡ ನಾಟಕದಲ್ಲಿ ಜಗದೇವ ಮತ್ತು ಮಲ್ಲಿಬೊಮ್ಮರ ಪಾತ್ರಗಳನ್ನು ಉತ್ತಮ ಸ್ನೇಹಿತರಾಗಿ ರೂಪಿಸಿದ್ದು, ನಾಟಕದುದ್ದಕ್ಕೂ ಕಾಣಿಸಿಕೊಳ್ಳುತ್ತಾರೆ. ಜಗದೇವ ಒಂದು ರೀತಿಯ ದ್ವಂದ್ವ ವ್ಯಕ್ತಿತ್ವದವನು. ಶರಣ ತತ್ತ್ವಗಳನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳದವನು. "ಬಸವಣ್ಣನ ಕ್ರಾಂತಿಯನ್ನು ಕೇವಲ ಒಂದು ಹೊಸ ಧರ್ಮದ ಉದಯವೆಂದು ನಂಬಿ ಉಗ್ರಗಾಮಿಯಾಗುವ ಜಗದೇವನಂಥವರು, ಧಾರ್ಮಿಕ ವಿರೋಧಿಗಳನ್ನು ಬಗ್ಗಬಡಿಯಬೇಕೆನ್ನುವ ಜಗದೇವನಂತೆ ರಾಜಕೀಯ ವಿರೋಧಿಗಳನ್ನು ಬಗ್ಗಿಬಡಿಯುವುದೇ ರಾಜಕಾರಣವೆಂದು ನಂಬುವ ಸೋವಿದೇವ–ನಂಥವರು.... ಹೊಸ ಕ್ರೌರ್ಯಕ್ಕೆ ಮುಂದಾಗುವರು."[೨೪]

[illegible]

ತನ್ನ ತಂದೆ ಸಾಂಬಶಿವ ಶಾಸ್ತ್ರೀಗಳ ಶ್ರಾದ್ಧವನ್ನು ಮಾಡುತ್ತಿರುತ್ತಾನೆ. ಬಸವಣ್ಣನಿಗೆ ತತ್ತ್ವಸಿದ್ಧಾಂತಗಳಿಗಿಂತ ಮಾನವೀಯ ಸಂಬಂಧ ಬಹಳ ಮುಖ್ಯವಾಗಿದ್ದರಿಂದ ಅಲ್ಲಿಗೆ ಹೋಗುತ್ತಾನೆ. ಆದರೆ ಬಸವಣ್ಣನನ್ನು ಅರ್ಧ ಮಾತ್ರ ಅರಿತಿದ್ದ ಜಗದೇವ ಒಬ್ಬ ಅತಂತ್ರ ಜೀವಿಯಾಗಿದ್ದು ಅವನೇ ಹೇಳುವ ಹಾಗೆ ಸಾಯುತ್ತಿರುವ ತಂದೆ ಆರ್ತನಾಗಿ ಕರೆದಾಗ ಸೇವೆ ಮಾಡದ ಆತ ಸತ್ತ ಮೇಲೆ ಪ್ರೇತಾತ್ಮವನ್ನು ಕರೆಯುತ್ತಿದ್ದಾನೆ. "ಏನು ಮಾಡಿದರೂ ಸೋಲು, ಅಂಜಿಕೆ, ವೈಫಲ್ಯ"[೨೫] ಬಸವಣ್ಣ ಹೊರಟುಹೋದ ಮೇಲೆ ತನಗೆ ತಾನೇ ಹೇಳಿಕೊಳ್ಳುವ ಮುಖ್ಯ ಪ್ರಶ್ನೆ ಉಳಿದುಹೋತು, ಬಸವಣ್ಣ–ಕೊಂಡಗುಳಿ ಕೇಶಿರಾಜ ಅನ್ನತಾನ, ಭಕ್ತ ತನ್ನ ಇಷ್ಟಲಿಂಗ ಕಳಕೊಂಡರ ಆತ್ಮಹತ್ಯಾ ಮಾಡಕೋಬೇಕು ಅಂತ. ನಾನು ಜನಿವಾರನೂ ಕಳಕೊಂಡೆ, ಇಷ್ಟಲಿಂಗನೂ ಕಳಕೊಂಡೆ ಇದಕ್ಕೆ ಪ್ರಾಯಶ್ಚಿತ್ತ ಯಾವುದು?" [೨೬] ಈ ಮಾತಿನಲ್ಲಿ ಅವನ ಚಟಪಡಿಕೆಯಿದೆ. ಜಗದೇವನ ಹೊಯ್ದಾಟ ಅಥವಾ ಇಬ್ಬಂದಿತನದ ಆಧುನಿಕ ಸಂದರ್ಭದ ಬ್ರಾಹ್ಮಣರ ಇಬ್ಬಂದಿತನಕ್ಕೂ ಭಿನ್ನವಾದುದಲ್ಲ" [೨೭]

ಕೊನೆಯಲ್ಲಿ ಮಲ್ಲಿಬೊಮ್ಮನೊಂದಿಗೆ ಅರಮನೆಯಲ್ಲಿ ತನ್ನ ಮಗ 'ಸೋವಿದೇವ' ನಿಂದಲೇ ಬಂದಿಯಾಗಿದ್ದ ಅಸಾಯಕನಾದ ಬಿಜ್ಜಳನ ಮೇಲೆ ಎರಗುತ್ತಾನೆ. ಮಲ್ಲಿಬೊಮ್ಮ ತಡೆದರೂ ಆತನನ್ನು ಇರಿದುಕೊಲ್ಲುವುದರ ಮೂಲಕ ಬಿಜ್ಜಳನನ್ನು ದುರಂತನಾಯಕನನ್ನಾಗಿಸುತ್ತಾನೆ. ಈ ರೀತಿ ಈ ಪ್ರಕರಣದಲ್ಲಿ ಜಗದೇವ, ಮಲ್ಲಿಬೊಮ್ಮ, ಸೋವಿದೇವರ ಪಾತ್ರಗಳು ರೂಪುಗೊಂಡಿವೆ.

ಕೊನೆಟಿಪ್ಪಣಿಗಳು

೧) ಪಿ.ಲಂಕೇಶ್: ಸಂಕ್ರಾಂತಿ, ಪು. ೨೫

೨) ಅದೇ, ಪು. ೯೫.

೩) ಡಾ.ಹಲತಿ ಸೋಮಶೇಖರ: ಪಿ.ಲಂಕೇಶ್, ಪು. ೬೧.

೪) ಗಿರೀಶ್‌ಕಾರ್ನಾಡ್: ತಲೆದಂಡ, ಪು. ೪೫

೫) ಡಾ. ಮೀರಾಮೂರ್ತಿ: ಗಿರೀಶ್‌ಕಾರ್ನಾಡ್, ಪು. ೧೧೩.

೬) ಚಂದ್ರಶೇಖರ ಕಂಬಾರ: ಶಿವರಾತ್ರಿ, ಪು.೨೨

೭) ಎಚ್.ಎಸ್.ಶಿವಪ್ರಕಾಶ್, ಮಹಾಚೈತ್ರ, ಪು. ೦೭.

೮) ಪಿ.ಲಂಕೇಶ್: ಸಂಕ್ರಾಂತಿ, ಪು. ೧೧.

೯) ಹಾಲತಿ ಸೋಮಶೇಖರ: ಪಿ.ಲಂಕೇಶ್, ಪು. ೬೧.

೧೦) ಪಿ.ಲಂಕೇಶ್: ಸಂಕ್ರಾಂತಿ, ಪು. ೯೦.

೧೧) ಅದೇ, ಪು. ೧೭. ೧೮

೧೨) ಚಂದ್ರಶೇಖರ ಕಂಬಾರ, ಶಿವರಾತ್ರಿ, ಪು. ೨೩.

೧೩) ಅದೇ, ಪು. ೨೩

೧೪) ಅದೇ, ಪು. ೦೬

೧೫) ಅದೇ, ಪು.೩೩

೧೬) ಅದೇ, ಪು. ೫೧

೧೭) ಅದೇ, ಪು. ೩೮, ೩೯

೧೮) ಡಾ. ಎಚ್. ತಿಪ್ಪೇರುದ್ರಸ್ವಾಮಿ: ಕರ್ನಾಟಕ ಶರಣ ಕಥಾಮೃತ, ಪು. ೧೫೯.

೧೯) ಎಚ್.ಎಸ್. ಶಿವಪ್ರಕಾಶ್, ಮಹಾಚೈತ್ರ, ಪು. ೫೯.

೨೦) ಅದೇ, ಪು. ೮೩.

೨೧) ಅನಕೃ: ಅನಕೃ ಅವರ ಸಮಗ್ರ ವೀರಶೈವಸಾಹಿತ್ಯ, ಪು. ೨೭೦.

೨೨) ಅದೇ, ಪು. ೨೭೧.

೨೩) ಗಿರೀಶ್‌ಕಾರ್ನಾಡ್:ಶಿವರಾತ್ರಿ, ಪು. ೮೬.

೨೪) ಟಿ.ಪಿ.ಅಶೋಕ: ಸಾಹಿತ್ಯ ಸಂದರ್ಭ, ಪು. ೧೯೨.

೨೫) ಗಿರೀಶ್‌ಕಾರ್ನಾಡ್, ತಲೆದಂಡ, ಪು. ೩೨.

೨೬) ಅದೇ, ಪು. ೩೭.

೨೭) ಡಾ. ರಾಜುಹೆಗಡೆ: ಗಿರೀಶ್ ಕಾರ್ನಾಡರ ಸಮಗ್ರ ನಾಟಕಗಳ ಸಮೀಕ್ಷೆ, ಪು. ೧೩೩.

ಅಧ್ಯಾಯ – ೪
ಐದು ನಾಟಕಗಳ ಸಾಮ್ಯ – ವೈಷಮ್ಯ

೧೨ನೇ ಶತಮಾನದ ಶರಣಕ್ರಾಂತಿಯ ಹಿನ್ನೆಲೆಯಲ್ಲಿ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಹಲವು ಕೃತಿಗಳು ಬಂದಿದ್ದರೂ ನಾಟಕ ಪ್ರಕಾರವೇ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದ್ದು ವಿಶೇಷ. ಪಾತ್ರಗಳ ಮೂಲಕ, ಪಾತ್ರಗಳ ಬಾಯಿಂದಲೇ ತಾತ್ತ್ವಿಕ ಮತ್ತು ಸಾಹಿತ್ಯಕ ಪ್ರಶ್ನೆಗಳಿಗೆ ಉತ್ತರ ಕೊಡಿಸಲು ನಾಟಕ ಮಾಧ್ಯಮ ಅನುಕೂಲವಾಗಿ ಕಂಡದ್ದೇ ಇತರೆ ಸಾಹಿತ್ಯ ಪ್ರಕಾರಗಳಿಗಿಂತ ನಾಟಕ ಪ್ರಕಾರದಲ್ಲೇ ಹೆಚ್ಚು ಕೃತಿಗಳು ಬಂದಿರುವುದಕ್ಕೆ ಕಾರಣವಾಗಿರಬಹುದು.

ಈ ಒಂದು ಕ್ರಾಂತಿಯಿಂದುಂಟಾದ ಸ್ಥಿತ್ಯಂತರಗಳನ್ನು ಈ ಐದೂ ನಾಟಕಕಾರರ ಪ್ರತಿಭೆ ಹೇಗೆ ಕಂಡರಿಸಿದೆ!? ಎಂಬುದರ ಹಿನ್ನೆಲೆಯಿಂದ ಈ ಐದೂ ನಾಟಕಗಳ ಸಾಮ್ಯ–ವೈಷಮ್ಯವನ್ನು ವಿಭಿನ್ನ ನೆಲೆಗಳಲ್ಲಿ ಅಧ್ಯಯಿಸಬಹುದಾಗಿದೆ.

೪.೧. ಶರಣಚಳವಳಿಯ ತಾತ್ವಿಕತೆ

೪.೨. ಪ್ರತಿಲೋಮ ವಿವಾಹ

೪.೩. ಪುರಾಣ ಪ್ರತಿಮೆಗಳು

೪.೪. ರಂಗಕೃತಿಗಳಾಗಿ

೪.೧. ಶರಣಚಳವಳಿಯ ತಾತ್ವಿಕತೆ: 'ಸಂಕ್ರಾಂತಿ' ನಾಟಕದಲ್ಲಿ ಇನ್ನೂ ಕಲ್ಯಾಣದಲ್ಲಿ ಬಸವಣ್ಣನಿದ್ದ. ಮಹಾಚೈತ್ರದಲ್ಲಿ 'ಬಸವನಿಲ್ಲ ಕಲ್ಯಾಣದಲ್ಲಿ' 'ತಲೆದಂಡ'ದಲ್ಲಿ ಇದ್ದೂ ಇಲ್ಲವಾಗುತ್ತಾನೆ. 'ಶಿವರಾತ್ರಿ' ನಾಟಕದಲ್ಲಿ ಬಸವಭಕ್ತಿ ಅಧಿಕವಾಗಿ ರಾಜಭಕ್ತಿಯೇ ಕ್ಷೀಣವಾಗುವಂತೆ ಬಸವಣ್ಣನಿದ್ದು ಬಸವಣ್ಣನ ನಿರ್ಗಮನಾನಂತರ ಬಿಜ್ಜಳನೂ ಅಸಹಾಯಕನಾದುದು ಬಸವಶಕ್ತಿಯ ಪ್ರಧಾನತೆಯನ್ನು ಸಮರ್ಥಿಸುತ್ತದೆ. 'ನಾನೇ ಬಿಜ್ಜಳ' ನಾಟಕದಲ್ಲಿ ಬಿಜ್ಜಳತ್ವದ ಕಾಯಿಲೆಗೆ ಮದ್ದಾಗಿ ಬರುತ್ತಾನೆ ಬಸವಣ್ಣ. ಶರಣ ಚಳವಳಿಯ ತಾತ್ವಿಕತೆ ಐದೂ ನಾಟಕಗಳಲ್ಲಿ ನಾಟಕಕಾರರ ದೃಷ್ಟಿಕೋನಗಳಿಗೆ ಅನುಗುಣವಾಗಿ, ಹೇಗೆ ವಿವಿಧ ರೀತಿಯಲ್ಲಿ ಪಡಿಮೂಡಿದೆ ಎಂಬುದರ ತೌಲಿನಕ ಅಧ್ಯಯನದ ಔಚಿತ್ಯವರಿತು ಆ ನಿಟ್ಟಿನಲ್ಲಿ ಮುಂದುವರಿಯಲಾಗಿದೆ.

[illegible]

೪.೧.೧. ಕಾಯಕತತ್ತ್ವ ಅಸಂಗ್ರಹ: 'ಸಂಕ್ರಾಂತಿ' ನಾಟಕಕ್ಕೆ "೧೨ನೇ ಶತಮಾನದ ಚರಿತ್ರೆ ಕೇವಲ ನೆಪ ಮಾತ್ರ. ಬಸವ, ಬಿಜ್ಜಳರ ಹೆಸರುಗಳನ್ನು 'ಸಂಕ್ರಾಂತಿ'ಯಿಂದ ತೆಗೆದರೆ ಇತಿಹಾಸಕ್ಕೆ ಸಂಬಂಧಿಸಿದ ಯಾವ ಪುರಾವೆ ದಾಖಲೆಗಳೂ ಸಿಗುವುದಿಲ್ಲ"[೧] ಇಲ್ಲಿ ಇಡೀ ಶರಣ ಚಳವಳಿಯ ತತ್ತ್ವಗಳನ್ನು ಬಿಂಬಿಸಲು ಹೋಗದೆ ನಾಟಕಕಾರರೇ ಪ್ರಸ್ತುತ ನಾಟಕದ ಮುನ್ನುಡಿಯಲ್ಲಿ ಹೇಳುವಂತೆ "ನನ್ನ ಜನಾಂಗಕ್ಕೆ ಇದು ಸಂಬಂಧಿಸಿರದಿದ್ದರೆ ನಾನು ಬರೆಯುತ್ತಲೇ ಇರಲಿಲ್ಲ".[೨] ಆದ್ದರಿಂದ ವರ್ತಮಾನ ಬದುಕಿನ ಸಂಕೀರ್ಣವಾದ ಜಿಜ್ಞಾಸೆಗಳೇ ಇಲ್ಲಿ ಮುಖ್ಯವಾಗುತ್ತವೆ. ಹಾಗಾಗಿಯೇ ಇಲ್ಲಿ ಶರಣನ ಚಳವಳಿಯ ಎಲ್ಲಾ ತತ್ತ್ವಗಳನ್ನು ಹುಡುಕಹೋಗಲಾಗುವುದಿಲ್ಲ.

'ಮಹಾಚೈತ್ರ' ನಾಟಕ ವಿಪುಲವಾದ ಚಾರಿತ್ರಿಕ ಪರಿಕರಗಳನ್ನು ಒಳಗೊಂಡಿದ್ದು, ಈ ನಾಟಕದ ಕರ್ತೃ ಎಚ್.ಎಸ್.ಶಿವಪ್ರಕಾಶರೇ ಮುನ್ನುಡಿಯಲ್ಲಿ ಹೇಳಿರುವ "ಈ ನಾಟಕದಲ್ಲಿ ಕನ್ನಡನಾಡಿನ ಚರಿತ್ರೆ ಮತ್ತು ಸಂಸ್ಕೃತಿಗಳ ನಿರ್ಣಾಯಕ ಘಟ್ಟಗಳಲ್ಲಿ ಒಂದಾದ ೧೨ನೇ ಶತಮಾನದ ಚಾರಿತ್ರಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ವೈಶಿಷ್ಟ್ಯಗಳನ್ನು ಅದಕ್ಕೆ ಸಂಬಂಧಿಸಿದ ಪುರಾಣ, ಆಚರಣೆ, ಜಾನಪದಗಳ ವಿವರಗಳೊಂದಿಗೆ ಮೇಳೈಸಲಾಗಿದೆ"[೩] ಎಂಬ ಅಭಿಪ್ರಾಯದಲ್ಲಿ ನೈಜ ಚಾರಿತ್ರಿಕವೆಂಬುದನ್ನು ತೋರ್ಪಡಿಸುತ್ತದೆ. ಬಸವಣ್ಣನ ನಿರ್ಗಮನದ ನಂತರದಲ್ಲಿ ಈ ನಾಟಕ ಪ್ರಾರಂಭವಾದರೂ, ಶರಣ ಚಳುವಳಿಯ ನೇತಾರನಾದ ಅವನ ತತ್ತ್ವಗಳ ಮನನದ ಮೂಲಕ ನಾಟಕಕಾರರು ಕೆಲವು ಪಾತ್ರಗಳ ಮುಲಕ ಆಡಿಸಿತೋರಿಸಿದ್ದಾರೆ. ಬಸವಣ್ಣನಿದ್ದಾಗಿನ ರಾಜ್ಯದ ಪರಿಸ್ಥಿತಿಯ ಬಗ್ಗೆ ಕ್ರಮಿತನೊಂದಿಗೆ ಸಂಭಾಷಿಸುತ್ತಿರುವಾಗ ಕ್ರಮಿತನು, ಮಂದಿರಗಳ ಮೇಲೆ ಹತ್ತಾರು ಕರಗಳನ್ನು ಹೇರಿದ್ದರ ಬಗ್ಗೆ ಆರೋಪಿಸಿದಾಗ ಬಿಜ್ಜಳ "ಸಾಮ್ರಾಜ್ಯವನ್ನು ಬಲಪಡಿಸಲು ಬೇರೆ ಹಾದಿ ಇರಲಿಲ್ಲ. ಮುಮ್ಮಡಿ ತೈಲಪ ಬಿಟ್ಟುಹೋದ ಬಳುವಳಿ ಹಾಗಿತ್ತು. 'ಬಿಳ್ಕೊಡೆ' – ಮನೆಗೆಲಸಗಾರರು ಕೊಡಬೇಕಾದ ತೆರಿಗೆ–ತೆರವನ್ನೂ ತೆಗೆದುಹಾಕಿ ಹೊರನಾಡಿನ ವಣಿಜರ ಹಿಂಡನ್ನೇ ಕಲ್ಯಾಣಕ್ಕೆ ಸೆಳೆದ. ಸಂಪತ್ತು ವರ್ಧಿಸಿತು.... ಅಂತಹ ಸನ್ನಿವೇಶದಲ್ಲೇ ನಮಗೆ ಅನುಕೂಲಕರವಾದ ಕಾಯಕ ತತ್ತ್ವವನ್ನೇ ಜನರಿಗೆ ಬೋಧಿಸಿದ, ಉತ್ಪಾದನೆ ಇಮ್ಮಡಿಸಿತು".[೪] ಎಂದು ಹೇಳುವಲ್ಲಿ ಬಸವಣ್ಣನನ್ನು ಪವಾಡ ಪುರುಷನಾಗಿ ಕಂಡಿದ್ದವರಿಗೆ ನೈಜತೆಯನ್ನು ತಿಳಿಸಲು ಈ ಮೂಲಕ ಯತ್ನಿಸಿದ್ದಾರೆ ನಾಟಕಕಾರರು. ಭಂಡಾರದ ಹಣಹೆಚ್ಚಿದ್ದು ಬಸವಣ್ಣ ಬೋಧಿಸಿದ ಕಾಯಕತತ್ತ್ವವನ್ನು ಜನರು ಅಳವಡಿಸಿಕೊಂಡು ಆಚರಣೆಗೆ

ತಂದದ್ದರಿಂದ ಎಂಬ ಸತ್ಯಾಂಶವನ್ನು ಬಿಜ್ಜಳನ ಪಾತ್ರದ ಮೂಲಕವೇ ಹೇಳಿಸಿದ್ದು ಔಚಿತ್ಯಪೂರ್ಣವಾಗಿದೆ.

'ತಲೆದಂಡ' ನಾಟಕದಲ್ಲೂ ಹೀಗೇ ಶರಣ ಚಳವಳಿಯ ಅಮೂಲ್ಯ ತತ್ತ್ವವಾದ ಕಾಯಕ ತತ್ತ್ವದ ಬಗ್ಗೆ ಅದರ ಪ್ರಭಾವ ಪರಿಣಾಮಗಳ ಬಗ್ಗೆ ಬಿಜ್ಜಳ ಪಾತ್ರದ ಮೂಲಕವೇ ಪರಿಚಯಿಸಿರುವುದನ್ನು ಕಾಣಬಹುದು. ಇಲ್ಲೂ ಮಂಚ್ಯಣ ಕ್ರಮಿತ ಮಹಾಮನೆಯಲ್ಲಿ ನಡೆಯುತ್ತಿದ್ದ ದಾಸೋಹದ ಬಗೆಗೆ ಅದಕ್ಕೆ ಬೇಕಾದ ಹಣದ ಬಗೆಗೆ ಹಾಗೂ ಭಂಡಾರದ ಹಣ ಕೊಳ್ಳೆಹೊಡಿದುದಕ್ಕೆ ಸಂಬಂಧ ಜೋಡಿಸ ಹೊರಟಾಗ ಬಿಜ್ಜಳ: "ನನ್ನ ಮಗ ಒಬ್ಬನೇ ದಡ್ಡ ಅಂತ ತಿಳಿದುಕೊಂಡಿದ್ದಿ ಇಡೀ ಕಲ್ಯಾಣ ಆ್ಯಟ್ಸಾ ಶ್ಯಾಣಾ ಅಂತಾತು..... ನಾ ಇಲ್ಲಿ ಬಂದಾಗಿನ ತೊಟ್ಟು ಹತ್ತು ವರ್ಷದಾಗ ಕಲ್ಯಾಣ ಪಟ್ಟಣ ಹೀಂಗ ಅಡ್ಡಾದಿಡ್ಡ ಬೆಳದೈತಿ. ಯಾಕಂತ ತಿಳಿಕೊಂಡಿರಿ? ನನ್ನ ಸಂಗಾಟ ಬಸವಣ್ಣ ಬಂದ. ಪ್ರತಿಯೊಬ್ಬ ಶರಣ 'ಕಾಯಕವೇ ಕೈಲಾಸ' ಅಂತ ರಟ್ಟೆ ಮುರಿದು ದುಡೀತಾನ, ಕೂಲಿ ಮಾತ್ರ ಅವತ್ತಿನ ದಾಸೋಹಕ್ಕೆ ಏಟು ಬೇಕೋ ಆ್ಯಟ್ಸಾ ತಗೋತಾನ.... ಇಂದು ರಾಜ್ಯದ ಮೂಲಿಮೂಲಿಯಿಂದ ವ್ಯಾಪಾರಸ್ಥರು ಕಲ್ಯಾಣಕ್ಕೆ ಬರತಾರ. 'ಕಲ್ಯಾಣದಾಗ ಜಗಳಿಲ್ಲ, ಪಗಳಿಲ್ಲ, ಕಳವಿಲ್ಲ, ಕೊಂಕಿಲ್ಲ, ಧಾರಣೆ ಕಡಿಮೆ, ರೋಖ ವ್ಯವಹಾರ. ಕೆಲಸ ಛಂದ ಅಂತ ಹಾಡಿ ಹರಸಿ ತಮ್ಮ ಸಂಪತ್ತು ತಂದು ಇಲ್ಲಿ ಸುರೀತಾರ"[೫] ಎಂದು ಹೇಳುವಲ್ಲಿ ಶರಣರ ಕಾಯತತ್ತ್ವದ ಮಹತ್ವದ ಅರಿವಾಗುತ್ತದೆ.

ಇನ್ನು 'ಶಿವರಾತ್ರಿ' ನಾಟಕದಲ್ಲಂತೂ ಶರಣರ ಈ ಕಾಯಕತತ್ತ್ವದ ನಿಷ್ಠೆಯನ್ನು ಜನರ ನಡಾವಳಿಕೆಯಲ್ಲೇ ತೋರಿಸಿರುವುದು ವಿಶೇಷವಾಗಿದ್ದು, ಹೆಚ್ಚು ಅರ್ಥಪೂರ್ಣವಾಗಿದೆ. ಅರಮನೆಯ ರತ್ನದ ಸರದ ಅಪಹರಣದ ಪ್ರಸಂಗ ಇದನ್ನು ದರ್ಶಿಸುತ್ತದೆ. ಆ ಸರವನ್ನು ಹರಿಹರ ಪಂಡಿತನ ಮಗ ದಾಮೋದರ ತಂದೆಯ ಪ್ರಚೋದನೆಯಿಂದ ಕದ್ದು ತಮ್ಮ ಮನೆಯಲ್ಲಿ ಬಚ್ಚಿಟ್ಟಾಗ 'ಕಾಶವ್ವ-ಮುದುಕ' ಇವರಿಗೆ ಅದರಿಂದ 'ಸತ್ತ ಹೆಗ್ಗಣದನಾತ' ಹೊಡೆಯುತ್ತದೆ. ಅದನ್ನು ಮುಗ್ಧ ಸಂಗಯ್ಯ ಕಾಮಾಕ್ಷಿಗೆ ಕೊಟ್ಟಾಗ ಅದರ ಕಿಮ್ಮತ್ತು ಹೆಚ್ಚಾಯಿತೆಂದು ಅವಳು ಅದನ್ನು ಸೂಳೆ ಸಾವಂತ್ರಿಗೆ ಕೊಡುತ್ತಾಳೆ. ಅವಳು ತನಗದು ಕಾಯಕದಿಂದ ಲಭಿಸಿದ್ದಲ್ಲವೆಂದು ಅದನ್ನು ಒಂದು ಮೂಲೆಯಲ್ಲಿ ಬಿಸಾಡುತ್ತಾಳೆ. ಆದರೆ ಅದೇ ಸರಕ್ಕೆ ಆಸೆಪಟ್ಟು ಅದನ್ನು ಕದಿಯಲು ತನ್ನ ಮಗನಿಗೇ ಹೇಳುವವನು ಮೇಲ್ವರ್ಗಕ್ಕೆ ಸೇರಿದ ಹರಿಹರಪಂಡಿತ",: ಹೀಗೆ ಬಸವಣ್ಣನ ಪ್ರಭಾವಕ್ಕೊಳಗಾದ ಸಾಮಾನ್ಯ ಜನರೆಲ್ಲರ

ಜೀವನದಲ್ಲೂ ಈ ಕಾಯಕ ನಿಷ್ಠೆ ಮೈಗೂಡಿದ್ದನ್ನು ಕಂಬಾರರ ಜನಪರ ಪ್ರತಿಭೆ ಅರ್ಥವತ್ತಾಗಿ, ಔಚಿತ್ಯಪೂರ್ಣವಾಗಿ ಅಭಿವ್ಯಕ್ತಿಸಿದೆ.

ಇನ್ನು 'ನಾನೇ ಬಿಜ್ಜಳ' ನಾಟಕದಲ್ಲಿ ಜಡಭರತರ ದೃಷ್ಟಿ ಶರಣಚಳವಳಿಯ ಎಲ್ಲಾ ತತ್ತ್ವಗಳತ್ತ ಹರಿಯದಿರುವುದು ಕಂಡುಬರುತ್ತದೆ. 'ಒಬ್ಬ ಮನೋರೋಗಿಯನ್ನು ಬಿಜ್ಜಳನಲ್ಲೋ ಬಿಜ್ಜಳನಲ್ಲಿ ಒಬ್ಬ ಮನೋರೋಗಿಯನ್ನೋ ನೋಡುವ ಪ್ರಯತ್ನದಲ್ಲಿ ಮಿಕ್ಕವು ಗೌಣವಾಗಿವೆ ಎಂದೇ ಹೇಳಬಹುದು.

೪.೧.೨. ಸಮಸಮಾಜ ತತ್ತ್ವ, ವರ್ಣಾಶ್ರಮ ಪದ್ಧತಿ ವಿರೋಧಿ ತತ್ತ್ವ

"ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ

ಇವ ನಮ್ಮವ ಇವ ನಮ್ಮವ ಇವನಮ್ಮವನೆಂದೆನಿಸಯ್ಯ"

ಎಂದು ಶರಣರು ಮಾನವಕುಲವೊಂದೇ ಎಂಬ ತತ್ತ್ವ ಸಾರಿ ಈ ಕುಲದಲ್ಲಿ 'ಭಕ್ತ'ನೊಂದು ಕುಲ 'ಭವಿಯೊಂದು ಕುಲ' ಎಂದು ಪ್ರತಿಪಾದಿಸುತ್ತಾರೆ. ಶರಣ ಮೇಲಿನ 'ನಾವೆಲ್ಲಾ ಒಂದೇ' ಎಂದು ಶರಣತ್ವವನ್ನು ನಂಬಿಬಂದವರನ್ನು ಒಂದು ಕುಲವೆಂದು, ಅಲ್ಲದವರು ಒಂದು ಕುಲವೆನ್ನುವುದರ ಮೂಲಕ ಪಂಪನ 'ಮಾನವ ಕುಲಂ ತಾನೊಂದೆ ವಲಂ' ಎಂಬುದನ್ನು ಮುರಿದರು ಎನ್ನುವಂತಿಲ್ಲ. ಏಕೆಂದರೆ ಶರಣರು ವಿವಿಧ ತತ್ತ್ವ, ಮತ ಧರ್ಮಗಳಡಿ ಒಡೆದು ಹೋಗಿದ್ದುದನ್ನು ಕಂಡು ಮಾನವಕುಲವೆಲ್ಲವನ್ನೂ ಒಂದೇ ತತ್ತ್ವದಡಿಯಲ್ಲಿ ತರಲು ಮಾಡಿದ ಪ್ರಯತ್ನವಾಗಿದ್ದು ಶ್ಲಾಘ್ಯವಾಗಿದೆ.

ಈ ಐದೂ ನಾಟಕಗಳಲ್ಲಿ ಪ್ರಸ್ತುತ ಈ ತತ್ತ್ವ ಹೇಗೆ ಬಿಂಬಿತವಾಗಿದೆ ಐವರು ನಾಟಕಕಾರರಲ್ಲಿ ವಿಭಿನ್ನ ದೃಷ್ಟಿಕೋನದಲ್ಲಿ ಹೇಗೆ ಸಮರ್ಪಿತವಾಗಿದೆ ಎಂಬುದನ್ನು ಅಧ್ಯಯಿಸಬಹುದಾಗಿದೆ.

'ಸಂಕ್ರಾಂತಿ' ನಾಟಕಕ್ಕೆ ೧೨ನೇ ಶತಮಾನದ ಚರಿತ್ರೆ ನೆಪಮಾತ್ರವಾದರೂ, ಒಂದು ನೆಲೆ ದಕ್ಕಿರುವುದು, ಐತಿಹಾಸಿಕ ಪಾತಳಿಯೇ ಹಿನ್ನೆಲೆಕೊಟ್ಟಿರುವ ಚಾರಿತ್ರಿಕ ಘಟನಾ ಪಾತಳಿಯೇ ಆಗಿರುವುದನ್ನು ನೋಡಬಹುದು. "ಹೊಸಧರ್ಮದ ಶ್ರದ್ಧೆಯಿಂದ ಜಾತಿ-ಜಾತಿಗಳ ನಡುವಿನ, ಮೇಲು-ಕೀಳಿನ ವ್ಯವಸ್ಥೆಯನ್ನು ಅಳಿಸಬೇಕೆಂಬುದು ಬಸವಣ್ಣನ ಶ್ರದ್ಧೆಯಾಗಿದ್ದರೆ ತನ್ನ ರಾಜ್ಯದ ಸಮಾಜ ವ್ಯವಸ್ಥೆಯಲ್ಲಿ

ವಿವಿಧ ಜಾತಿಗಳ ಸಮತೋಲನವನ್ನು ಕಾಪಾಡಿಕೊಂಡು ನ್ಯಾಯವನ್ನು ಎತ್ತಿಹಿಡಿಯಬೇಕೆನ್ನುವ ಕರ್ತವ್ಯಪ್ರಜ್ಞೆ ಬಿಜ್ಜಳನದಾಗಿದೆ"[೬]

ಬಸವಣ್ಣ ತಮ್ಮ ಸಮಸಮಾಜವಾದ, ವರ್ಣಾಶ್ರಮಪದ್ಧತಿ ವಿರೋಧಿ ತತ್ತ್ವಗಳನ್ನು ಸಮಾಜದಲ್ಲಿ ಸ್ಥಾಪಿಸಲು ಎಲ್ಲರನ್ನೂ ಒಂದೇ ಧರ್ಮದಡಿಯಲ್ಲಿ ತರಲು ಮಾಡಿದ ಪ್ರಯತ್ನ ಸ್ತುತ್ಯಾರ್ಹವೇ. ಆದರೆ ಅವರು ಅದಕ್ಕಾಗಿ ವಿಧಿಸಿದ್ದ ನಿರ್ಬಂಧಗಳು ಸಾಮಾನ್ಯರ ಬದುಕಲ್ಲಿ ಅಳವಡಿಕೆ ಎಷ್ಟು ಕಠಿಣ ಎಂಬುದನ್ನು ನಾಟಕಕಾರರು ಬಸವಣ್ಣನ ನಿರ್ಬಂಧಗಳ ಬಗ್ಗೆ ವಿಮರ್ಶೆ ಮಾಡಿದ್ದಾರೆ.

ಇಲ್ಲಿ ಬರುವ ಕೆಂಚನಿಗಾಗಲಿ, ಉಜ್ಜನಿಗಾಗಲಿ ಈ ನಿರ್ಬಂಧಗಳನ್ನು ಪಾಲಿಸಲಸಾಧ್ಯವಾಗಿ, ಇಕ್ಕಟ್ಟಿಗೆ ಸಿಲುಕಬೇಕಾದ ಸನ್ನಿವೇಶವನ್ನು ಸೃಷ್ಟಿಸಿದ್ದಾರೆ. ಉಜ್ಜನ ಸಂಕಟ ನಾಟಕದಲ್ಲಿ "ಹ್ಯಂಗಲಾ ಬಿಡ್ತಿ? ಬಿಟ್ಟೇನಲಾ ಮಾಡ್ತಿ? ಹೆಂಡ ಬಿಡು, ಕಂಡ ಬಿಡು, ಹೆಂಗಸ ಬಿಡು ಏನೇನಲಾ ಬಿಡೋದು ಆಂ?" ಹೀಗೆ ವ್ಯಕ್ತವಾಗುವ ಮೂಲಕ ಒಂದು ಸಮುದಾಯದ ತಲ್ಲಣಗಳನ್ನು ದಾಖಲಿಸುತ್ತದೆ."[೭] ಇನ್ನು ಕೆಂಚ ಹೇಳುವ "ಹಂದಿ ಬಂತು ಗದ್ದೆ ಹೊಗತು ಅಂತ ಇಟ್ಕೊ, ಏನಪ್ಪಾ ಮಾಡ್ತಿ ಆವಾಗ? ಬಂದು ಗಡರ್ ಅಂದ್ರ ಏನ್ ಮಾಡ್ತಿ ಅಂತೇನಿ? 'ಎಲಾ ಹಂದ್ಯಪ್ಪ, ಬಸವಣ್ಣ ಕೊಲಬ್ಯಾಡ ಅಂದಾನ ಅಂತೀಯಾ?' 'ನನ್ನ ಬೇಕಾದ್ರೆ ಕೊಲ್ಲು' ಅಂತೀಯಾ" ಎಂಬಲ್ಲಿಯೂ ಇದೇ ರೀತಿಯ ತಲ್ಲಣಗಳ ಜೊತೆಗೆ ಸಾಮಾನ್ಯ ಜನಜೀವನದಲ್ಲಿ ಇವನ್ನು ಅನುಸರಿಸಲಾಗದ ಸ್ಥಿತಿಯನ್ನು ಪ್ರತಿಬಿಂಬಿಸಲಾಗಿದೆ.

ಉಷಾಳ ಮನೋವೇದನೆ ಕೂಡ ಈ ಪರಿಯದ್ದೆ ಆಗಿದೆ. "ನನ್ನ ಬಳಿ ಇದ್ದವ ಬೇರೆ, ಆತ ನನಗೆ ಬೇಕಾದವನು. ಆದರೆ ನಾನು ಎದ್ದು ನೋಡಿದಾಗ ಆತನಿರಲಿಲ್ಲ. ಅಲ್ಲಿದ್ದವನು ಶರಣರುದ್ರ. ಇದು ಅತ್ಯಾಚಾರವಲ್ಲದೆ ಮತ್ತೇನು" ಉಷಾಳ ಈ ಮಾತು "ಬಸವಣ್ಣನಿಗಿರುವುದು ಬ್ರಾಹ್ಮಣ ಸಂಸ್ಕಾರವೇ ವಿನಾ ಶೂದ್ರ ಸಂಸ್ಕಾರವಲ್ಲ"[೮] ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಇದಲ್ಲದೆ ಬಸವಣ್ಣನೇ ಬಿಜ್ಜಳನನ್ನು ಕುರಿತು ಪ್ರಭುತ್ವದ ಐಶಾರಾಮಿತ್ವಕ್ಕೆ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ 'ತಮ್ಮ ಕಿರೀಟದ ಒಂದು ವಜ್ರ ಈ ದೇಶದ ಅರ್ಧಹೊಟ್ಟೆಗಳಿಗೆ ಅನ್ನಕೊಡಬಲ್ಲದು.... ದೂರದ ನಕ್ಷತ್ರಗಳ ಗುಟ್ಟು ಕಂಡುಹಿಡಿದ ವಿಜ್ಞಾನಿಯಂತೆ ಹೆಮ್ಮೆಯಿಂದ ಜನ ಹೇಳುತ್ತಾರೆ? ತಮಗೆ ಗೊತ್ತಿದೆಯೋ ಇಲ್ಲವೋ ಜನ ಮಾತ್ರ ತಮ್ಮ ಕುದುರೆಗಳ ಚುಕ್ಕೆ ಚಿತ್ತಾರಗಳ ಲೆಕ್ಕ ಇಟ್ಟು ಹರ್ಷಿಸುತ್ತಾರೆ. ತಮ್ಮ

ಅಂತಃಪುರದ ಹೆಂಗಸರ ಮೂಗುತಿಗಳ ಸೌಂದರ್ಯ ಬಣ್ಣಿಸುತ್ತಾರೆ. ತಮ್ಮ ಹೆಬ್ಬಾಗಿಲ ಕಂಬಗಳನ್ನು ನೆನೆದು ಹಿಗ್ಗುತ್ತಾರೆ. ಆದರೆ ನನಗೆ ಚಳಿಗಾಲದಲ್ಲಿ ಅಂಗೈ ಅಗಲ ಬಟ್ಟೆಯಿಲ್ಲದೆ ನಡುಗುವ ಹಸುಳೆಗಳನ್ನು ನೋಡಿ ಭಯವಾಗುತ್ತದೆ. ತಮ್ಮ ಸನಾತನಿಗಳ ಮಂತ್ರಗಳ ಗದ್ದಲದಲ್ಲಿ ಕಿವುಡಾದ ಹೊಟ್ಟೆಗಿಲ್ಲದ ಜನ ನೋಡಿ ನನ್ನ ದಿಗ್ಭ್ರಮೆ ಇಮ್ಮಡಿಯಾಗುತ್ತದೆ. "ಎಂಬಲ್ಲಿ ಏಕಕಾಲದಲ್ಲಿ ಬಸವಣ್ಣ ಸಮಸಮಾಜವಾದದ ಬಗ್ಗೆ ತಮ್ಮ ಆಶೆಯನ್ನು ಹಾಗೂ ವರ್ಣಾಶ್ರಮ ಪದ್ಧತಿಗಳ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಆದರ್ಶಗಳು ಆದರ್ಶರೂಪದಲ್ಲಿಯೇ ವ್ಯಕ್ತವಾಗಿದೆ. ಆಚರಣೆಗೆ ಬರುವಲ್ಲಿನ ಸಮಸ್ಯೆಯನ್ನು ವ್ಯಕ್ತಮಾಡಿರುವುದನ್ನು ಕಾಣುತ್ತೇವೆ.

'ಮಹಾಚೈತ್ರ' ನಾಟಕದಲ್ಲಿ ಪಾತ್ರಗಳು ವ್ಯವಸ್ಥೆಯಲ್ಲಿನ ಪರಿವರ್ತನೆಯನ್ನು ಬಯಸುತ್ತಿವೆ. ಶಿಶಿರ ಬಿಜ್ಜಳನ ಕ್ರೌರ್ಯವನ್ನು ಸಂಕೇತಿಸಿದರೆ ಚೈತ್ರ ಹೊಸ ಬದುಕಿನ ಎಲ್ಲ ಸತ್ತ್ವಗಳನ್ನು ಪ್ರತಿನಿಧಿಸುತ್ತವೆ. ಈ ಚೈತ್ರದಲ್ಲಿ ಸಮತೆ ತತ್ತ್ವವಿರುವ ಶರಣ ತತ್ತ್ವ ಅಡಗಿದೆ. ಅದರ ಆಗಮನಕ್ಕೆ ಜನ ಬಯಸುವುದು ಸಾಂಕೇತಿಕವಾಗಿದೆ.

'ಸಂಕ್ರಾಂತಿ' ಬಿಟ್ಟಲ್ಲಿಂದ 'ಮಹಾಚೈತ್ರ' ಆರಂಭವಾಗುತ್ತದೆ. ಬಸವಣ್ಣನು ಕಲ್ಯಾಣದಿಂದ ನಿರ್ಗಮಿಸಿದ ಮೇಲೆ ಕಲ್ಯಾಣದಲ್ಲಿ ಏನೇನಾಗಿ ಹೋಯಿತು ಎಂಬುದನ್ನು ನಾಟಕ ತಂದವರು ತಿರುಗಿ ಕಣ್ಣ ಮುಂದೆ ತಂದುಕೊಳ್ಳುತ್ತಾ 'ನಾಟಕ' ಆರಂಭಿಸುತ್ತಾರೆ....... "ಮಹಾಮನೆಯಲ್ಲಿ ಎಲ್ಲರಿಗೂ ಸಮಾನ ಸ್ಥಾನವಿದ್ದುದನ್ನು ಕಾಣುತ್ತೇವೆ. ಬಸವಣ್ಣನ ತತ್ತ್ವಾದರ್ಶಗಳನ್ನು ಅನುಸರಿಸಿ ಒಂದು ಗುಂಪು 'ಉಳವಿ'ಗೆ ಹೊರಟರೆ, ತಮ್ಮ ರಕ್ಷಣೆಗಾಗಿ, 'ಉಳುವಿ'ಗಾಗಿ ಹೋರಾಟದ ಮಾರ್ಗವನ್ನು ಹಿಡಿದ ಮತ್ತೊಂದು ಗುಂಪು ಆ ನಿಟ್ಟಿನಲ್ಲಿ ಮುಂದುವರಿಯುತ್ತವೆ. ನೀಲಾಂಬಿಕೆ ಮಾತ್ರ "ಆಗುಹೋಗುಗಳು ಯಾರ ಹಂಗಿನಲ್ಲೂ ಇಲ್ಲ. ಇವರು ಯಾರೂ ನನಗೆ ಹಂಗಿಗರಲ್ಲ"[೯] ಎನ್ನುವ ಮೂಲಕ ಸಮಸಮಾಜವಾದ ಮಹಾಮನೆಯಲ್ಲಿ ಆಚರಣೆಯಲ್ಲಿದ್ದನ್ನು ಬಿಂಬಿಸುತ್ತಾರೆ. ಬಸವಣ್ಣ ಭಂಡಾರಿಯಾಗಿದ್ದಾಗ ಮೇಲುಕೀಳೆನ್ನದೆ ಕರವಿಧಿಸಿದ್ದೂ ಇಲ್ಲಿ ವ್ಯಕ್ತವಾಗಿದೆ. ಕ್ರಮಿತನೊಬ್ಬ ಹೇಳುವಂತೆ "ಹತ್ತಾರು ಕರಗಳನ್ನು ಮಂದಿರದ ಮೇಲೆ ಹೇರಿದ. ಅಗ್ರಹಾರಗಳ ಮೇಲೆ ಬಾಬಂಡಿ......."[೧೦] ಮೊದಲಾದ ತೆರಿಗೆಗಳನ್ನು ಉಳ್ಳವರಿಗೆ ಹೇರಿದ್ದು, ವಲಸಗರಿಂದ ವಸೂಲಿಮಾಡುತ್ತಿದ್ದ ಬಿಲ್ಕೊಡೆ ತೆರವನ್ನು ತೆಗೆದು ಹಾಕುವ ಮೂಲಕ ಬಸವಣ್ಣ ಸ್ವತಃ ಸಮಸಮಾಜದ ತತ್ತ್ವವನ್ನು ಆಚರಣೆಗೆ ತಂದಿದ್ದು ಪಾತ್ರಗಳ ಮೂಲಕ ವ್ಯಕ್ತವಾಗಿದೆ.

'ತಲೆದಂಡ' ನಾಟಕದಲ್ಲಿ ಬಿಜ್ಜಳನೇ ಬಸವಣ್ಣನ ಬಗ್ಗೆ ಸಮರ್ಥನೆ ಕೊಡುತ್ತಾ......" ನನ್ನ ಅರವತ್ತೆರಡು ವರ್ಷದ ಆಯಸ್ಸಿನ್ಯಾಗ ಜಾತಿಯ ಹಂಗಿಲ್ಲದ ನನ್ನನ್ನ ಕಣ್ಣಾಗ ಕಣ್ಣಿಟ್ಟು ನೋಡಿದವ ಅಂದರ ಬಸವಣ್ಣ, ಅವ ಅವನ ಶರಣರು. ತಾಯಾಣೆ ಹೇಳತೀನಿ ಅವರು ಮಾತಾಡಿದರ ನಾನೂ ಒಬ್ಬ ಮನುಷ್ಯ ಅನಸತೈತಿ..... ವರ್ಣಾಶ್ರಮ ಧರ್ಮ ಬೇರುಸಹಿತ ಕಿತ್ತು ಹಾಕತೀನಿ ಅನ್ನತಾನ"[೧೧] ಎಂದು ಉದ್ಗರಿಸುವಲ್ಲಿ ಬಸವಣ್ಣ ಮತ್ತು ಶರಣರು ಸಮಸಮಾಜದ ಮತ್ತು ವರ್ಣಾಶ್ರಮ ವಿರೋಧಿ ತತ್ತ್ವವನ್ನು ತಾವು ಅಳವಡಿಸಿಕೊಂಡದ್ದು ಅಭಿವ್ಯಕ್ತವಾಗಿದೆ. ಜೊತೆಗೆ 'ಸಂಕ್ರಾಂತಿ'ಯಲ್ಲಿ ಲಂಕೇಶರು ಬಸವತತ್ತ್ವಗಳು ಎಲ್ಲರಿಗೂ ಆಚರಣೆಗೆ ತರಲಾಗದ ಸಮಸ್ಯೆಯನ್ನು ಬಿಂಬಿಸಿದ್ದು, ಕಾರ್ನಾಡರೂ ಬಿಜ್ಜಳನ ಮೂಲಕ ಇದನ್ನೇ ಸಮರ್ಥಿಸುತ್ತಾರೆ. ರಂಭಾವತಿ ಬಿಜ್ಜಳನನ್ನು ತಾವೂ ಶರಣರಾಗಿ? ಎಂದು ಪ್ರಶ್ನಿಸಲು "ಆಗತಿದ್ನಿ ಆದರ ಅ್ಯಟು ಸರಳಿಲ್ಲದು 'ಕಳಬೇಡ! ಕೊಲಬೇಡ! ಹುಸಿಯನುಡಿಯಲುಬೇಡ! ಮುನಿಯಬೇಡ!..... ಈಟೆಲ್ಲಾ ಬೇಡಗಳನ್ನು ತಲೀಗೆ ಸುತಿಗೊಂಡು ರಾಜಕೀಯದಾಗ ಬದುಕಿ ಉಳಿಯೂದಂತೆ ಐತೆ?"[೧೨] ಎಂಬಲ್ಲಿ ಅದು ಬಿಂಬಿತವಾಗಿದೆ. ಹೀಗೆ ಬಸವಣ್ಣ ಸಮಸಮಾಜದೊಂದಿಗೆ ಶುದ್ಧ ಸಮಾಜದ ಕನಸನ್ನು ಕಂಡಿದ್ದು, ಅದನ್ನು ಅಳವಡಿಸಿಕೊಂಡಿದ್ದು ಬಿಜ್ಜಳನಿಗೆ ಒಂದೊಂದು ತತ್ತ್ವವೂ ಅಚ್ಚರಿಯನ್ನುಂಟು ಮಾಡಿದ್ದು, ಇವತ್ತಿನ ರಾಜಕೀಯಕ್ಕೂ ಪ್ರತಿಬಿಂಬಿತವಾಗಿದೆ.

'ಶಿವರಾತ್ರಿ' ನಾಟಕದಲ್ಲಿ ಸಾವಂತ್ರಿ ಒಬ್ಬ ವೇಶ್ಯೆ – ಬಸವಣ್ಣನ ತತ್ತ್ವಾದರ್ಶಗಳ ಬಗೆಗೆ ರಾಜನಾದ ಬಿಜ್ಜಳನೆದುರು ವಾದ ಹೂಡುವುದು. ನಾಚಿಕೆಯ ಬಗ್ಗೆ ಬಿಜ್ಜಳ ಸೊಲ್ಲೆತ್ತಿದಾಗ "ಶ್ರೀಮಂತನೊಬ್ಬ ಕದ್ದ ಹಣದಿಂದ ಶ್ರೀಮಂತನಾದ ಬಗ್ಗೆ ಕೊಚ್ಚಿಕೊಂಬಾಗ, ಜನರನ್ನು ಕೊಂದು ರಾಜನಾದವನು, ತನ್ನ ವಿಜಯಗಳ ಬಗ್ಗೆ ಕೊಚ್ಚಿಕೊಂಬಾಗ, ಭ್ರಷ್ಟಾಚಾರದಿಂದ ಮೇಲೇರಿದ ಅಧಿಕಾರಿ ತನ್ನ ಅಧಿಕಾರದ ಬಗ್ಗೆ ಕೊಚ್ಚಿಕೊಂಬಾಗ ನಾಚಿಕೊಳ್ಳುವರೇ ಸ್ವಾಮಿ?[೧೩] – ಇಲ್ಲೆಲ್ಲಾ ಬೇರೊಬ್ಬರ ಹಣ ತಿಂದು ಶ್ರೀಮಂತರಾದವರು, ಜನರಿಗೆ ಮೋಸಮಾಡಿ ರಾಜ–ಮಂತ್ರಿ–ಆಗುವುದು, ಭ್ರಷ್ಟಾಚಾರದ ಭೂತಗಳ ಕೃತ್ಯ – ಇವೆಲ್ಲಾ ಒಬ್ಬ ವೇಶ್ಯೆ ತನ್ನ ಶೀಲ ಮಾರಿಕೊಂಡು ಹಣಸಂಪಾದನೆ ಮಾಡುವುದಕ್ಕಿಂತ ಕೀಳಾದುದೆಂಬುದನ್ನು ನಾಟಕಕಾರರು ಬಿಂಬಿಸುವುದರ ಜೊತೆಗೆ, ಅವತ್ತಿನ ಸಮಸಮಾಜದ ಆಚರಣೆಯ ಬಗ್ಗೆ ಪ್ರತಿಪಾದಿಸಿದ್ದಾರೆ.

೪.೧.೩. ದೇವ–ದೇವಾಲಯ – ಪರ್ಯಾಯ ಮಾರ್ಗೋಪಾಯತತ್ತ್ವ

ಪರಂಪರಾಗತವಾಗಿ ಜನರ ಬದುಕಿನೊಂದಿಗೆ ಬೆಸೆದುಕೊಂಡು ಬಂದ ದೇವಸ್ಥಾನವೆಂಬ ಸಂಸ್ಥೆಯನ್ನು, ನಿಜವಾದ ದೈವಭಕ್ತರೂ, ಧರ್ಮಶ್ರದ್ಧೆಯುಳ್ಳವರೂ

ಆದ ಶಿವಶರಣರು ಮೊತ್ತಮೊದಲು ವೈಚಾರಿಕ ಚಿಕಿತ್ಸೆಗೆ ಒಳಪಡಿಸಿ ಅದನ್ನು ಆಧ್ಯಾತ್ಮಿಕ ನೆಲೆಯಲ್ಲಿ ಪುನರ್ ವ್ಯಾಖ್ಯಾನಿಸಿದ ರೀತಿ, ಭಾರತೀಯ ಧಾರ್ಮಿಕ ಇತಿಹಾಸದಲ್ಲಿಯೇ ಒಂದು ದಿಟ್ಟ ಹೆಜ್ಜೆಯಾಗಿದೆ. ವಚನಕಾರರಿಗೆ ಹಿನ್ನೆಲೆಯಾದ ಭಾರತೀಯ ಶೈವಧರ್ಮವಾಗಲಿ, ಅವರಿಗೆ ಮನೋಧರ್ಮದಲ್ಲಿ ಹತ್ತಿರವಾದ ತಮಿಳುನಾಡಿನ ಅರವತ್ತಮೂವರು ಪುರಾತನರ ನಿಲುವಾಗಲಿ, ದೇವಸ್ಥಾನ ಕೇಂದ್ರಿತವಾದದ್ದು. ಆದರೆ ಶರಣರು 'ದೇಹವೇ ದೇವಾಲಯ' ಸ್ಥಾವರಕ್ಕಳಿವಿಲ್ಲ' ಎಂದು ದೇವರ ಕಲ್ಪನೆಯನ್ನು ದೇವಾಲಯದಿಂದ ಮನುಷ್ಯನ ಶರೀರಕ್ಕೆ, ಸ್ಥಾವರಲಿಂಗದಿಂದ ಇಷ್ಟಲಿಂಗಕ್ಕೆ ಸ್ಥಳಾಂತರಗೊಳಿಸಿದರು. ಆ ಮೂಲಕ ಕೆಲವೇ ಉನ್ನತ ವರ್ಗದವರಿಗೆ ಮೀಸಲಾದ ದೇವಾಲಯಗಳನ್ನು, ಇಡೀ ಮನುಕುಲದ ಮಾನವ ದೇಹಗಳಿಗೆ "ಅಂಗದ ಮೇಲೆ ಲಿಂಗಧರಿಸಿ" ವರ್ಗಾಯಿಸಿ ಪಾವಿತ್ರ್ಯತೆಯನ್ನು ತಂದು ಕೊಡುವ ಮೂಲಕ ಸಮಾನತೆ ತತ್ತ್ವವನ್ನು ಆಚರಣೆಯಲ್ಲಿ ತಂದುದು ಒಂದು ದೊಡ್ಡ ವೈಚಾರಿಕ ಕ್ರಾಂತಿಯೇ ಆಗಿದೆ.

ಇನ್ನು ಶರಣರ 'ದೇವರ' ಕಲ್ಪನೆ ಮೂಲತಃ ಪರಂಪರಾಗತವಾದ ದೇವರ ಕಲ್ಪನೆಯಿಂದ ವಿಭಿನ್ನವಾದದ್ದು. ಒಂದೆಡೆ ಪುರಾಣೋಕ್ತವಾದ ಶಿವನ ಮೂರ್ತಿಪೂಜೆ ಮತ್ತು ಶಿವನ ಸಂಕೇತವಾದ ಲಿಂಗ(ಸ್ಥಾವರಲಿಂಗ) ಪೂಜೆ – ಈ ಎರಡೂ ರೂಢಿಯಲ್ಲಿದ್ದವುಗಳು, ದೇವಸ್ಥಾನ ಕೇಂದ್ರಿತವಾದ ಈ ಎರಡೂ 'ರೂಪ'ಗಳನ್ನು ದೇವಸ್ಥಾನ ಸಮೇತ ನಿರಾಕರಿಸಿ, ದೈವತ್ವದ ಕಲ್ಪನೆಯ ಸಾಂಕೇತಿಕ ರೂಪವನ್ನಾಗಿ ಇಷ್ಟಲಿಂಗವನ್ನು ಸ್ವೀಕರಿಸಿ ತಮ್ಮ ಕೊರಳಲ್ಲಿ ಕಟ್ಟಿಕೊಂಡರು. ಜನರ ನಂಬಿಕೆಗಳನ್ನು ಹಿಡಿದು ಪೂಜೆಗೊಳ್ಳುತ್ತಿದ್ದ ಬಹುಸಂಖ್ಯಾತ ಕ್ಷುದ್ರದೇವತೆಗಳನ್ನು 'ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲುದೈವ' ಎಂದು ಪೂಜಿಸುವ ಪ್ರವೃತ್ತಿಗಳನ್ನೂ, ಆಗಲೇ ನೆಲೆನಿಂತ ದೇವಾಲಯಗಳಿಗೆ ದಾನದತ್ತಿಗಳನ್ನು ಬಿಡುವ, ಹೊಸ ದೇವಸ್ಥಾನಗಳನ್ನು ಕಟ್ಟಿಸಿ ಲಿಂಗ, ಪ್ರತಿಷ್ಠಾಪನೆ ಮಾಡಿಸುವ 'ಉಳ್ಳವರ' ಧಾರ್ಮಿಕ ಕಾರ್ಯಗಳನ್ನು ಖಂಡಿಸಿ ಸಮಾಜದ ಮನಸ್ಸನ್ನು 'ಏಕದೈವ' ಕೇಂದ್ರಕ್ಕೆ ತಂದದ್ದು ಸಾಮಾಜಿಕ ಹಾಗೂ ಧಾರ್ಮಿಕವಾಗಿ ಸಂಘಟನಾ ದೃಷ್ಟಿಯಿಂದ ಬಹುಮುಖ್ಯ ಹೆಜ್ಜೆಯಾಗಿದೆ.

ಈ ಐದೂ ನಾಟಕಗಳಲ್ಲಿ ಈ ದೇವರು ದೇವಾಲಯಗಳ ನಿರಾಕರಣೆ ತತ್ತ್ವಗಳು ಪ್ರತಿಪಾದಿತಗೊಂಡಿರುವುದನ್ನು ಅಧ್ಯಯಿಸಬಹುದಾಗಿದೆ. 'ಸಂಕ್ರಾಂತಿ' ನಾಟಕದಲ್ಲಿ ಬಿಜ್ಜಳನಿಗೆ ಬಸವಣ್ಣನ ಬಗ್ಗೆ ದೂರುವ ಶಾಸ್ತ್ರಿಯೊಬ್ಬ! "ಬಸವಣ್ಣನವರು ಭಂಡಾರವಹಿಸಿಕೊಂಡ ಮೇಲೆ ..... ತ್ರಿಪುರಾಂತಕ ದೇವಾಲಯದಲ್ಲಿ ಹದ್ದುಕಾಗೆಗಳು ಗೂಡುಕಟ್ಟಿಕೊಂಡಿವೆ. ಬ್ರಹ್ಮದೇವಾಲಯದ ಛಾವಣಿ ಛಿದ್ರವಾಗಿದೆ. ನಾರಸಿಂಹ ಕಟ್ಟಡ

ಶಿಥಿಲಗೊಂಡು ಮುಂದಿನ ಮಳೆಗಾಲದಲ್ಲಿ ನೆಲಸಮವಾಗಲಿದೆ.[೧೩] ಎಂದು ದೇವಾಲಯಗಳ ದುಸ್ಥಿತಿಗಳ ಬಗ್ಗೆ ಕೊಡುವ ಚಿತ್ರಣದಿಂದ ಇವರ ದೇವಾಲಯ ನಿರಾಕರಣೆ ತತ್ತ್ವದ ಆಚರಣೆಯನ್ನು ಕಾಣಬಹುದು. ಬಸವಣ್ಣನೇ ಬಿಜ್ಜಳನಿಗೆ ಸಾಮಾನ್ಯ ಜನರ ನೋವಿಗೆ ಸ್ಪಂದಿಸುವ ಕುರಿತು ಹೇಳುವಾಗ"......ಚನ್ನಕೇಶವನ ಮುತ್ತಿನಹಾರ ಅನೇಕರ ಕಂಬನಿ ಒರಸಬಲ್ಲದು...... ಈ ರಾಜ್ಯದ ಪ್ರತಿಯೊಂದು ವಿಗ್ರಹವೂ ಬಡಜನರ ಮೂಕವೇದನೆಯ ಘನರೂಪವಾಗಿದೆ.[೧೪] ಎಂದು ಹೇಳುತ್ತಾರೆ. ಇಲ್ಲಿ ದೇವರುಗಳಿಗೆ ದಾನದತ್ತಿ ಬಿಡುವ, ಹೊಸ ದೇವಾಲಯಗಳನ್ನು ಕಟ್ಟಿಸುವ ಉಳ್ಳವರ ಧಾರ್ಮಿಕ ಕಾರ್ಯಗಳನ್ನು ಖಂಡಿಸಿರುವುದನ್ನು ನಾಟಕಕಾರರು ಪ್ರತಿಬಿಂಬಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ಮಹಾಚೈತ್ರ' ನಾಟಕದಲ್ಲಿ ಕ್ರಮಿತನೊಬ್ಬ ಹೇಳುವ 'ಹತ್ತಾರು ಕರಗಳನ್ನು ಮಂದಿರದ ಮೇಲೆ ಹೇರಿದ' ಎಂಬಲ್ಲಿ ಬಸವಣ್ಣನ 'ಸಂಕ್ರಾಂತಿ' ನಾಟಕದಲ್ಲಿನ ವಿಚಾರಯುಕ್ತ ಮಾತು ಇಲ್ಲಿ ಕಾರ್ಯರೂಪಕ್ಕಿಳಿದಿದ್ದು, ದೇವಾಲಯಗಳ ಮೇಲೆ ತೆರಿಗೆ ಹಾಕುವುದರಿಂದ ರಾಜ್ಯಾದಾಯ ಹೆಚ್ಚಿಸಿ, ಸಾಮಾನ್ಯ ಜನರ ಏಳಿಗೆಗೆ ಬಳಸುವ ಹಾಗೂ ವಲಸೆಗಾರರ ಮೇಲಿನ ತೆರಿಗೆ ಬಿಲ್ಕೊಡೆಯನ್ನು ತೆಗೆದುಹಾಕಿ ಸ್ಪಂದಿಸಿದ್ದನ್ನೂ ಕಾಣುತ್ತೇವೆ. ಆದರೆ ಬಸವನಿಲ್ಲದ ಕಲ್ಯಾಣದ ಪರಿಸ್ಥಿತಿಯ ಬಗ್ಗೆ ಮಾತಾಡುತ್ತಾ ನಾಗಶೆಟ್ಟಿ ಮತ್ತು ಚಂದ್ರಶೆಟ್ಟಿ ಹೇಳುವ "ತ್ರಿಪುರಾಂತಕ ದೇವಸ್ಥಾನದಲ್ಲಿ ಪ್ರತಿನಿತ್ಯ ದೀಪಾಲಂಕಾರ..... ಈವಾಗ ಅದು ಕತ್ತಲಿನ ಆಗರ" ಎಂಬಲ್ಲಿ ನಾಟಕಕಾರರು ಗೊಂದಲಕ್ಕೀಡುಮಾಡುತ್ತಾರೆ. ಇದೇ ದೇವಾಲಯದ ಬಗ್ಗೆ 'ಸಂಕ್ರಾಂತಿ' ನಾಟಕದಲ್ಲಿ ಹದ್ದುಕಾಗೆಗಳು ಗೂಡು ಕಟ್ಟಿಕೊಂಡಿದ್ದು, ಇಲ್ಲಿ 'ಪ್ರತಿನಿತ್ಯ ದೀಪಾಲಂಕಾರ' ಆಗಿರುವುದು ವಿಭಿನ್ನ ದೃಷ್ಟಿಕೋನವನ್ನು ತಿಳಿಸುತ್ತದೆ. ಬಸವಣ್ಣನಿಲ್ಲದ ಕಲ್ಯಾಣದ ಅಂಧಕಾರವನ್ನು ಹೇಳಲು ಲೇಖಕರು ಈ ರೀತಿ ಹೇಳಿಸಿರಬಹುದು.

'ತಲೆದಂಡ' ನಾಟಕದಲ್ಲಿ ಬಸವಣ್ಣ ಜೈನರಿಗೂ – ಶರಣರಿಗೂ ಸಂಘರ್ಷವಾಗಿದ್ದನ್ನು ತಡೆಯಲು ಮಡ್ಡೂರಿಗೆ ಹೊರಟು ಜಗದೇವನ ಮನೆಗೆ ಹೋಗುತ್ತಾರೆ. ಜಗದೇವನಿಗೆ ಮಡ್ಡೂರಿನಲ್ಲಿ ಜೈನ ವಿಗ್ರಹಗಳನ್ನು ತಮ್ಮವರು ಒಡೆದುಹಾಕಿ ಶಿವಾಲಯ ಮಾಡುವುದಕ್ಕೆ ಹೊರಟಿದ್ದಾರೆ. ತಾನು ಅದನ್ನು ತಡೆಯಬೇಕು ಎಂದು ಹೇಳಿ ಹೊರಡಲು, ಜಗದೇವನೂ ಅಲ್ಲಿಯ ಕೆಲಸವನ್ನು ಸಮರ್ಥಿಸಿದರೆ, ಬಸವಣ್ಣ, "ಆ ಹಿಂಸೆ ಕಲ್ಲು–ಮಣ್ಣು–ಗಚ್ಚಿನ ದೇವಾಲಯದ ಹೆಸರಿನಲ್ಲಿ ನಡೆಯವುದಂತೂ ಮೂರ್ಖತನದ ಪರಮಾವಧಿ. ಈ ದೇಹ! ಇದ ದೇವಾಲಯ,

ಕಾಲೇ ಕಂಭ, ದೇಹವೇ ದೇಗುಲ, ಶಿರವೇ ಹೊನ್ನ ಕಲಶ"[೧೫] ಎಂದು ಬೋಧಿಸಿ ಹೊರಡುವುದು ಶರಣರ ದೇವಾಲಯ ನಿರಾಕರಣೆ ತತ್ತ್ವವನ್ನು ಧ್ವನಿಸಿದ್ದಾರೆ. ಜೊತೆಗೆ "ದೇವಾಲಯ ಸಂಸ್ಕೃತಿಯಲ್ಲಿ ಬೆಳೆದು ಬಂದ ಸಮಾಜದ ಮನಸ್ಸಿಗೆ ದೇವಾಲಯ ನಿರಾಕರಣೆಯಿಂದ ಉಂಟಾಗುವ ಶೂನ್ಯವನ್ನು ತುಂಬಲು 'ದೇಹವೇ ದೇವಾಲಯ' ಎಂಬ ಪರ್ಯಾಯವನ್ನು ವಚನಕಾರರು ಸೂಚಿಸಿದ್ದಾರಷ್ಟೇ? ಈ ಸೂಚನೆಯೂ ಹೊಸದೇನಲ್ಲ. 'ದೇಹೋ ದೇವಾಲಯಃ ಪ್ರೋಕ್ತಃ ಜಲವೋ ದೇವಃ ಸನಾತನಃ" ಎಂಬ ಉಕ್ತಿಯೊಂದಿದೆ. ಇದು ಎಷ್ಟು ಪ್ರಾಚೀನವೋ ತಿಳಿಯದು. ಆದರೂ ಇದು ಒಂದು ಕಲ್ಪನೆಯೋ ಆಶಯವೋ ಆಗಿದೆಯೇ ಹೊರತು ಶಿವಶರಣರಲ್ಲಿಯಂತೆ ಒಂದು ಪ್ರಾಯೋಗಿಕ ತಾತ್ವಿಕ ನಿಲುವಾಗಿ ಎಂದಾದರೂ ಅನುಭೂತವಾಗಿತ್ತೆಂದು ಹೇಳಲುಬಾರದು"[೧೬] ಆಚರಣೆಗೆ ತಂದದ್ದನ್ನು ಕಾರ್ನಾಡರೂ ಧ್ವನಿಸಿದ್ದಾರೆ.

'ಶಿವರಾತ್ರಿ' ನಾಟಕದಲ್ಲಿ ಮುಗ್ದಸಂಗಯ್ಯನ ಮೂಲಕ ಶಿವರಾತ್ರಿಯಿಂದ ಒಬ್ಬ ವೇಶ್ಯೆಯ ಮನೆಯಲ್ಲಿ ಲಿಂಗಪೂಜೆ ಮಾಡಿಸುವುದು ದೇವರು ಸರ್ವಾಂತರ್ಯಾಮಿ, ದೇವಾಲಯ ಮಾತ್ರ ಅವನ ನೆಲೆಯಲ್ಲವೆಂಬುದನ್ನು ಸಾಂಕೇತಿಕವಾಗಿ ಬಿಂಬಿಸಿದ್ದಾರೆ.

ದೇವರ ಬಗ್ಗೆಯೂ ಇಲ್ಲಿ ಬಿಜ್ಜಳನ ಪದ್ಧತಿಯನ್ನು ವಿರೋಧಿಸಿ ಮಾತನಾಡುತ್ತಾ ಬಸವಣ್ಣ "ನಿಮ್ಮ ಪದ್ಧತಿಯ ದೇವರು ಕೆಲವರನ್ನು ಮುಟ್ಟುತ್ತದೆ. ಕೆಲವರನ್ನು ದೂರ ಇಡುತ್ತದೆ. ನನ್ನ ದೇವರೇ ಆಗಿದ್ದರೆ ಇಬ್ಬರನ್ನೂ ಮುಟ್ಟಬೇಕು...... ಇಲ್ಲದಿದ್ದರೆ ನನಗೆ ಆ ದೇವರೇ ಬೇಡ"[೧೭] ಎಂದು ಹೇಳುವಲ್ಲಿ ಭೇದವಿಲ್ಲದ ದೇವರನ್ನು ಶರಣರು ಸ್ವೀಕರಿಸಿದ್ದಾರೆಂಬುದು ನಿರೂಪಿತವಾಗಿದೆ.

೪.೨. ಪ್ರತಿಲೋಮ ವಿವಾಹ

ಈ ನಾನೇ ಬಿಜ್ಜಳ, ಸಂಕ್ರಾಂತಿ, ಮಹಾಚೈತ್ರ, ತಲೆದಂಡ, ಶಿವರಾತ್ರಿ ನಾಟಕಗಳಲ್ಲಿ ಪ್ರಸ್ತುತವಾಗಿರುವ ವರ್ಣಸಂಕರದ ಸಂಘರ್ಷಕ್ಕೆ ಕಾರಣವಾದ ಪ್ರತಿಲೋಮ ವಿವಾಹ ಹೊಸ ಆಯಾಮವನ್ನು ಪಡೆದಿರುವುದನ್ನು ಕಾಣಬಹುದು. 'ನಾನೇ ಬಿಜ್ಜಳ' ನಾಟಕದಲ್ಲಿ 'ಬಸವೇಶ್ವರ' ನಾಟಕ ಮಾಡುವಾಗ ರಾಣಿಯ ಪಾತ್ರ ಹಾಕಿದ್ದ 'ಪದ್ಮಾವತಿ'ಯ ಪಾತ್ರಧಾರಿ ಪದ್ಮಾವತಿ ಹುಡುಗಿಯ ಹೆಗಲ ಮೇಲೆ ಬಿಜ್ಜಳನ ಪಾತ್ರಧಾರಿ ಶ್ರೀಮಂತರ ಮಗ ಸುರೇಶ ದೇಶಾಯಿ ಕೈ ಹಾಕಿದ್ದೇ, ಬಸವ ಪಾತ್ರಧಾರಿಯಾಗಿದ್ದವನ ಸಿಟ್ಟಿಗೆ ಕಾರಣವಾಗಿ ಜಗಳವಾಗುತ್ತದೆ. ನಾಟಕ ನಿಲ್ಲುತ್ತದೆ.

ಈ ರೀತಿ ನಾಟಕಕಾರರು ಸಾಂಕೇತಿಕವಾಗಿ ಸೂಚಿಸಿದ್ದಾರಷ್ಟೇ. ಪ್ರತಿಲೋಮ ವಿವಾಹದ ಶಬ್ದವೇ ಇಲ್ಲವಾದರೂ ಓದುಗರಿಗೆ ಮುಂದಟ್ಟು ಮಾಡಿಸಿದ್ದಾರೆ; ಸಾಂಕೇತಿಕವಾಗಿ.

'ಸಂಕ್ರಾಂತಿ' ನಾಟಕದಲ್ಲಿ ನಾಟಕಕಾರರೇ ಮುನ್ನುಡಿಯಲ್ಲಿ "ಅಲ್ಲಯ್ಯ ಮಧುವಯ್ಯರ ಘಟನೆಯಲ್ಲಿ ನಡೆದ ಧಾರ್ಮಿಕ, ರಾಜಕೀಯ ಸಂದರ್ಭದ ದುರಂತವೊಂದು ಇಲ್ಲಿದೆ"[೧೮] ಎಂದು ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಹೊಲೆಯ ರುದ್ರ – ಬ್ರಾಹ್ಮಣ ಪಂಡಿತರ ಮಗಳು ಉಷಾಳ 'ಪ್ರೇಮಪ್ರಕರಣ', ಕೊನೆಯಲ್ಲಿ ಉಷಾಳ ಅಭಿಪ್ರಾಯದಲ್ಲಿ 'ಬಲಾತ್ಕಾರ' ಪ್ರಕರಣವಾಗಿ 'ರುದ್ರ'ನ ತಲೆದಂಡವಾಗುತ್ತದೆ. ಇಲ್ಲಿ ನಾಟಕಕಾರರು ಮಧುವಯ್ಯ – ಹರಳಯ್ಯರ ಸಂಬಂಧವನ್ನು ಬೇರೆ ಹೆಸರು ಬಳಸಿ ತಂದಿದ್ದು, ಪ್ರಸ್ತುತಕ್ಕೂ ದೃಷ್ಟಿ ಬೀರುವಂತೆ ನಿರೂಪಿಸಿರುವುದು ಕಂಡುಬರುತ್ತದೆ.

'ಮಹಾಚೈತ್ರ' ನಾಟಕದಲ್ಲಿಯಂತೂ ತುಂಬಾ ಪರಿಣಾಮಕಾರಿಯಾಗಿಯೇ ನಾಟಕಕಾರರು ಇದನ್ನು ನಿರೂಪಿಸಿದ್ದಾರೆ. ಪ್ರತಿಲೋಮ ವಿವಾಹದಿಂದಾಗಿಯೇ ವರ್ಣಸಂಕರದ ಸಂಘರ್ಷ ನಡೆದು ಬಸವಣ್ಣ ಕಲ್ಯಾಣ ತೊರೆದು ಹೋದ ಮೇಲಿನ ಸಂದರ್ಭದಲ್ಲಿ ವಿವಿಧ ಪಾತ್ರಗಳ ಮೂಲಕ ಹಳೆಯ ನೆನಪುಗಳೊಂದಿಗೆ ಈ ಪ್ರತಿಯೋಮ ವಿವಾಹದ ಬಗ್ಗೆ ದರ್ಶಿಸುತ್ತಾರೆ.

ನಾಗಶೆಟ್ಟಿ: ವರ್ಣಸಂಕರ? ಯಾರೊಂದಿಗೆ ವಿವಾಹ? **ಚಂದ್ರಶೆಟ್ಟಿ:** 'ಮಾದಿಗರ ಹರಳಯ್ಯನ ಮಗ 'ಶೀಲವಂತ' ವಿಪ್ರ ಮಧುವರತರ ಮಗಳು ಮಾಧವಿ[೧೯] ಇಲ್ಲಿ 'ಶೀಲವಂತ – ಮಾಧವಿ' ಹೆಸರುಗಳಿದ್ದರೆ 'ತಲೆದಂಡ'ದಲ್ಲಿ 'ಶೀಲವಂತ – ಕಲಾವತೀ' ಹೆಸರು ಬಳಸಲಾಗಿದೆ. 'ಶಿವರಾತ್ರಿ' ನಾಟಕದಲ್ಲಿ ಮಹಾಚೈತ್ರದಂತೆಯೇ ವರ್ಣಸಂಕರದ ವಿವಾಹ ನಡೆದು ಹೋಗಿದ್ದು ಶರಣರ ಬೇಟೆ ನಡೆಯುತ್ತದೆ. 'ಶೀಲವಂತನ ಮಾರಣಹೋಮ'ವಾಗುವಂತೆ ಚಿತ್ರಿಸಿದ್ದಾರೆ.

'ಮಹಾಚೈತ್ರ' ನಾಟಕದಲ್ಲಿ ವರ್ಣಸಂಕರ ವಿವಾಹದ ಪರಿಣಾಮ ಆಡುವ ಚಿಕ್ಕ ಮಕ್ಕಳ ಮನಸ್ಸಿನ ಮೇಲೂ ಹೇಗೆ ಪರಿಣಾಮ ಬೀರಿತ್ತೆಂಬುದನ್ನು ಅವರ ಆಟದ ಮೂಲಕವೇ ನಾಟಕಕಾರರು ಬಿಂಬಿಸಿದ್ದಾರೆ.

ಹುಡುಗ ೧: "ಲೇ ಬಸವಣ್ಣೋರು ಮದ್ವೆ ಮಾಡ್ರುದ್ರಲ್ಲಾ. ಆ ಉಡ್ಗ ಉಡ್ಗಿ ಎಸ್ರೇನಲಾ.

೨: ಸೀಲವಂತ ಮಾಧವಿ, ಇವರಿಗೂ ಅದೇ ಎಸ್ರಿಕ್ಕನ ನಾನೇ ಬಸವಣ್ಣೋರು.

ಹುಡುಗರು: ಸೀಲವಂತ ಮಾಧವಿ ಡುಂ ಡುಂ"[೨೦] – ಹೀಗೆ ಈ ವರ್ಣಸಂಕರದ ವಿವಾಹ ಬೀದಿಯಲ್ಲಾಡುವ ಮುಂದಿನ ಪ್ರಜೆಗಳಾದ ಮಕ್ಕಳ ಮನಸ್ಸಿನ ಮೇಲೂ ಪರಿಣಾಮ ಬೀರಿದ್ದನ್ನು ನಾಟಕಕಾರರು ಬಿಂಬಿಸಿದ್ದಾರೆ.

'ತಲೆದಂಡ' ನಾಟಕದಲ್ಲಿ ವರ್ಣಸಂಕರ ವಿವಾಹದ ಬಗ್ಗೆ ಬಸವಣ್ಣನಿಗೆ ತಿಳಿಯದೆ ಅವರವರೇ ಮದುವೆ ನಿಶ್ಚಯ ಮಾಡಿಕೊಂಡು ನಂತರ ಬಸವಣ್ಣನ ಆಶೀರ್ವಾದ ಪಡೆಯಲು ಬರುವುದು, ಬಸವಣ್ಣ ಆಶ್ಚರ್ಯ ವ್ಯಕ್ತಪಡಿಸುವುದು – ಹೊಸದೊಂದು ಸತ್ಯವನ್ನು ಕೆದಕಿದಂತಿದೆ. 'ಮಹಾಚೈತ್ರ' ನಾಟಕದಲ್ಲಿ ಚನ್ನಬಸವಣ್ಣ ವರ್ಣಸಂಕರ ವಿವಾಹ ಮಾಡಿದ್ದೇ ತಪ್ಪಾಯಿತು. "ನಾವು ಆತುರಪಟ್ಟೆವು, ಕಾಲ ಪಕ್ವವಾಗಿರಲಿಲ್ಲ. ಬಸವಣ್ಣನವರು ಮೊದಲೇ ಭಾವುಕರು. ಇದೆಲ್ಲಾ ಆಗಿಹೋಯಿತು"[೨೨] ಎಂಬ ಮಾತಿನಲ್ಲಿ ಚನ್ನಬಸವಣ್ಣನಿಗಿದ್ದ 'ಕಾಲಪಕ್ವವಾಗಿಲ್ಲ' ಎಂಬ ತಿಳಿವಳಿಕೆ 'ಭಾವುಕ'ನಾದ ಬಸವಣ್ಣನಿಗಿರಲಿಲ್ಲವೇ? ಎಂಬ ಪ್ರಶ್ನೆಗೆ ಉತ್ತರ 'ತಲೆದಂಡ'ದಲ್ಲಿ ಲಭಿಸುತ್ತದೆ; ಮದುವೆ ನಿಶ್ಚಯ ಮಾಡಿಕೊಂಡು ಬಂದವರಿಗೆ ಬಸವಣ್ಣ ಹೇಳುವ ಬುದ್ಧಿಮಾತಿನಿಂದ: ಇಲ್ಲಿತನಕ ನಾವು ಮಾಡಿದ್ದೆಲ್ಲ ತತ್ತ್ವದ ಮಾತಾತು. ಆದರ ಇದು, ಇದು – ಲಗ್ನ! ವರ್ಣಾಶ್ರಮದ ಬೇರಿಗೇ ಕೊಡಲಿ ಏಟು..... ನಮ್ಮ ಹೊಟ್ಟ್ಯಾಗ ಹುಟ್ಟಿರೋ ಈ ಮಕ್ಕಳ ಬಾಳೇವಿನ ಮಾತದ ನಾಳೆ ಅವರು ಮನಿ ಮಾಡಿದಲ್ಲಿ ಒಲಿ ಹೂಡಿದಲ್ಲಿ ಸನಾತನಿಗಳ ಹಗೆ ಬೆಂಬತ್ತಿ ಬರತದ.... ಒಂದು ದಿವಸ ಈ ವರ್ಣಾಶ್ರಮ ಧರ್ಮ ಈ ಜಾತಿ ವ್ಯವಸ್ಥೆ ಇವೆಲ್ಲ ಅಳಿದುಹೋಗತಾವ... ಪ್ರತಿಯೊಬ್ಬ ಮನುಷ್ಯ ಆಗತಾನ, ಅದು ತಪ್ಪಿದ್ದಲ್ಲ. ಆದರೆ ಆ ಯುಗ ಮೂಡಲಿಕ್ಕೆ ನಾವಿನ್ನೂ ಬಾಳ ದುಡೀಬೇಕು"[೨೩] ವಾಸ್ತವದ ಮತ್ತು ಭವಿಷ್ಯದ ಪ್ರಾಯೋಗಿಕ ಪರಿಜ್ಞಾನವಿದ್ದವ ಬಸವಣ್ಣ, ಆದರೆ ಚನ್ನಬಸವಣ್ಣ ಹೇಳುವಂತೆ ಭಾವುಕನಾಗಿ ಈ ವಿವಾಹಕ್ಕೆ ಒಪ್ಪಿಗೆ ಕೊಟ್ಟದ್ದು ಮಾತ್ರ ಸತ್ಯ. ಬಿಜ್ಜಳನ ಬೆಂಬಲದೊಂದಿಗೆ ವಿವಾಹ ನಡೆಯುತ್ತದೆ. ಮಿಕ್ಕ ನಾಲ್ಕೂ ನಾಟಕಗಳಲ್ಲಿಲ್ಲದ ವಿಶೇಷ ಇದು. ಬಿಜ್ಜಳನನ್ನು ಬಿಟ್ಟು 'ಸೋವಿದೇವ'ನನ್ನು ತಮ್ಮ ನಾಯಕನೆಂದು ಭಾವಿಸಿ ಬಿಜ್ಜಳನನ್ನು ಬಂಧಿಸುವ ಅರಮನೆಯ ಪಿತೂರಿಗೂಈ ವಿವಾಹವೇ ಕಾರಣವಾಗುವುದು ವಿಶೇಷವಾಗಿದೆ.

ಶಿವರಾತ್ರಿ ನಾಟಕದಲ್ಲಿ ನಡೆದುಹೋಗಿರುವ ವರ್ಣಸಂಕರದ ವಿವಾಹದ ಬಗ್ಗೆ ಬಿಜ್ಜಳ ಪ್ರಸ್ತಾಪಿಸಿದಾಗ ಬಸವಣ್ಣ ಅದೊಂದು ಸ್ವಜಾತಿ–ಸ್ವಧರ್ಮ ವಿವಾಹವೆಂದು ಸಿದ್ಧಪಡಿಸುವುದನ್ನು ಕಾಣುತ್ತೇವೆ. "ಅದು ವರ್ಣಸಂಕರದ ಮದುವೆಯಲ್ಲ ಪ್ರಭು, ಅನುಭವಮಂಟಪದ ಸಿದ್ಧಾಂತ, ಒಂದು ಕಾಲಕ್ಕೆ ಮಧುವರಸರು ಬ್ರಾಹ್ಮಣರಾದುದು

[illegible]

ನಿಜ. ಹರಳಯ್ಯನವರು ಶೂದ್ರರಾಗಿದ್ದುದೂ ನಿಜ. ಆದರೆ ಅವರು ಲಿಂಗದೀಕ್ಷೆ ತಗೊಂಡು ಶಿವಧರ್ಮದವರಾಗಿದ್ದಾರೆ..... ಶರಣರಿಗೆ ಜಾತಿಭೇದವಿಲ್ಲ. ಆದ್ದರಿಂದ ಅದು ಸ್ವಜಾತೀಯ ಸ್ವಧರ್ಮದ ವಿವಾಹ"[೨೪] ಎಂದು ಸಮರ್ಥಿಸುವಲ್ಲಿ ಶರಣಚಳವಳಿಯ "ಭಕ್ತರೊಂದು ಕುಲ ಭವಿಯೊಂದು ಕುಲ" ಎಂಬ ತತ್ತ್ವಕ್ಕೆ ಪೂರಕವಾಗಿದೆ.

ಹೀಗೆ ಐದೂ ನಾಟಕಗಳಲ್ಲಿಯೂ "ವರ್ಣಸಂಕರದ ವಿವಾಹ" ಪ್ರಸ್ತಾಪವಾಗಿದ್ದು ನಾಟಕಕಾರರ ದೃಷ್ಟಿಕೋನ ಮತ್ತು ಚಾರಿತ್ರಿಕ ಸತ್ಯದ ನೆರಳಲ್ಲಿ ಪ್ರತಿರೂಪಿಸಿದ್ದಾರೆ.

೪.೩. ಪುರಾಣ ಪ್ರತಿಮೆಗಳು

ಕವಿ ಅಥವಾ ಲೇಖಕ ಹೇಳಬೇಕಾದುದೆಲ್ಲವನ್ನು ಎಲ್ಲಾ ಸಂದರ್ಭಗಳಲ್ಲಿಯೂ ನೇರವಾಗಿ ಹೇಳುವುದಕ್ಕಾಗುವುದಿಲ್ಲ. ಹಾಗಾಗಿಯೇ ತಾನು ಪ್ರಕಟಗೊಳಿಸುವುದನ್ನು ಧ್ವನಿಪೂರ್ಣಗೊಳಿಸಲು 'ಪ್ರತಿಮೆ' (Poetic Image)ಗಳನ್ನು ಬಳಸುತ್ತಾನೆ. ಹೀಗೆ ರಾಚನಿಕವಾಗಿ ಬಳಸಿಕೊಂಡ ಪ್ರತಿಮೆಗಳು ಕಲ್ಪನೆಯ ಮೂಸೆಯಲ್ಲಿ ಮೂಡಿದ್ದೋ, ಐತಿಹಾಸಿಕವಾದದ್ದೋ, ಜಾನಪದೀಯವಾದುದೋ ಅಥವಾ ಪುರಾಣಮೂಲ-ವಾದುದೋ ಆಗಿರುತ್ತದೆ. ಪ್ರಸ್ತುತ ಈ ನಾಟಕಗಳಲ್ಲಿ ಜಾನಪದ ಮತ್ತು ಪುರಾಣ ಪ್ರತಿಮೆಗಳ ಅಳವಡಿಕೆಯನ್ನು ಕಾಣಬಹುದಾಗಿದೆ.

ಲಂಕೇಶರು ಸಂಕ್ರಾಂತಿ ನಾಟಕದಲ್ಲಿ ಅಗ್ನಿರಾಜನ ಕಥೆಯನ್ನು ಬಳಸಿ-ಕೊಂಡಿದ್ದಾರೆ. ಅವರೆ "ಈ ನಾಟಕದ ಅಗ್ನಿರಾಜನ ಕತೆ ವಡ್ಡಾರಾಧನೆಯದು, ನನ್ನ ಕೃತಿಗೆ ಸರಿಹೊಂದುವಂತೆ, ಸರಿಹೊಂದುವಷ್ಟು ಬಳಸಿಕೊಂಡಿದ್ದೇನೆ"[೨೫] ಎಂದಿದ್ದಾರೆ. ರೂಪವತಿಯೂ ಯೌವ್ವನಿಕೆಯೂ ಆದ ಕೃತಿಕೆಯನ್ನು ಅಗ್ನಿರಾಜ ವರಿಸಿ ಕೈಹಿಡಿದ ಕಥೆ ಅದು. ಹೀಗೆ ತಂದೆಯೇ ಮಗಳನ್ನು ವರಿಸಿದ್ದರಿಂದ ನಾಡು ಕ್ಷಾಮ, ಕ್ರೌರ್ಯಗಳಿಂದ ಅಲ್ಲೋಲಕಲ್ಲೋಲಕ್ಕೆ ಒಳಗಾಗಿ ಅವನತಿಯ ದಾರಿ ಹಿಡಿಯಿತೆಂಬ ಆಶಯವನ್ನು ಈ ಅಗ್ನಿರಾಜನ ಕತೆ ವಿವರಿಸುತ್ತದೆ. ಪ್ರಸ್ತುತ ನಾಟಕದಲ್ಲಿ ಬಿಜ್ಜಳ ಈ ಕಥೆಯನ್ನು ಕೇಳಿ ತಬ್ಬಿಬ್ಬಾಗುತ್ತಾನೆ. "ನನಗೆ ಕತೆ ಕೇಳಿದ ರಾತ್ರಿ ನಿದ್ರೆ ಬರಲಿಲ್ಲ. ನಾನು ನನ್ನ ಮಗಳನ್ನು ಮದುವೆಯಾಗಿಲ್ಲವೆಂಬುದನ್ನು ನೀವೆಲ್ಲ ಬಲ್ಲಿರಿ. ಆದರೆ ಕತೆ ಯಾಕೊ ನನ್ನ ಆಳಕ್ಕೆ ಇಳಿದಿತ್ತು. ನನ್ನ ಮನಸ್ಸನ್ನು ಅಲ್ಲಾಡಿಸಿತ್ತು"[೨೬] ಎಂದು ತನ್ನ ಮನೋಸಂಘರ್ಷವನ್ನು ವ್ಯಕ್ತಪಡಿಸುತ್ತಾನೆ. ಈ ಬಿಜ್ಜಳ, ರಾಜನ ಅರಾಜಕತೆಯನ್ನು, ಅವನತಿಯನ್ನು ತಾನೇ ಕಣ್ಣಾರೆ ನೋಡುವಂತೆ ಆ ಕನಸು ಮುಗಿದ ಮೇಲೆ ಅತ್ಯಾಚಾರದ ಸುದ್ದಿಯನ್ನು ಕೇಳುತ್ತಾನೆ. ಹೀಗೆ ಸಾಂಕೇತಿಕ ಪರಿಕಲ್ಪನೆಯಿಂದ ನಾಟಕದ ಆಶಯವನ್ನು

ಸಂಕೀರ್ಣಗೊಳಿಸುತ್ತಾ ಬಿಜ್ಜಳನ ರಾಜ್ಯದಲ್ಲಾಗುವ ರುದ್ರನ ಬಲಿಯನ್ನು, ಅದರ ಪರಿಣಾಮವನ್ನು ಲಂಕೇಶರು ಅರ್ಥವತ್ತಾಗಿ ತೋರಿಸಿದ್ದಾರೆ.

ಎಚ್.ಎಸ್.ಶಿವಪ್ರಕಾಶರು ಪುರಾಣ, ಜಾನಪದ, ಐತಿಹಾಸಿಕ ಮೊದಲಾದ ಮೂಲಗಳಿಂದ ಪ್ರತಿಮೆಗಳನ್ನು ಅತ್ಯಂತ ಸಮರ್ಥವಾಗಿ ಬಳಸುವವರೆಂದೇ ಪ್ರಸಿದ್ಧರು. "ಮಹಾಚೈತ್ರದ ರಚನಕ್ರಮದಲ್ಲಿ ಚರಿತ್ರೆಯೊಂದಿಗೆ ಪುರಾಣವು ಬೆರೆತುಹೋಗಿರುವ ಪ್ರಕ್ರಿಯೆ ಅದ್ಭುತವಾಗಿದೆ. ಪುರಾಣಯುಗದ ದಕ್ಷಬ್ರಹ್ಮನನ್ನು – ಬಿಜ್ಜಳನನ್ನು ಏಕೀಭವಿಸಿ ಕಲ್ಪಿಸಿರುವ ಪ್ರಸಂಗ ಅರ್ಥವತ್ತಾಗಿದೆ. ನಗೆಯ ಮಾರಿತಂದೆ ವಿಶ್ವಾಮಿತ್ರನಾಗಿ ಬಹುರೂಪಿ ಚೌಡಯ್ಯ ಅಗಸ್ತ್ಯನಾಗಿ, ಕಲಕೇತಯ್ಯ ವಸಿಷ್ಠನಾಗಿ ತಾವು ಶಿವಗಣಂಗಳೆಂದು ತಾಂಡವ ನಾಟ್ಯದ ತವರಿನಲ್ಲಿ ಹುಟ್ಟಿದವರು ಎಂದು ವೀರಗಾಸೆ ಕುಣಿತವನ್ನು ಪ್ರಾರಂಭಿಸುತ್ತಾರೆ. ಬಹುರೂಪಿ ಚೌಡಯ್ಯ ವೀರಭದ್ರನಾಗಿದ್ದು ದಕ್ಷಬ್ರಹ್ಮಬಿಜ್ಜಳನನ್ನು ಕೊಲ್ಲುತ್ತಾನೆ. "ಬಿಜ್ಜಳ ದಕ್ಷಬ್ರಹ್ಮರಿಬ್ಬರೂ ಸರ್ವಾಧಿಕಾರದ ಸಂಕೇತವಾಗಿದ್ದು ಒಂದೊಂದು ಕಾಲಕ್ಕೆ ಒಬ್ಬೊಬ್ಬ ಅವತರಿಸುತ್ತಾರೆಂಬ ಇಂಗಿತ ಇಲ್ಲಿದೆ"[೨೭] ಇಲ್ಲಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುವ ಶಿವಗಣಂಗಳ ಈ ಸಂಕೇತ ಪ್ರತಿಮಾತ್ಮಕವಾಗಿದೆ. "ಹೀಗೆ ಸಾವಿಗೆ ಗುರಿಯಾಗುವ ಬಿಜ್ಜಳನ ಅಂತ್ಯ ಬರ್ಬರ ಶಿಶಿರ ಕೊನೆಗೊಳ್ಳುವಿಕೆಯಲ್ಲಿ ನವಚೈತ್ರದ ಉದಯವನ್ನು ಅತ್ಯಂತ ಮಾರ್ಮಿಕವಾಗಿ ಪ್ರಕಟಿಸುತ್ತದೆ"[೨೮] ಎಂದು ಕಿ.ರ.ನಾಗರಾಜ ನುಡಿದಿರುವುದು ಅಕ್ಷರಶಃ ಸತ್ಯ.

ಕಾರ್ನಾಡರ ಎಲ್ಲಾ ನಾಟಕಗಳೂ ಪ್ರತಿಮಾವಳಿಯ ಪಾತಳಿಯಲ್ಲೇ ಸಾಗುವುದನ್ನು ಕಾಣುತ್ತೇವೆ. ಉದಾ: ಯಯಾತಿ, ಹಯದವನ, ನಾಗಮಂಡಲ ಮೊದಲಾದವು. ಪ್ರಸ್ತುತ ತಲೆದಂಡ ನಾಟಕದಲ್ಲಿ ಅಷ್ಟೊಂದು ಪರಿಣಾಮಕಾರಿಯಾದ ಪ್ರತಿಮೆಗಳನ್ನೇನೂ ಉಳಿಸಿಲ್ಲ. ಆದರೂ ಬಸವಣ್ಣನನ್ನು ಪವಾಡಪುರುಷನಾಗಿ ಆರಾಧಿಸುವ ಜನರ ಮರುಳನ; ಹರಳಯ್ಯನ ತಾಯಿ ಅರಳಿ ದ್ಯಾಮವ್ವನ ಜಾತ್ರೆಯಲ್ಲಿ ನುಡಿ ಹೇಳಿದ್ದಕ್ಕಾಗಿ ಮಧುವರಸರ ಪತ್ನಿ ಲಲಿತಾಂಬೆ ಬೆಚ್ಚಿಬಿದ್ದು ತನ್ನ ಮಗಳನ್ನು ಶೀಲವಂತನಿಗೆ ಕೊಡಲು ಹಿಂಜರಿದದ್ದು; ನಾಟಕದ ಆರಂಭದಲ್ಲಿಯೇ ಸಾಂಬಶಿವಶಾಸ್ತ್ರಿ "ನಿನ್ನ ತಾಯಿಗೆ ಮಡಿ ಹಿಡಿಸಬೇಕು, ತಲೆ ಮಾಡಿಸಬೇಕು" ಎಂದು ಜಗದೇವನಿಗೆ ಹೇಳುವುದು – ಇಲ್ಲೆಲ್ಲ ಕರ್ಮಮೂಲ ಸೈದ್ಧಾಂತಿಗಳಾದ ಭಾರತೀಯರ ಅಂಧಶ್ರದ್ಧೆಯನ್ನು ಮೂಢನಂಬಿಕೆಯನ್ನು, ನಾಟಕಕಾರರು ಸಾಂಕೇತಿಕವಾಗಿ ತೆರೆದಿಡುವ ಪ್ರಯತ್ನಮಾಡಿದ್ದಾರೆ.

'ಶಿವರಾತ್ರಿ' ನಾಟಕದಲ್ಲಿ ಬರುವ ನಗರದೇವತೆಯಾದ ಹುಚ್ಚೀ ಪಾತ್ರ ಹಾಗೂ ವೇಶ್ಯೆಯ ಮನೆಯಲ್ಲಿ ಶಿವರಾತ್ರಿಯಂದು ಲಿಂಗಪೂಜೆ ಮಾಡಿಕೊಳ್ಳಲು ಬರುವ 'ಮುಗ್ಧಸಂಗಯ್ಯ' ಕಾಲ್ಪನಿಕವಾದವುಗಳಾಗಿವೆ. ಕೊನೆಯಲ್ಲಿ ಬಿಜ್ಜಳ "ಕೊಂಡೆಯರು

ನನ್ನಲ್ಲಿ ಇಂದ್ರನನ್ನು ಸೃಷ್ಟಿಸಿ 'ಇಕೋ ರಾಕ್ಷಸ–ಸಂಹಾರ ಮಾಡಿ ಪ್ರಭು' ಎಂದು ಮುಗ್ಧನನ್ನು ಎದುರು ಹಿಡಿದರು. ಸಂಹರಿಸಿ ನೋಡಿದರೆ ಮುಗ್ದ ಸಂಗಯ್ಯನನ್ನು ಕೊಂದುಹಾಕಿದ್ದೆ"[೨೯] ಎಂದು ಹೇಳುವಲ್ಲಿ ಕೊಂಡೆಯರ ಚಾಡಿಮಾಡಿ ಮಾತಿನಿಂದ ಉಂಟಾದ ಕ್ರಾಂತಿಯಲ್ಲಿ ಮುಗ್ಧರ ಹತ್ಯೆಯಾಗಿದ್ದನ್ನು ಮುಗ್ದಸಂಗಯ್ಯನ ಪ್ರತಿಮೆ ಮೂಲಕ ಸಂಕೇತಿಸಿದ್ದಾರೆ.

ಒಟ್ಟಾರೆ ಈ ಸಾಂಕೇತಿಕ ಪರಿಕಲ್ಪನೆ, ಮನುಷ್ಯನ ಮೂಲಗಳ ಮನೋವೇದನೆಯ ಸಂಘರ್ಷವನ್ನು ನಿಚ್ಚಳವಾಗಿ ದಾಖಲಿಸುತ್ತದೆ.

೪.೪. ರಂಗಕೃತಿಗಳಾಗಿ : ಸ್ಥೂಲಸಮೀಕ್ಷೆ:

ಪಿ.ಲಂಕೇಶರ 'ಸಂಕ್ರಾಂತಿ' ನಾಟಕವು ರಂಗಭೂಮಿಯಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡ ನಾಟಕ. ಇದಕ್ಕಿಂತಲೂ ಐತಿಹಾಸಿಕ ಪಾತ್ರಗಳಿಂದಲೇ ಕೂಡಿರುವ 'ಮಹಾಚೈತ್ರ' ಅದ್ಭುತವಾದ ಯಶಸ್ವಿ ರಂಗಭೂಮಿ ಪ್ರದರ್ಶನ ಕಂಡಿದೆ. ಕಾರ್ನಾಡರ 'ತಲೆದಂಡ' ಇವೆಲ್ಲವುಗಳಿಗಿಂತ ವಿಶಿಷ್ಟವಾಗಿದ್ದು, ಪ್ರಕಟವಾದ ಸ್ವಲ್ಪ ಅವಧಿಯಲ್ಲೇ ಕನ್ನಡ ರಂಗಭೂಮಿಯನ್ನು ಆವರಿಸಿಕೊಂಡಿತು. ನಟರಂಗ'ದವರಿಗಾಗಿ ಸಿ.ಆರ್.ಸಿಂಹ, 'ರೂಪಾಂತರ' 'ತಂಡಕ್ಕೆ ಅಮರ, 'ತಿರುಗಾಟ'ದವರಿಗೆ ಚಿದಂಬರರಾವ್ ಜಂಬೆ ಮತ್ತು ಗದುಗಿನ ನಾಟಕ ತಂಡವೊಂದಕ್ಕೆ ಜಯತೀರ್ಥ ಜೋಷಿ ಈ ನಾಟಕವನ್ನು ನಿರ್ದೇಶಿಸಿ ಪ್ರಯೋಗಿಸಿದರು. ಮೈಸೂರಿನಲ್ಲಿ ಸಿಂಧುವಳ್ಳಿ ಅನಂತಮೂರ್ತಿಯವರೂ ಪ್ರಯೋಗಿಸಿದರು. ಪ್ರಕಟವಾದೊಡನೆ ನಾಲ್ಕಾರು ವಿವಿಧ ಪ್ರಯೋಗಗಳನ್ನು ಈ ನಾಟಕ ಪಡೆಯಿತೆಂಬುದು ಗಮನಾರ್ಹ ಸಂಗತಿ"[೩೦]

'ಶಿವರಾತ್ರಿ' ನಾಟಕವು ೨೦೧೧ರಲ್ಲಿ ಪ್ರಕಟವಾಗಿದ್ದು ಉತ್ತಮ ರಂಗಭೂಮಿ ನಾಟಕವಾಗುವ ಎಲ್ಲಾ ಲಕ್ಷಣಗಳನ್ನು ಒಳಗೊಂಡಿದೆ. ಈ ನಾಟಕವು ನಮ್ಮ ಸೃಜನಶೀಲ ನಿರ್ದೇಶಕರಲ್ಲಿ ಕೆಲವರನ್ನಾದರೂ ತನ್ನತ್ತ ಸೆಳೆದುಕೊಳ್ಳುತ್ತದೆ. ಎಂಬುದು ನನ್ನ ಆಶಯವಾಗಿದೆ. ವರ್ತಮಾನದ ಮೇಲೆ ಬೆಳಕು ಬೀರುವ ಈ ನಾಟಕ ರಂಗಭೂಮಿಯಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡರೆ ಉದ್ದೇಶಿತ ಆಶಯ ಈಡೇರಿದಂತಾಗುತ್ತದೆ.

'ನಾನೇ ಬಿಜ್ಜಳ' ನಾಟಕ ಸ್ವಲ್ಪ ಸಂಕೀರ್ಣವಾಗಿದ್ದರೂ ರಂಗಭೂಮಿಗೆ ತಂದು ಯಶಸ್ವಿಗೊಳಿಸಿರುವುದು ಶ್ಲಾಘನೀಯವಾಗಿದೆ.

ಹೀಗೆ ಒಂದೇ ವಸ್ತುವನ್ನು ಐವರು ನಾಟಕಕಾರರು ರಚಿಸುವಾಗ ಏಕತೆ ಮತ್ತು ಭಿನ್ನತೆಗಳು ಸಹಜವಾಗೇ ಬಂದಿರುವುದನ್ನು ಕಾಣುತ್ತೇವೆ.

ಅಡಿಟಿಪ್ಪಣಿಗಳು

೧. ಶಿವರಾಮಯ್ಯ : ಸಾಹಿತ್ಯ ಪರಿಸರ, ಪು. ೧೩೦, ೧೩೧.
೨. ಪಿ.ಲಂಕೇಶ್ : ಸಂಕ್ರಾಂತಿ : [ಮುನ್ನುಡಿಯಲ್ಲಿ]
೩. ಎಚ್.ಎಸ್.ಶಿವಪ್ರಕಾಶ್ : ಮಹಾಚೈತ್ರ, ೪ನೇ ಮುದ್ರಣ, ಮುನ್ನುಡಿ.
೪. ಅದೇ, ಪು. ೨೬, ೨೭.
೫. ಗಿರೀಶ್ ಕಾರ್ನಾಡ್ : ತಲೆದಂಡ, ಪು. ೨೮–೨೯.
೬. ಗಿರಡ್ಡಿ ಗೋವಿಂದರಾಜು : ಸಮಗ್ರ ವಿಮರ್ಶೆ : ಸಂ. ೧, ಪು. ೩೮೮.
೭. ಡಾ. ಹಾಲತಿ ಸೋಮಶೇಖರ, ಪಿ.ಲಂಕೇಶ್, ಪು. ೬೧.
೮. ಅದೇ, ಪು. ೬೧.
೯. ಎಚ್.ಎಸ್.ಶಿವಪ್ರಕಾಶ್, ಮಹಾಚೈತ್ರ, ಪು. ೧೫.
೧೦. ಅದೇ, ಪು. ೨೧೬–೨೭.
೧೧. ಗಿರೀಶ್ ಕಾರ್ನಾಡ್ : ತಲೆದಂಡ, ಪು. ೨೮–೨೯.
೧೨. ಅದೇ., ಪು. ೧೭, ೧೮.
೧೩. ಚಂದ್ರಶೇಖರ ಕಂಬಾರ, ಶಿವರಾತ್ರಿ, ಪು. ೫೨.
೧೪. ಪಿ.ಲಂಕೇಶ್, ಸಂಕ್ರಾಂತಿ, ಪು. ೪೭.
೧೫. ಅದೇ., ಪು. ೫೯.
೧೬. ಗಿರೀಶ್ ಕಾರ್ನಾಡ್ : ತಲೆದಂಡ, ಪು. ೩೩.
೧೭. ಜಿ.ಎಸ್.ಶಿವರುದ್ರಪ್ಪ: ಸಮಗ್ರ ಗದ್ಯ: ಪು. ೧೧೬.
೧೮. ಚಂದ್ರಶೇಖರ ಕಂಬಾರ, ಶಿವರಾತ್ರಿ, ಪು. ೬೫.
೧೯. ಪಿ.ಲಂಕೇಶ್, ಸಂಕ್ರಾಂತಿ, (ಮುನ್ನುಡಿಯಲ್ಲಿ)
೨೦. ಎಚ್.ಎಸ್.ಶಿವಪ್ರಕಾಶ್ : ಮಹಾಚೈತ್ರ, ಪು. ೬೭.
೨೧. ಅದೇ, ಪು. ೩೫.
೨೨. ಅದೇ, ಪು. ೧೨.
೨೩. ಗಿರೀಶ್ ಕಾರ್ನಾಡ್ : ತಲೆದಂಡ, ಪು. ೪೫.
೨೪. ಚಂದ್ರಶೇಖರ ಕಂಬಾರ, ಶಿವರಾತ್ರಿ, ಪು. ೬೩.
೨೫. ಪಿ.ಲಂಕೇಶ : ಸಂಕ್ರಾಂತಿ, ಮುನ್ನುಡಿಯಲ್ಲಿ.
೨೬. ಅದೇ., ಪು. ೫೨.
೨೭. ಡಾ. ಕೆ.ಮರುಳಸಿದ್ದಪ್ಪ : ಆಧುನಿಕ ಕನ್ನಡ ನಾಟಕಗಳು, ಪು. ೩೯೦.
೨೮. ಎಚ್.ಎಸ್.ಶಿವಪ್ರಕಾಸ್ : ಮಹಾಚೈತ್ರ, ಮುನ್ನುಡಿ, ಪು. XII.
೨೯. ಚಂದ್ರಶೇಖರ ಕಂಬಾರ, ಶಿವರಾತ್ರಿ. ಪು. ೮೫.
೩೦. ಡಾ. ಕೆ.ಮರುಳಸಿದ್ದಪ್ಪ : ಆಧುನಿಕ ಕನ್ನಡ ನಾಟಕಗಳು, ಪು. ೪೧೯.

ಉಪಸಂಹಾರ

೧೨ನೇ ಶತಮಾನದ ಶರಣಚಳವಳಿಯನ್ನು ವಸ್ತುವಾಗಿಸಿಕೊಂಡು ಅದರ ಹಿನ್ನೆಲೆಯಲ್ಲಿ ರಚಿತವಾಗಿರುವ ಈ ಐದು ಪ್ರಾತಿನಿಧಿಕ ನಾಟಕಗಳಾದ ನಾನೇ ಬಿಜ್ಜಳ, ಸಂಕ್ರಾಂತಿ, ಮಹಾಚೈತ್ರ, ತಲೆದಂಡ, ಶಿವರಾತ್ರಿ – ಗಳನ್ನು ಶರಣಕ್ರಾಂತಿಯ ಹಿನ್ನೆಲೆಯಲ್ಲೇ ಅಧ್ಯಯನ ಮಾಡುವ ಅವಶ್ಯಕತೆಯನ್ನು ಮನಗಂಡು ಮುಂದುವರಿಯಲಾಗಿದೆ. ೧೨ನೇ ಶತಮಾನವು ಹಲವು ವೈರುಧ್ಯಗಳ ನಡುವೆಯು ವೈಶಿಷ್ಟ್ಯಪೂರ್ಣವಾದ, ವೈವಿಧ್ಯಮಯವಾದ ಹೊಸ ತಿರುವುಗಳನ್ನು ಕಂಡ ಯುಗ ಇಡೀ ಜಗತ್ತಿಗೆ ಮಾದರಿಯಾಗುವಂತಹ ಮಹತ್ವದ ಸದಾಶಯಗಳನ್ನು ಸಂಗತಿಗಳನ್ನು ಬಿತ್ತರಪಡಿಸುವುದು ಈ ಯುಗದ ವೈಶಿಷ್ಟ್ಯವಾಗಿದೆ.

೧೨ನೇ ಶತಮಾನದ ಈ ಸದಾಶಯಗಳನ್ನು, ಸ್ಥಿತ್ಯಂತರಗಳನ್ನು ಅಭಿವ್ಯಕ್ತಿಪಡಿಸಲು ಇವರು ನಾಟಕ ಮಾಧ್ಯಮವನ್ನು ಆಯ್ದುಕೊಂಡಿದ್ದು ಔಚಿತ್ಯವಾಗಿದೆ. **'ಕಾವ್ಯೇಶು ನಾಟಕಂರಮ್ಯಂ'** ನಾಟಕಪ್ರಕಾರ ಇಡೀ ಸಾಹಿತ್ಯ ಪ್ರಕಾರಗಳಲ್ಲಿ ರಮ್ಯವಾದುದೆಂದು ಭರತನ ಕಾಲದಿಂದಲೂ ಒಪ್ಪಿತವಾಗಿರುವ ಸತ್ಯ. ನಾಟಕ ಕೃತಿಗಳಲ್ಲಿ ನಾಟಕಕಾರರು ವಿವಿಧ ಪಾತ್ರಗಳ ಮೂಲಕ ತಮ್ಮ ಅಭಿಪ್ರಾಯವನ್ನು ಸಮರ್ಥವಾಗಿ ಅಭಿವ್ಯಕ್ತಿಸುವಂತೆ ಇತರ ಪ್ರಕಾರಗಳಲ್ಲಿ ಸಾಧ್ಯವಾಗುವುದಿಲ್ಲ. ಇನ್ನು ಈ ಪ್ರಕಾರ ಏಕಕಾಲದಲ್ಲಿ 'ದೃಶ್ಯ ಮತ್ತು ಶ್ರವ್ಯ'ವಾದ್ದರಿಂದ ಸಹೃದಯ ವಲಯಕ್ಕೆ ಅಕ್ಷರಸ್ತ ಅನಕ್ಷರಸ್ತ ಭೇದವಿಲ್ಲದೆ ಸ್ವೀಕಾರವಾಗುವ ವಿಶೇಷತೆಯನ್ನು ಹೊಂದಿದೆ.

ಇಂತಹ ನಾಟಕ ಪ್ರಕಾರದ ಮೂಲಕ ಈ ಐವರು ನಾಟಕಕಾರರು – ಜಡಭರತ ಪಿ.ಲಂಕೇಶ, ಎಚ್.ಎಸ್.ಶಿವಪ್ರಕಾಶ್, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರರು – ಒಂದೇ ವಸ್ತುವನ್ನಾಧರಿಸಿ ಬರೆದ ನಾಟಕಗಳಲ್ಲಿ ಬರುವ ಶರಣ ಚಳವಳಿಯ ಮಹತ್ವದ ದೃಷ್ಟಿಯಿಂದ ಅಧ್ಯಯನ ಮಾಡಲಾಗಿದೆ.

ಬಸವಣ್ಣನಂಥ ಬುದ್ಧಿವಂತನನ್ನು ತನ್ನ ರಾಜ್ಯದ ಭಂಡಾರದ ಪ್ರಧಾನಿಯನ್ನಾಗಿ ಮಾಡಿಕೊಳ್ಳುವ ಬಿಜ್ಜಳನ ರಾಜಕೀಯ ನಿಪುಣತೆ, ಬಸವಣ್ಣನ ಜನಬಲ ಮತ್ತು ಸಮಾಜ ಸುಧಾರಣೆಯ ಕಾರ್ಯಗಳನ್ನು ಬಿಜ್ಜಳ ರಾಜನಾಗಿ ಸೈರಿಸಿಕೊಳ್ಳಬೇಕಾದ ಅನಿವಾರ್ಯತೆ. ಇವನ್ನು ಪ್ರಸ್ತುತದೊಂದಿಗೆ ಹೊಂದಿಸಿ ರಚಿಸಿರುವುದನ್ನು ಕಾಣುತ್ತೇವೆ. "ಸಾಮಾಜಿಕ ಸುಧಾರಣೆಯನ್ನು ಮಾಡಬಯಸುವವರನ್ನು ವ್ಯವಸ್ಥೆಯು ಎಷ್ಟು

ಜಾಣ್ಮೆಯಿಂದ ಬಳಸಿಕೊಳ್ಳಬಲ್ಲದು ಎನ್ನುವುದು ಬಿಜ್ಜಳನು ಬಸವಣ್ಣನನ್ನು ಮಂತ್ರಿಯನ್ನಾಗಿ ಉಳಿಸಿಕೊಂಡು ಬಳಸಿಕೊಳ್ಳುವ ವಿಧಾನದಲ್ಲಿ ಸ್ಪಷ್ಟವಾಗುತ್ತದೆ.[೧]

'ನಾನೇ ಬಿಜ್ಜಳ' ನಾಟಕದಲ್ಲಿ ನಾಟಕದೊಳಗೊಂದು ನಾಟಕ ಮಾಡಿಸಿದ ನಾಟಕಕಾರರು, 'ಪದ್ಮಾವತಿ ರಾಣಿಯ ಪಾತ್ರ ಮಾಡಿದ 'ಪದ್ಮಾವತಿ'ಯ ಹೆಗಲ ಮೇಲೆ ಕೈ ಹಾಕಿದ್ದೇ ಕಾರಣವಾಗಿ ಬಸವಪಾತ್ರಧಾರಿ ಬಿಜ್ಜಳ ಪಾತ್ರಧಾರಿಯ ಮೇಲೆ ಆಕ್ರಮಿಸುವುದು, ಇದಕ್ಕೆ ಕಾರಣ ಇತಿಹಾಸ ಎನ್ನುವುದರಲ್ಲಿ ನಾಟಕಕಾರರು ವರ್ಣಸಂಕರ ವಿವಾಹದ ಪರಿಣಾಮವನ್ನು ವಿಶೇಷವಾಗಿ ಸೂಚಿಸಿದ್ದಾರೆ. ನಾಟಕದೊಳಗೆ ನಡೆಯುವ ಈ ನಾಟಕದಲ್ಲಿ ಬಸವಣ್ಣನ ಪಾತ್ರವನ್ನು ಯಥಾವತ್ತಾಗಿ ಹರಿಹರನ ಬಸವರಾಜದೇವರ ರಗಳೆಯ ಪ್ರಕಾರವೇ ರೂಪಿಸಿದ್ದು ನಾಟಕ ವಿಶಿಷ್ಟ ನೆಲೆಯಲ್ಲಿ ಮುಂದುವರಿದು ಬಿಜ್ಜಳನೊಳಗಿನ ಹುಚ್ಚನನ್ನು ಹುಚ್ಚನೊಳಗಿನ ಬಿಜ್ಜಳನಲ್ಲಿ ನಾಟಕಕಾರರು ಕಂಡಿದ್ದಾರೆ. ಅವನಿಂದ ಮುಗ್ಧ ಪಾಟೀಲನನ್ನು ಕೊಲ್ಲಿಸಿರುವುದು ಸಾಂಕೇತಿಕವಾಗಿ ಅವನ ಹುಚ್ಚುತನವನ್ನು ಸಾಬೀತುಪಡಿಸಿದೆ. 'ಸಂಕ್ರಾಂತಿ' ನಾಟಕದಲ್ಲಿ 'ಬಸವ-ಬಿಜ್ಜಳ' ಪಾತ್ರಗಳ ಹೊರತಾಗಿ ಇತಿಹಾಸಕ್ಕೆ ಸಂಬಂಧಿಸಿದ ಯಾವ ಪುರಾವೆಯೂ ಸಿಗದಿದ್ದರೂ 'ಉಷಾ' ಎಂಬ ಬ್ರಾಹ್ಮಣಕನ್ಯೆ ಹಾಗೂ ಹೊಲೆಯರ ಜಾತಿಯ ರುದ್ರರ ಪ್ರೇಮಪ್ರಕರಣವೇ ಪ್ರಮುಖವಾಗಿದ್ದು ೧೨ನೇ ಶತಮಾನದ ವರ್ಣಸಂಕರದ ವಿವಾಹಕ್ಕೆ ತಾಳೆ ಹಾಕಲಾಗಿದೆ. ಚರಿತ್ರೆಯನ್ನು ಈ ರೀತಿ ಗ್ರಹಿಸಿದ ನಾಟಕಕಾರರಿಗೆ ಆ ಸಂದರ್ಭದ ಬಗ್ಗೆ ಒಂದು ನಿಲುವು ತೆಗೆದುಕೊಂಡು, ಚರಿತ್ರೆಯಿಂದ ಬಿಡಿಸಿಕೊಳ್ಳಲು ಸಾಧ್ಯವಾಯಿತು. ಒಂದು ಆರೋಗ್ಯಕರ ಆಶಯವನ್ನು ಚರ್ಚಿಸಲು ಸಾಧ್ಯವಾಗಿದೆ.

'ಮಹಾಚೈತ್ರ' ವಿಪುಲವಾದ ಚಾರಿತ್ರಿಕ ಪರಿಕರಗಳನ್ನು ಒಳಗೊಂಡಿದ್ದು, ಸಂಕ್ರಾಂತಿ ಬಿಟ್ಟಲ್ಲಿಂದ ಇದು ಆರಂಭವಾಗುತ್ತದೆ. 'ಸಂಕ್ರಾಂತಿ'ಯಲ್ಲಿ ಕಲ್ಯಾಣದಲ್ಲಿದ್ದ ಬಸವಣ್ಣ ಕೊನೆಗೆ ನಿರ್ಗಮಿಸುತ್ತಾನೆ. ಈ ರೀತಿ ಕಲ್ಯಾಣದಿಂದ ಬಸವಣ್ಣ ನಿರ್ಗಮಿಸಿದ ಮೇಲೆ ಕಲ್ಯಾಣದಲ್ಲಿ ಏನಾಗಿ ಹೋಯಿತು ಎಂಬುದನ್ನು ನಾಟಕಕಾರರು ತಿರುಗಿ ಕಣ್ಣುಮುಂದೆ ತಂದುಕೊಳ್ಳುತ್ತಾ ನಾಟಕ ಆರಂಭಿಸುತ್ತಾರೆ..... ಕಲ್ಯಾಣಕ್ರಾಂತಿ ಕೊನೆಮುಟ್ಟುತ್ತದೆ. 'ಸಂಕ್ರಾಂತಿ' ಮತ್ತು ತಲೆದಂಡದಲ್ಲಿ ಕಾಣುವ ವಿಶಾದ ಇಲ್ಲಿಲ್ಲ. ಒಂದು ರೀತಿಯ ಆಶಾವಾದ ಇಲ್ಲಿದೆ. ವ್ಯಕ್ತಿಗಳು ಇಲ್ಲವಾದರೂ ಅವರ ವಿಚಾರ ಉಳಿಯುತ್ತದೆ. ವ್ಯಕ್ತಿಗಿಂತ ತತ್ತ್ವಗಳು ಮುಖ್ಯ ಎಂಬುದನ್ನು ಪ್ರತಿಪಾದಿಸುತ್ತದೆ.

'ತಲೆದಂಡ' ನಾಟಕ ಇವೆಲ್ಲಕ್ಕಿಂತ ಭಿನ್ನವಾಗಿದ್ದು, ನಾಟಕಕಾರರು ಸಮಗ್ರ ಹಾಗೂ ಸಂಕೀರ್ಣವಾಗಿ ಆ ಕಾಲ ಮತ್ತು ಈ ಕಾಲದವರನ್ನು ಗ್ರಹಿಸಿದ್ದಾರೆ. ೧೨ನೇ ಶತಮಾನದ ವಸ್ತುವಿವರಗಳಲ್ಲಿ ಪ್ರಮುಖವಾದುದನ್ನು ಬಿಡದಿರುವಿಕೆಯ ಮೂಲಕ ಚರಿತ್ರೆಗೆ ಬದ್ಧವಾಗಿದ್ದಾರೆ. ಅನೇಕ ಹೆಸರುಗಳನ್ನು ಹಾಗೇ ಉಳಿಸಿಕೊಂಡಿದ್ದಾರೆ. ಹೀಗೆ ಒಂದು ರೀತಿ ಚರಿತ್ರೆಗೆ ಬದ್ಧವಾಗಿದ್ದು ಆಧುನಿಕ ಕಾಲಕ್ಕೆ ಸ್ಪಂದಿಸುವಂತೆ ಬರೆದಿರುವುದು ತಲೆದಂಡದ ವೈಶಿಷ್ಟ್ಯವಾಗಿದೆ. ಈ ಕೃತಿ ಏಕಕಾಲಕ್ಕೆ ಚರಿತ್ರೆ ಮತ್ತು ವರ್ತಮಾನವನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತದೆ. ನೇತಾರನ ತಲೆದಂಡವಾಗುವುದು ಇತಿಹಾಸಕ್ಕಿಡಿದ ಕನ್ನಡಿಯಾಗಿದೆ.

"ಬಸವಣ್ಣನವರ ಕಾಯಕ, ದಾಸೋಹವೇ ಮುಂತಾದ ಮೌಲ್ಯಗಳೊಂದಿಗೆ ಕಲ್ಯಾಣದಲ್ಲಿ ಮಾಡುತ್ತಿದ್ದ ಪರಿವರ್ತನೆಯ ಬಗ್ಗೆ ಬಿಜ್ಜಳನಿಗೆ ಅನುಮಾನ ಯಾಕೆ ಬಂತು? ಎನ್ನುವುದು ನನ್ನ ಚಿಂತನೆಯ ವಿಷಯವಾಗಿತ್ತು"[೨] ಎಂದು 'ಶಿವರಾತ್ರಿ' ನಾಟಕ ಬರೆಯಲು ಕಾರಣವನ್ನು ಅವರೇ ಹೇಳಿಕೊಂಡಿದ್ದಾರೆ. ಹೀಗಾಗಿ ನಾಟಕದ ಉದ್ದೇಶ ಸ್ಪಷ್ಟವಾಗುತ್ತದೆ. ಈ ನಾಟಕದಲ್ಲಿ ಅಂದಿನ ಕೆಳವರ್ಗದ ಶರಣರು ಚಳವಳಿಯನ್ನು ಹೇಗೆ ಗ್ರಹಿಸಿದರು? ಆ ಚಳವಳಿಯ ಯಾವ ಯಾವ ಮೌಲ್ಯಗಳು ಅವರ ಬದುಕನ್ನು ಪ್ರವೇಶಿಸಿದವು? ಬಸವಣ್ಣ – ಬಿಜ್ಜಳ ಇವರಿಬ್ಬರ ನಡುವೆ ನಿರ್ಮಾಣವಾದ ಬಿರುಕಿನ ಸ್ವರೂಪವೇನು? ಎಂಬುವು ಈ ನಾಟಕ ಎತ್ತುವ ಮತ್ತು ಉತ್ತರಿಸಲಪೇಕ್ಷಿಸುವ ಪ್ರಶ್ನೆಗಳಾಗಿವೆ. ಕೆಲವು ಪಾತ್ರಗಳು ವಾಸ್ತವ ನೆಲೆಯಲ್ಲಿದ್ದರೆ ಮುಗ್ಧ ಸಮಗಯ್ಯ, ಹುಚ್ಚಿಯಾದ ಕಲ್ಯಾಣನಗರ ಲಕ್ಷ್ಮಿ ಮುಂತಾದವರ ಪಾತ್ರಗಳು ವಾಸ್ತವ ಸಾಂಕೇತಿಕ ನೆಲೆಗಳ ನಡುವೆ ವರ್ತಿಸುತ್ತಿವೆ. ಅರಮನೆಯ ರಾಜಬಲಕ್ಕಿಂತ 'ಮಹಾಮನೆ'ಯ ಜಲಬಲ ಹೆಚ್ಚಾದಷ್ಟು, ಬಿಜ್ಜಳನ ಮುನಿಸಿಗೆ ಕಾರಣವಾಯ್ತು ಎಂಬುದನ್ನು ಕಂಡುಕೊಂಡ ನಾಟಕಕಾರರು ಬಿಜ್ಜಳನ ಪಾತ್ರದ ಮೂಲಕವೇ ಹೇಳಿಸಿದ್ದಾರೆ. "ಅರಮನೆಯ ಎದುರು ಮಹಾಮನೆ ಎದ್ದಾಗಲೇ ನೀನು ನನ್ನಿಂದ ದೂರವಾದೆ ಬಸವಣ್ಣ"[೩] ಎಂದು ಬಿಜ್ಜಳ ಹೇಳುವಲ್ಲಿ 'ಮಹಾಮನೆ'ಯನ್ನು ಬಿಜ್ಜಳ ಅರಮನೆಯ ಪ್ರತಿಸ್ಪರ್ಧಿಯಾಗಿ ನೋಡಿದ್ದೇ ಬಸವಣ್ಣನವರು ಕಲ್ಯಾಣದಲ್ಲಿ ಕಾಯಕ ದಾಸೋಹ ಮುಂತಾದ ಮೌಲ್ಯಗಳೊಂದಿಗೆ ಮಾಡುತ್ತಿದ್ದ ಪರಿವರ್ತನೆಯ ಬಗ್ಗೆ ಅನುಮಾನ ಮೂಡಿತು ಎಂಬುದನ್ನು ಪ್ರಕಟಪಡಿಸಿದಂತಾಗಿದೆ. ಇದಕ್ಕೆ ಮುನ್ಸೂಚನೆ ಎಚ್.ಎಸ್.ಶಿವಪ್ರಕಾಶರ ಮಹಾಚೈತ್ರದಲ್ಲೂ ಕಾಣಸಿಗುತ್ತದೆ. ಬಸವಣ್ಣನೊಂದಿಗೆ ಬೇಟೆಗೆಂದು ಹೋದಾಗಿನ ಸನ್ನಿವೇಶದಲ್ಲಿ, ಒಂದು ಸೀತಾಫಲಗಿಡವನ್ನು ಸುತ್ತಿಕೊಂಡಿದ್ದ

ಬಳ್ಳಿಯನ್ನು ಕಂಡು "ಪ್ರಭು ಈ ಬಳ್ಳಿ ತನಗೆ ಆಶ್ರಯಕೊಟ್ಟ ಗಿಡವನ್ನೇ ಒಂದು ದಿನ ಸಾಯಿಸುತ್ತದೆ" ಎಂದು ಬಸವಣ್ಣನಾಡಿದ ಮಾತನ್ನು ನೆನಪಿಸಿಕೊಳ್ಳುತ್ತಾನೆ. "ಅವನೇ ಆ ಬಳ್ಳಿ ಎನ್ನುವುದು ಗೊತ್ತಾಗಲಿಲ್ಲ" ಎಂದು ಉದ್ಗಾರ ತೆಗೆಯುವ ಮೂಲಕ ಬಸವಣ್ಣನ ಜನಪ್ರಿಯತೆಯೇ ಬಿಜ್ಜಳನೊಳಗಿನ ಅನುಮಾನಕ್ಕೆ ಕಾರಣವಾಗಿ ಕಲ್ಯಾಣಕ್ಕೆ ಎರವಾಯಿತು.

ಪ್ರಸ್ತುತ ನಾಟಕಗಳು ತಮ್ಮದೇ ಆದ ವೈಶಿಷ್ಟ್ಯತೆಯಿಂದ ಕೂಡಿದ್ದು ಇವುಗಳ ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ. 'ಸಂಕ್ರಾಂತಿ' ನಾಟಕದಲ್ಲಿ ಉಜ್ಜನಂಥವನು ಬಸವಣ್ಣನ ತತ್ತ್ವವನ್ನು ಮೌನದಲ್ಲೇ ವಿರೋಧಿಸುವುದು, ಬಸವಣ್ಣನಿಗೆ ಸೋಲು-ಬಿಜ್ಜಳನಿಗೆ ಗೆಲುವು" ಪ್ರಾಪ್ತಿಯಾಗುತ್ತದೆ. 'ಹೀಗೆ ಕೃತಿ ತನ್ನೊಡಲಲ್ಲಿ ಆಧುನಿಕ ವೈಚಾರಿಕತೆಯನ್ನು ಕಲಾಕುಶಲತೆಯನ್ನು ತುಂಬಿಕೊಂಡಿರುವಾಗಲೂ ಒಟ್ಟಾರೆಯಾಗಿ ಪ್ರತಿಗಾಮಿಯಾಗಿಬಿಡುತ್ತದೆ"[೩] ಇಲ್ಲಿ ಲಂಕೇಶರು ಬಸವಣ್ಣನವರನ್ನು ಆದರ್ಶೀಕರಿಸದೆ, ಬಿಜ್ಜಳನನ್ನು ವೈಭವೀಕರಿಸದೆ, ಸಮಾನ ಪಾತಳಿಯಲ್ಲಿ ಅಂದಿನ ಸೋಲುಗೆಲುವು ಇಂದಿಗೂ ಅನ್ವಯವಾಗುವುದನ್ನು ದಾಖಲಿಸುತ್ತಾರೆ. 'ನಾಶದಲ್ಲಿ ನವಸೃಷ್ಟಿ'ಯ ಆಶಯ ಹೊತ್ತ 'ಮಹಾಚೈತ್ರ' ನಾಟಕ ಬಸವಯುಗದ ಸಾಂಸ್ಕೃತಿಕ ಬಿಕ್ಕಟ್ಟುಗಳ ಮೂರ್ತತೆಗೆ ಉತ್ತಮ ಉದಾಹರಣೆಯಾಗಿದೆ. 'ತಲೆದಂಡ'ವು ಇವೆರಡಕ್ಕಿಂತ ವಿಭಿನ್ನವಾಗಿದ್ದು ವಿಶಿಷ್ಟವಾಗಿದೆ. "ಹನ್ನೆರಡನೆ ಶತಮಾನದ ಕ್ರಾಂತಿಯನ್ನು ಮಾತ್ರವಲ್ಲ ಕಳೆದ ಎರಡು ದಶಕಗಳ ಭಾರತದ ರಾಜಕಾರಣವನನ್ನು ಮತ್ತು ಭಯೋತ್ಪಾದಕ ಚಟುವಟಿಕೆಗಳ ಮೂಲ ನೆಲೆಯನ್ನು ವಿವರಿಸುವ ಧ್ವನಿಶಕ್ತಿಯನ್ನು ಪಡೆದಿದೆ"[೪] ಎಂಬ ವಿದ್ವಾಂಸರ ಮಾತನ್ನು ಒಪ್ಪಬಹುದಾಗಿದೆ. 'ಶಿವರಾತ್ರಿ' ನಾಟಕದಲ್ಲಿ ಬಿಜ್ಜಳನು ತನ್ನ ಸ್ಥಿತಿಯನ್ನು ಮೀರಲಾಗದ್ದನ್ನು ಧ್ವನಿಸುತ್ತಾರೆ. ಕಂಬಾರರಲ್ಲಿ ಕವಿ ನಾಟಕಕಾರ ಇವರಿಬ್ಬರೂ ಏಕತ್ರಗೊಂಡಿರುವುದನ್ನು ಇಲ್ಲಿ ಗಮನಿಸಬಹುದು. ಬಸವಣ್ಣ-ಬಿಜ್ಜಳರ ಬಿರುಕಿಗೆ ಒಂದು ಸ್ಪಷ್ಟತೆಯನ್ನು ನೀಡಿದ್ದು ತನ್ನದೇ ವೈಶಿಷ್ಟ್ಯತೆಯನ್ನು ಸಹಜವಾಗಿಯೆ ಮೆರೆದಿದೆ. 'ನಾನೇ ಬಿಜ್ಜಳ'ವಂತೂ ಸಾಮಾನ್ಯ ಜನಜೀವನದೊಳಗೊಂದು ನಾಟಕವಾಡಿಸುವುದರ ಮೂಲಕವೇ ಇತಿಹಾಸವನ್ನು ದರ್ಶಿಸಿರುವುದು ವಿಶೇಷವಾಗಿ ಗಮನಸೆಳೆಯುತ್ತದೆ.

ಹೀಗೆ ಈ ಐದೂ ನಾಟಕಗಳು ಪ್ರತಿಭೆ ಕಾಲ ಪ್ರಭಾವ ಉದ್ದೇಶಗಳ ಕಾರಣವಾಗಿ ಒಂದೇ ವಸ್ತುವಿನ ಹಿನ್ನೆಲೆಯಲ್ಲಿ ಸೃಜನೆಗೊಂಡಿದ್ದರೂ ತಮ್ಮ ವಿಭಿನ್ನತೆ ಹಾಗೂ ವೈಶಿಷ್ಟ್ಯತೆಯನ್ನು ಮೆರೆದಿವೆ. ವಸ್ತು ಒಂದೇ ಆಗಿರುವುದರಿಂದ ವೈವಿಧ್ಯಗಳೊಳಗೂ ಸಾಮ್ಯತೆ ಇರುವುದನ್ನು ಗಮನಿಸಲಾಗಿದೆ. ಇನ್ನೂ ಹೆಚ್ಚು

ಅಧ್ಯಯನ ಮಾಡಲು ಯೋಗ್ಯವಾದುವುಗಳಾಗಿವೆ. ಅಚ್ಚರಿಯ ಸಂಗತಿಯೆಂದರೆ ಹೊಸಗನ್ನಡದ ಪ್ರಮುಖ ಲೇಖಕರೂ ನಾಟಕಕಾರರೂ ಆದ ಇವರ ಪ್ರತಿಭೆ ಹನ್ನೆರಡನೇ ಶತಮಾನದ ಬಸವಪ್ರಣೀತ ಶರಣಚಳವಳಿಯನ್ನು ಏಕಪ್ರಕಾರವಾಗಿ ಸೆಳೆದರೂ ನಾಟಕಕೃತಿಯಾಗಿ ಅರಳುವಾಗ ವಿವಿಧತೆ ಪಡೆದಿದೆ ಎಂಬುದು. ಈ ಸಂಪ್ರಬಂಧದಲ್ಲಿ ಶರಣ ಚಳವಳಿಯ ಹಿನ್ನೆಲೆಯನ್ನು ಮೊದಲು ಮನಗಂಡು ನಂತರ ಈ ಐವರೂ ನಾಟಕಕಾರರ ಪ್ರತಿಭಾ ವಿಶ್ಲೇಷಣೆ ಮಾಡಿ ಅವರ ಪ್ರತಿಭೆಯಿಂದ ಯಾವ ರೀತಿಯ ನಾಟಕ ಕೃತಿ ಬರಬಹುದೆಂಬ ನಿರೀಕ್ಷೆಯನ್ನು ಸೂಚಿಸಲು ಪ್ರಯತ್ನಿಸಲಾಗಿದೆ. ಶರಣ ಚಳವಳಿಯ ಹಿನ್ನೆಲೆಯಲ್ಲೇ ಐದು ನಾಟಕಗಳನ್ನು **ಕಾಯಕ, ನಿಷ್ಠೆ, ಅಸಂಗ್ರಹತತ್ತ್ವ, ಪ್ರತಿಲೋಮ ವಿವಾಹ** ಮೊದಲಾದ ಶರಣ ಚಳವಳಿಯ ತತ್ತ್ವಗಳ ನೆಲೆಯಲ್ಲಿ ತೌಲನಿಕವಾಗಿ ಈ ಸಂಪ್ರಬಂಧದಲ್ಲಿ ಅಧ್ಯಯಿಸಲಾಗಿದ್ದು, ಇನ್ನೂ ವಿಸ್ತೃತ ಅಧ್ಯಯನವನ್ನು ಬಯಸುತ್ತದೆ ಎಂಬುದು ನನ್ನ ಮನೀಷೆಯಾಗಿದೆ.

ಅಡಿಟಿಪ್ಪಣಿಗಳು

೧. ಎಲ್.ಎಸ್.ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ ಚರಿತ್ರೆ, ಪು. ೨೦೮.

೨. ಗಿರೀಶ್ ಕಾರ್ನಾಡ್ : ಶಿವರಾತ್ರಿ (ಮುನ್ನುಡಿಯಲ್ಲಿ)

೩. ಡಾ. ಕೆ.ಮರುಳಸಿದ್ದಪ್ಪ, ಆಧುನಿಕ ಕನ್ನಡ ನಾಟಕಗಳು, ಪು. ೨೦೬.

೪. ಅದೇ, ಪು. ೩೯೩.

ಪರಾಮರ್ಶನ ಗ್ರಂಥಗಳು

೧. ಗ್ರಂಥಸೂಚಿ

೧. ಕಲ್ಯಾಣ ಕ್ರಾಂತಿ : ಹಿಂದು ಮುಂದು, ಡಾ. ಎಚ್.ತಿಪ್ಪೇರುದ್ರಸ್ವಾಮಿ, ಪ್ರ: ಚಿತ್ತರಸಿ ಶ್ರೀವಿಜಯ ಮಹಾಂತೇಶ್ವರ ಧರ್ಮಪ್ರಸಾರಕ ಮಂಡಲಿ, ಇಲ್‌ಕಲ್, ೧೯೮೪.

೨. ಆಧುನಿಕ ಕನ್ನಡ ನಾಟಕ : ಡಾ. ಕೆ.ಮರುಳಸಿದ್ದಪ್ಪ, ಪ್ರ: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ೧೯೭೮.

೩. ಬಸವಸಾಹಿತ್ಯದರ್ಪಣ, ಭಾಗ–೧: ಎಸ್.ಆರ್.ಗುಂಜಾಳ, ಪ್ರ: ಬಸವ ಸಮಿತಿ: ಬೆಂಗಳೂರು, ೧೯೬೭.

೪. ಸಮಗ್ರ ವಿಮರ್ಶೆ, ಭಾಗ–೧ : ಡಾ. ಗಿರಡ್ಡಿ ಗೋವಿಂದರಾಜ (೨೦೦೧), ಪ್ರ: ಸ್ವಪ್ನ ಬುಕ್ ಹೌಸ್, ಬೆಂಗಳೂರು.

೫. ಹೊಸಗನ್ನಡ ಸಾಹಿತ್ಯ ಚರಿತ್ರೆ : ಎಲ್.ಎಸ್.ಶೇಷಗಿರಿರಾವ್, ದ್ವಿತೀಯ ಆವೃತ್ತಿ, ೨೦೦೨, ಪ್ರ: ಅಂಕಿತ ಪುಸ್ತಕ, ಬೆಂಗಳೂರು.

೬. ಬಸವೇಶ್ವರ ವಚನ ದೀಪಿಕೆ: ಡಾ. ಎಚ್.ತಿಪ್ಪೇರುದ್ರಸ್ವಾಮಿ, ಎರಡನೇ ಮುದ್ರಣ, ೨೦೦೪, ಪ್ರ: ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ: ಮೈಸೂರು.

೭. ನಾನೇ ಬಿಜ್ಜಳ : ಜಡಭರತ: ಪ್ರ: ಮನೋಹರ ಗ್ರಂಥಮಾಲಾ, ಧಾರವಾಡ: ಎರಡನೇ ಮುದ್ರಣ, ೧೯೯೨.

೮. ಮಹಾಚೈತ್ರ, ಎಚ್.ಎಸ್.ಶಿವಪ್ರಕಾಶ್, ಮು: ಶ್ರೀ ರೇಣುಕ ಪವರ್ ಪ್ರೆಸ್, ಬೆಂಗಳೂರು, ೪ನೇ ಮುದ್ರಣ, ೧೯೯೨.

೯. ಸಂಕ್ರಾಂತಿ: ಪಿ.ಲಂಕೇಶ, ಐದನೇ ಮುದ್ರಣ (೧೯೮೭), ಪತ್ರಿಕೆ ಪ್ರಕಾಶನ, ಬೆಂಗಳೂರು.

೧೦. ತಲೆದಂಡ, ಗಿರೀಶ್ ಕಾರ್ನಾಡ್, ಪ್ರ: ಮನೋಹರ ಗ್ರಂಥಮಾಲಾ, ಧಾರವಾಡ, ಎಂಟನೇ ಮುದ್ರಣ, ೨೦೧೨.

೧೧. ಶಿವರಾತ್ರಿ, ಚಂದ್ರಶೇಖರ ಕಂಬಾರ, ಪ್ರ. ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು, ೨೦೧೧.

೧೨. ವಚನಗಳಲ್ಲಿ ಶೈವ ಹಾಗೂ ವೀರಶೈವ: ಡಾ. ಜಯಶ್ರೀ ದಂಡೆ ಪ್ರ. ಕವಿಮಾರ್ಗ ಪ್ರಕಾಶನ, ೧೯೯೪.

೨. ಲೇಖನ ಸೂಚಿ

೧. ಅನಕೃ ಅವರ ಸಮಗ್ರ ವೀರಶೈವ ಸಾಹಿತ್ಯ, ಅನಕೃ, ಸಾಗರ್ ಪ್ರಕಾಶನ, ೨೦೦೮.

೨. ಸಾಲುದೀಪಗಳು : ಸಂ: ಜಿ.ಎಸ್.ಸಿದ್ಧಲಿಂಗಯ್ಯ ಮತ್ತು ಎಂ.ಎಚ್.ಕೃಷ್ಣಯ್ಯ, ಪ್ರ: ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಎರಡನೇ ಮುದ್ರಣ, ೨೦೦೧.

೩. ಬಸವಮಾರ್ಗ, ಸಂಪುಟ–೧೧, ಸಂ. ಎಂ.ಎಂ.ಕಲ್ಬುರ್ಗಿ: ಕನ್ನಡ ಅಧ್ಯಯನ ಪೀಠ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೦.

೪. ಬಸವಧರ್ಮ – ವಿಶ್ವಧರ್ಮ, ಪ್ರಧಾನ ಸಂಪಾದಕರು, ಡಾ. ಎ.ರಂಗಸ್ವಾಮಿ, ಲೇಖಕರು: ದೇಜಗೌ, ಪ್ರ: ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, ೨೦೧೨.

೫. ವಚನಸಾಹಿತ್ಯ, ಡಾ. ಪಿ.ವಿ.ನಾರಾಯಣ, ಪ್ರ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ೧೯೯೭.

೬. ಗಿರೀಶ್ ಕಾರ್ನಾಡರ ಸಮಗ್ರ ನಾಟಕಗಳ ಸಮೀಕ್ಷೆ: ಡಾ. ರಾಜು ಹೆಗಡೆ: ಪ್ರ. ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೭.

೭. ಗಿರೀಶ್ ಕಾರ್ನಾಡ್ : ಮೀರಾಮೂರ್ತಿ, ಸಂ. ಪ್ರಧಾನಗುರುದತ್ತ, ಪ್ರ: ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೨೦೦೭.

೮. ಸಾಹಿತ್ಯ ಸಂದರ್ಭ, ಟಿ.ಪಿ.ಅಶೋಕ, ಪ್ರ. ಅಕ್ಷರ ಪ್ರಕಾಶನ: ಹೆಗ್ಗೋಡು, ೧೯೯೧.

೯. ಕನ್ನಡ ನಾಟಕ ವಿಮರ್ಶೆ: ಡಾ. ಕೆ.ಮರುಳಸಿದ್ದಪ್ಪ: ಪ್ರ: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ೨೦೦೨.

೧೦. ಸಮಗ್ರ ಗದ್ಯ–೧, ಜಿ.ಎಸ್.ಶಿವರುದ್ರಪ್ಪ, ಪ್ರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ನಾಲ್ಕನೇ ಮುದ್ರಣ, ೨೦೦೯.

೧೧. ಶರಣರ ಅನುಭಾವ ಸಾಹಿತ್ಯ, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಿವಿಕೆ ಮೂರ್ತಿ, ಮೈಸೂರು, ೧೯೬೩.

೧೨. ಸಾಹಿತ್ಯಪರಿಸರ, ಶಿವರಾಮಯ್ಯ, ವೈಚಾರಿಕ ಪುಸ್ತಕಮಾಲೆ, ಚಿಕ್ಕಮಗಳೂರು, ೧೯೮೩.

೧೩. ಸಾತ್ವಿಕಪಥ, ಜಿ.ಎಸ್.ಅಮೂರ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೭೫.

೧೪. ಕರ್ನಾಟಕ ಶರಣ ಕಥಾಮೃತ, ಡಾ. ಎಚ್.ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೭೬.

೧೫. ಸಾಹಿತ್ಯ ವಿಮರ್ಶೆ, ಯು.ಆರ್.ಅನಂತಮೂರ್ತಿ, ೧೯೯೪.

೧೬. ಪಿ.ಲಂಕೇಶ್, ಹಾಲತಿ ಸೋಮಶೇಖರ್, ೨೦೦೨.

೧೭. ಎಲ್.ಎಸ್.ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯಚರಿತ್ರೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ೧೯೭೫.

೧೮. ಕೆ.ಮರುಳಸಿದ್ದಪ್ಪ, ಆಧುನಿಕ ಕನ್ನಡ ನಾಟಕ, ಲಿಪಿಪ್ರಕಾಶನ, ಬೆಂಗಳೂರು, ೧೯೯೩.

೩. ಪತ್ರಿಕಾ ಸೂಚಿ

೧. ಪ್ರಸಾದ (ದ್ವೈಮಾಸಿಕ) ಸಂಪುಟ – ೨೪, ಸಂಚಿಕೆ–೦೨, ಸಂ. ಮಲೆಯೂರು ಗುರುಸ್ವಾಮಿ, ಪ್ರ. ಜೆ.ಎಸ್.ಎಸ್.ಮಹಾವಿದ್ಯಾಪೀಠ, ಮೈಸೂರು, ಮಾರ್ಚ್–ಏಪ್ರಿಲ್, ೨೦೦೮.

*****